ACC NO
018

1940

ಶಿವಾನುಭವ ಗ್ರಂಥಮಾಲಾ ನಂ. ೪೯

# ಹರಿಹರನ ರಗಳೆಗಳು.

## ಭಾಗ—೭

ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ
ಬಿ. ಎ. ಎಲ್. ಎಲ್. ಬಿ.
ವಿಜಾಪುರ.

೧೯೪೦

ಬೆಲೆ— ೧೨ ಆಣೆ

( ಈ ಗ್ರಂಥದ ಎಲ್ಲ ಹಕ್ಕುಗಳನ್ನು ಗ್ರಂಥಕರ್ತರು ಕಾಯ್ದಿಟ್ಟುಕೊಂಡಿದ್ದಾರೆ. )

Acc No
018

ಗ್ರಂಥಾಲಯ
ಬಿ. ... ಇ. ಸಂಸ್ಥೆ
...ದ ಪಿ. ಪಿ. ಹ... ಂದ ಪದಾನ್ಯತೆ ...
ವಚನ ... ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ
... ಪೂ ...

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿರುವ
ಉಪಲೀಬುರುಜದ ಹತ್ತರ ತಮ್ಮ ೧೬೨೦ (ಅ) ನೇ
ಮನೆಯಲ್ಲಿ ಪ್ರಸಿದ್ಧಿಸಿದರು.

# ಪ್ರಸ್ತಾವನೆ.

ಈ ಗ್ರಂಥದಲ್ಲಿ ಅನುಕ್ರಮಣಿಕೆಯಲ್ಲಿ ವಿಷಂಸಿದಂತೆ ೧೦ ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಇವುಗಳೆಲ್ಲವೂ ಮಹಾಕವಿಯಾದ ಹರಿಹರನಿಂದ ರಚಿತವಾದವುಗಳು. ಇವುಗಳಲ್ಲಿ ಕೆಲವು ರಗಳೆಗಳು ಚಿಕ್ಕವಾಗಿದ್ದರೂ ಅವುಗಳೆಲ್ಲವೂ ಕವಿಯ ಕವಿತಾ ಸಾಮರ್ಥ್ಯವನ್ನು ಚನ್ನಾಗಿ ತೋರಿಸುತ್ತವೆ. ಕೆಲವುಗಳಲ್ಲಿ ಹರಿಹರನ ಭಕ್ತಿಭಾವವು ತುಂಬಿ ತುಳುಕುತ್ತದೆ. ಪ್ರಾರ್ಥನೆಯ ರಗಳೆ, ಸಂಸಾರ ವ್ಯಾಮೋಹ ನಿರಸನ ರಗಳೆ, ಇವುಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಭೃಂಗೀಶ್ವರನ ರಗಳೆಯಿಂದ ಹರಿಹರನಿಗೆ ನೃತ್ಯಕಲೆಯು ಚನ್ನಾಗಿ ಗೊತ್ತಿದ್ದಂತೆ ತೋರುತ್ತದೆ. ಪಂಪಾಕ್ಷೇತ್ರದ ರಗಳೆಯಲ್ಲಿ ಪೂರ್ವಕಾಲದಲ್ಲಿ ಅಂದರೆ ವಿಜಯನಗರವು ಸ್ಥಾಪಿತವಾಗುವ ಪೂರ್ವದಲ್ಲಿ ಈ ಕ್ಷೇತ್ರವು ಹೇಗಿತ್ತೆಂಬುದು ಗೊತ್ತಾಗುತ್ತಿದೆ. ಉಳಿದ ರಗಳೆಗಳಿಂದ ಕವಿಯ ವರ್ಣನಾಶಕ್ತಿಯು ಎಷ್ಟು ಮಿಗಿಲಾಗಿದೆಂಬುದು ತಿಳಿಯುತ್ತಿದೆ. ಈ ವಿಷಯದಲ್ಲಿ ಮಲುಹಣನ ರಗಳೆಯು ಉತ್ತಮ ಉದಾಹರಣೆಯಾಗಿದೆ.

ಈ ರಗಳೆಗಳನ್ನು ಅಚ್ಚುಹಾಕುವಲ್ಲಿ ತುಮಕೂರು ಜಿಲ್ಲಾ ದಂಡಿನ ಶಿಬಿರದಲ್ಲಿಯ ಶಿ. ಮೂ. ಕಲ್ಲಯ್ಯನವರಲ್ಲಿ ದೊರೆತ ಒಂದು ಪ್ರತಿ ಮತ್ತು ಹುಬ್ಬಳ್ಳಿಯಲ್ಲಿ ಶ್ರೀ ಜಗದ್ಗುರು ಗುರುಸಿದ್ಧ ಮಹಾಸ್ವಾಮಿಗಳವರಲ್ಲಿಯ ಪ್ರತಿ ಇವುಗಳು ನಮಗೆ ಬಹಳ ಸಹಾಯವಾದವು. ಆದರೆ ಅನುಕ್ರಮಣಿಕೆ ೪, ೫, ೬, ೭, ೮ ಈ ರಗಳೆಗಳು ಒಂದೇ ಒಂದು ಹಸ್ತ ಲಿಖಿತ ಗ್ರಂಥ ಅಂದರೆ ದಂಡಿನ ಶಿವರದ ಗ್ರಂಥದ ಸಹಾಯದಿಂದ ಸಿದ್ಧ ಮಾಡಲ್ಪಟ್ಟಿದೆ. ಅವುಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಶುದ್ಧವಾಗಿ ಅಚ್ಚುಹಾಕಲು ಪ್ರಯತ್ನಿಸಿದ್ದೇವೆ. ಆದರೆ ಅಶುದ್ಧವಾದ ಓಳಿಗಳು ಅಲ್ಲಲ್ಲಿ ದೊರಯಬಹುದು. ಇದಕ್ಕೋಸ್ಕರ ವಾಚಕರು ನಮ್ಮನ್ನು ಕ್ಷಮಿಸಬೇಕೆಂದು ವಿನಂತಿ ಇದೆ.

ವಿಜಾಪುರ
೨೦—೧೦—೧೯೪೦

ಫ. ಗು. ಹಳಕಟ್ಟಿ.
ಸಂಪಾದಕ

## ಅನುಕ್ರಮಣಿಕೆ.


೧. ಅತಿಭಕ್ತನ ರಗಳೆ ... ... ೧

೨. ಮಲುಹಣನ ರಗಳೆ ... ... ೮

೩. ಭೃಂಗೀಶ್ವರನ ರಗಳೆ ... ... ೩೧

೪. ಲಿಂಗಾರ್ಚನೆಯ ರಗಳೆ ... ... ೪೩

೫. ಪ್ರಾರ್ಥನೆಯ ರಗಳೆ ... ... ೪೯

೬. ಹಂಪೆಯ ರಗಳೆ ... ... ೫೩

೭. ಪಂಪಾಕ್ಷೇತ್ರದ ರಗಳೆ ... ... ೫೭

೮. ಸಂಸಾರವ್ಯಾಮೋಹನಿರಸನ ರಗಳೆ ... ... ೬೩

೯. ಚಂಡೇಶಪಿಳ್ಳೆಯ ರಗಳೆ ... ... ೭೩

೧೦. ಅಮರನೀತಿಯ ರಗಳೆ ... ... ೮೫


# ಹರಿಹರನ ರಗಳೆಗಳು.

### ಭಾಗ ೭.

## ಅತಿಭಕ್ತನ ರಗಳೆ.

ಕಂದ॥ ನುತಹರಿವಿರಿಂಚಿವಂದ್ಯಂ
ವಿತತ ಯಶೋರಾಶಿಯೆನಿಪ ಪಂಪಾನಾಥಂ।
ಅತಿಭಕ್ತರ ಭಕ್ತಿಗೆ ತಾ
ನತಿಶಯ ವರವಿತ್ತು ಮೆರೆವನೀ ಧರೆಯರಿಯಲು॥

### ರಗಳೆ.

ಶ್ರೀಕಾವೇರೀ ನದಿಯಿಂದೊಪ್ಪುವ
ಜೇಕಾದುದನೀವುತಲಿಂತೊಪ್ಪುವ
ನಾನಾ ಬೆಳೆಗಳ ಸಂಭ್ರಮದಿಂದಂ
ಏನೆಂಬೇಂ ಕದಳಿಯ ಬಹು ತೋಂಟವ
ರಸದಾಳಿಯ ಕಬ್ಬಿನ ಬಹು ಬೆಳೆಯಿಂ
ಕುಸುಮದ ತೋಂಟದ ಹಬ್ಬಿನ ಬೆಳೆಯಿಂ
ಎಲ್ಲಾ ಎಡೆಯೊಳು ಶಿವಭವನಂಗಳು
ಬಲ್ಲಿದ ಧೊರೆಗಳ ಘನಮಾಡಂಗಳು

ಇಂತೊಪ್ಪುವ ಪಟ್ಟಣಕಧಿನಾಥನು
ಕಂತುಹರನ ಸೇವೆಯಲತ್ಯಧಿಕನು
ಭಾನುಕುಲದ ಚೋಳಂ ಎಸೆದಿರ್ಪಂ
ಮಾನಿತ ಜನದಿಂ ತಾನೊಲಿದಿರ್ಪಂ

ಅದರೊಳಗೊಂದು ಪುರಂ ರಂಜಿಸುವುದು
ಸದಮಳಸುಜ್ಞಾನಿಗಳಿಂದೆಸೆದುದು
ಮಣಿಗಳ ಮಧ್ಯದ ಚಿಂತಾಮಣಿಯೆನೆ
ಕಣಿಗಳ ನಡುವಣ ಪರುಷದ ಕಣಿಯೆನೆ
ತರುಗಳ ಮಧ್ಯದ ಸುರತರುವಂದದಿ
ಗಿರಿಗಳ ಮಧ್ಯದ ಮೇರುವಿನಂದದಿ
ಏನೆಂಬೆನದಂ ಪೊಗಳಲ್ಬಾರದು
ಮಾನವ ರತ್ನಂಗಳಿಗದು ತೀರದು
ಬೇಡಿದವರ್ಗಂ ಬೇಡಿದನೀವುದು
ನಾಡೆ ತುರಗಕರಿರತ್ನವನೀವುದು
ಸೊಂಪಿನ ಗುಣ್ಪನದಾವಂ ಬಲ್ಲಂ
ಇಂಪಿನ ಕಡೆಯನದಾವಂ ಬಲ್ಲಂ
ವರಲಕ್ಷ್ಮಿಗೆ ತವರ್ಮನೆ ಎನಿಸಿರ್ಪುದು
ಚರತದಿನಾಪುರ ಸಾಗರವೆನಿಪುದು
ಪದಿನೆಂಟುಂ ದೇಶದ ವಿಭವಂಗಳ
ನೊದವಿಸಿ ತನ್ನೊಳ್ತೋರಿ ಜಗಂಗಳ
ಬಗೆಯುದು ಧರೆಗದ್ಭುತದರ್ಪಣವೆನೆ
ಮಿಗೆ ಶೋಭಿಸುವುದುಚಿತಮಿದೆಂದೆನೆ

ಅದರ ಸಮೀಪದೊಳೊಂದುಂ ಹೊಳೆಯೊಳು
ಸದಮಳ ಮತ್ಸ್ಯಗಣ ವೈಭವದೊಳು
ಮೆರೆದಿರ್ಪುದು ಕೈವರ್ತರ ಪುರವದು
ಉರೆ ಸೊಂಪಿಂದಂ ಘನತೇಜಕ್ಕದು
ಬಲೆಗಾರರು ತಾವೆಲ್ಲಂ ಕೂಡುತ
ಜಲಚರವೆಲ್ಲಂ ತಂದುಂ ಮಾರುತ
ದೊಡ್ಡಹ ತೋರಹ ಮೀನ್ಗಳು ಸಿಕ್ಕಲು
ಅಡ್ಡ ಹೊರೆಗಳಂ ಹೊತ್ತು ಬರುತ್ತಲು
ಮೀನ್ಗಳ ಮಾರುವ ಪಸರಕೆ ಹೋಗಲು
ಪೊಂಗಳನೀಸಿಕೊಳುತ್ತಂ ಕುಡಲು
ಇಂತು ಮೀನನುರೆ ಮಾರುತ್ತವರುಂ



ಸಂತೋಷದಿ ಧನ ಹೆಚ್ಚುತ್ತವರುಂ
ಧೀವರರೆಲ್ಲಂ ಬೀಸಿದ ಬಲೆಯೊಳು
ಪವಣ್ಣಿಸೆ ಬಲು ಮತ್ಸ್ಯಂ ಬಲೆಯೊಳು
ಸಿಕ್ಕಿ ಬರಲು ಕೊಬ್ಬಿರಿದಾಡುತ್ತಿರೆ
ತಕ್ಕ ತಕ್ಕ ಬೆಲೆ ಹೆಚ್ಚಿ ಬರುತ್ತಿರೆ

ಅವರೊಳಗೋರ್ವಂ ಸತ್ಯಂ ನಿತ್ಯಂ
ಹವಣಿಸಬಾರದ ಮುಕ್ತಂ ಯುಕ್ತಂ
ಭೂಮಿ ಮುಸುಂಕಿದ ನಿಧನದ ತೆರದಿಂ
ತಾಮಸ ಮುಸುಕಿದ ಸತ್ವದ ತೆರದಿಂ
ಮೆರವುದೆನಲ್ಕಾ ಪುರದೊಳಗೋರ್ವಂ
ಕರಿಕಂಠನ ಪದಭಕ್ತನದೋರ್ವಂ
ಶಿವಪೂಜಾಪರನತಿಗುಣಯುಕ್ತಂ
ಭವಭಯ ರಹಿತಂ ಕಾಲವಿಮುಕ್ತಂ
ಅತಿಭಕ್ತಂ ಪೆಸರಿಂದಾತಂ ಶಿವಶಿವ
ನುತ ದಾಸಕುಲಕ್ಕಧಿಕಂ ಶಿವಶಿವ
ಜಾತಿಗಾರರಂ ಕೂಡಿಕೊಳುತ್ತಂ
ಲೀಲೆಯಿಂದ ಮೀನ್ಗಳ ತೆಗೆವುತ್ತಂ
ಆ ಮೀನಂ ಮಾರಿದ ಬಹು ಧನದಿಂ
ಸೋಮಧರನ ಭಕ್ತರನತಿ ಮುದದಿಂ
ತೃಪ್ತಿಬಡಿಸುತಂ ಸುಖದಿಂದಿರುತಂ
ಅಷ್ಟಮೂರ್ತಿ ಶಿವನಂ ಪೂಜಿಸುತಂ
ಮೊದಲೊಳು ಸಿಕ್ಕಿದ ಮೀನಂ ಬಿಡುವಂ
ಮದನಹರಗೆ ಪ್ರಿಯಾರ್ಥದಿ ಬಿಡುವಂ
ಭೇದವಿಲ್ಲದರ್ಥಿಯೊಳು ಬಿಡುತ್ತಂ
ಉಳಿದಧಿಕಾ ಮೀನಂ ಮಾರುತ್ತಂ
ಮಣಿಮಯಮಪ್ಪಾ ಮೀನಾದೊಡೆಯುದ
ಎಣಸದೆ ಬಿಡುವಂ ಭರ್ಗಂಗೆಂದದ
ಇಂತು ದೃಢವ್ರತನಾಗುತಲಿರುತಿರೆ

ಮುಂತೆ ಮೀನ್ಗಳುಂ ಸಿಕ್ಕದೆ ಇರುತಿರೆ
ಸಲವು ದಿನಂ ಪೋಗಲೊಂದು ದಿನಂ
ಛಲದತಿಭಕ್ತನ ಮುಂದೊಂದು ದಿನಂ
ತೋರವಪ್ಪ ಮೀನಾಗಲು ಸಿಕ್ಕಲು
ಚಾರರೆಲ್ಲರು ಮಿಗೆ ನೋಡಿಯು ಪೊಗಳಲು
ಭರ್ಗಂಗರ್ಪಿತವೆಂದದ ಬಿಡುತಿರೆ
ದುರ್ಗತಿ ದೂರಂ ಮೀನಂ ಬಿಡುತಿರೆ
ಮೀನಿನ ಮಾರಾಟಂ ಪೆರಪಿಂಗಲು
ಮೀನಿನ ಮಾರಿದ ವಿಭವಂ ಪಿಂಗಲು
ತನ್ನ ಕುಟುಂಬವದೆಲ್ಲಂ ಬೇಗನೆ
ಮುನ್ನವೆ ಬಡವಾಗುತ್ತಿರಲಾಗಂ
ಇಂತು ಪಸುವಿನಿಂ ಸತಿಪಿತ ಮಕ್ಕಳು
ಚಿಂತಿಸುತೆಲ್ಲರು ಏಳುಂ ದಿನದೊಳು
ಪಸಿವಂ ತಾಳದೆ ಮಕ್ಕಳು ಅಳುತಿರೆ
ನಸು ನಗೆ ಮೊಳೆಯಲು ಧೈರ್ಯದೊಳಿರುತಿರೆ
ಮತ್ತೆ ಬೀಸಲುಂ ಸಿಕ್ಕದೆ ಇರುತಿರೆ
ಚಿತ್ತದೊಳಗೆ ಧೈರ್ಯಂ ತುಂಬುತ್ತಿರೆ
ಇಂತು ಮೀನ್ಗಳುಂ ನಿಚ್ಚಂ ಸಿಕ್ಕದೆ
ಸಂತತ ಶಿವಭಕ್ತಂ ತಾಂ ಕೊಂಕದೆ
ಈ ತೆರದಿಂ ಪಲಕೆಲವು ದಿನವಿರಲು

ಭೂತೇಶನು ಭಕ್ತನ ಮನ ನೋಡಲು
ಮತ್ತೊಂದು ದಿನಂ ಬಲೆಯಂ ತರುತಂ
ಚಿತ್ತದಿ ಶಂಕರ ಶಶಿಧರ ಎನುತಂ
ಹೊಳೆಯ ತೀರದಲಿ ಬಲೆಯಂ ಬೀಸಲು
ನಲಿನಲಿವುತ್ತಂ ನೇಣಂ ಸೆಳೆಯಲು
ನವರತ್ನದಿ ನಿರ್ಮಿತವಾಗೊಪ್ಪುವ
ನವನವಕಾಂತಿಗಳಿಂ ಮಡಿಯಾಗಿಹ
ಈರೇಳ್ಭುವನದ ಬೆಲೆ ಎಂದೆನಿಸುವ
ಚಾರು ಮೇರು ತಟ ಸನ್ನಿಭವೆನಿಸುವ



ಮೀನನೊಂದನೀಶಂ ಕೆಡವುತ್ತಿರೆ
ತಾನೆ ತೆಗೆಯಲ್ಕಾರದಿರುತ್ತಿರೆ
ಪಲಕೆಲ ಕೈವರ್ತರನುರೆ ನೋಡುತೆ
ಬಲುಪಿಂದದನುಂ ತಾನುರೆ ತೆಗೆವುತೆ
ಇರಲೊಯ್ಯನೆ ತಡಿಯೆಡೆಯೋಳ್ಪರಿದಿರೆ
ವರ ಕಾಯದ ಬೆಳಗುಗಳಿಂದಿರುತಿರೆ
ಅರ್ಣವ ತಟಘನ! ಮತ್ಸ್ಯವದಾಗಳು
ವರ್ಣವಿಚಿತ್ರದಿ ಒಪ್ಪಲ್ಕಾಗಳು
ದಿನಮಣಿ ಉದಯಿಸಿದಂದದೊಳಿರುತಿರೆ

ಜನವೆಲ್ಲಂ ಬೆರಗಾಗುತ್ತಿರುತಿರೆ
ಭೀಮನಿಗರ್ಪಿತವೆಂದದನಾಗಳು
ನೇಮವಿದೆನುತಂ ಬಿಟ್ಟನು ಆಗಳು
ನೋಡೆಲ್ಲರು ಬಿಡಬಹುದೇ ಶಿವಶಿವ
ಆಡಂಬರದಿಂದೊಪ್ಪುವ ಮತ್ಸ್ಯವ
ಎನೆ ಮನದೊಳಗಂ ಬಯಕೆಯದಿಲ್ಲದೆ
ಘನಮಹಿಮಗೆ ಪ್ರೀಯಾರ್ಥವಿದೆಂದೆ
ಕೋಡದೆ ಕೊಂಕದೆಯಳಲದೆ ಬಳಲದೆ
ಬಾಡದೆ ಮನದೊಳಗಾಸೆಯೊಳಾಳದೆ
ಮತ್ತಂ ಬಲೆಯಂ ಬೀಸಿಯೆ ತೆಗೆಯಲು
ಚಿತ್ರದ ಹೊಳಪಿನ ಮೀನುಂ ಬರಲುಂ
ಮೊದಲು ಶಿವಪ್ರಿಯವೆಂದೇ ಬಿಟ್ಟನು
ಅದು ಬಂದುದು ಇಂತೇಕಿದನೊಲ್ಲೆನು
ಆ ಕಡೆಯಿನ ಹೊಳೆಯಂ ತಾನೊಲ್ಲದೆ
ಜೋಕೆಯ ಕುಂದದೆ ಮನದೊಳು ನೋಯದೆ
ಇನ್ನುಂ ಬೀಸುವೆನಿಂತೀ ದೆಸೆಯೊಳು
ಹೊನ್ನಿನ ಬಣ್ಣದ ಮೀನುಂ ಬರಲುಂ
ಕಂಡು ಮನದೊಳುಂ ನೋವುತ ಸುಯ್ಯುತ
ಖಂಡ ಪರಶುವಿನ ಮೀನುಂ ಬಂದುದು
ಎಂದದನೊಲ್ಲದೆ ತಿರುಗಿಯೆ ಬಿಟ್ಟಂ

ಮುಂದುವರಿವ ಮನವನು ಇಂಬಿಟ್ಟಂ
ಮತ್ತೆ ಮತ್ತೆ ಬಲೆಯಂ ಬೀಸುತ್ತಿರೆ
ಸುತ್ತೆ ಹೊಳೆವುಯಾ ಮೀನೇ ಬರುತಿರೆ
ಬಂದರೆ ಬಿಡುವಂ ಹಾಕಲು ಬರುವುದು
ಸಂಜೆ ಪರಿಯಂತಂ ಬಿಟ್ಟರೆ ಬರುವುದು

ಮರುದಿನದುದಯದಿ ಹೊಳೆಗೈತಂದಂ
ಕರಿಕಂಠನ ನೆನಹಿಲಿ ಮನ ಸಂದಂ
ಬಲೆಯಂ ಬೀಸುತ ಗಮ್ಮನೆ ತೆಗೆಯಲು
ಹೊಳೆ ಹೊಳೆವಾ ಮೀನವೆ ಬರಲುಂ
ನೋಡುತ ಮನದೊಳು ಕೌತುಕವಾಗುತೆ
ಕೂಡೆ ಸುವರ್ಣದ ಮತ್ಸ್ಯಂ ಬರುತೆ

ಇನ್ನೊಮ್ಮೆಯು ತಾ ಬೀಸಿ ನೋಡಿದರೆ
ಮುನ್ನಿನ ಮತ್ಸ್ಯವೆ ಬಂದಿತ್ತಾದರೆ
ಎನ್ನ ಕೈಯ್ಯುಮಂ ಛೇದಿಸಿಕೊಂಜಿನು
ಇನ್ನು ಬಲೆಯನು ಬೀಸದ ಭಾಷೆಯು
ಎನುತ ಬಲೆಯನುಂ ಬೀಸಿಯೆ ತೆಗೆಯಲು

ಮನಸಿಜಹರನಾ ಬಲೆಯೋಳ್ಸಿಲುಕಲು
ದಶಭುಜ ಪಂಚಮುಖಂ ಫಣಿಕುಂಡಲ
ಎಸೆವ ಗಿರಿಜೆ ವೃಷಭೇಶ್ವರ ಸಹಿತಂ
ಭಕ್ತನ ಭಕ್ತಿಯ ಪಾಶದಿ ಸಿಲ್ಕುತ
ಅತ್ಯನುಪಮನಾ ಭಕ್ತಿಗೆ ಸಿಲ್ಕುತ
ನಿಜಂ ರೂಪಂದೋರಿದನಾ ಕ್ಷಣದೊಳು
ಅಜಹರಿ ಕಾಣದಭೇದ್ಯಂ ಧರೆಯೊಳು
ಸುರರು ಪುಷ್ಪವೃಷ್ಟಿಯ ನೆರೆ ಕರೆದರು
ವರ ಮುನಿರುದ್ರಾದಿಗಳುಂ ಬಂದರು
ದೇವದುಂದುಭಿ ಧ್ವನಿಗಳ್ಮೊಳಗಲು
ಭವ್ಯಗಣಂಗಳು ಮನದೊಳ್ಪೊಗಳಲು



ಅತಿಭಕ್ತಂ ಶಿವನಂ ಕಾಣುತ್ತಂ
ನುತಿಸುತೆ ಧರೆಯೊಳು ಸೈಗೆಡೆವುತ್ತಂ
ಪೊಡಮಟ್ಟೀಶನ ಕೆಲದೊಳ್ನಿಂದಿರೆ
ಮೃಡನೊಲವಿಂ ಸಂತಸದೋಳೊಂದಿರೆ
ದಿವ್ಯ ವಿಮಾನವು ಥಳಥಳಿಸುತ ಬರೆ
ಸೇವ್ಯಭಕ್ತನಂತದರೊಳಗಿರಿಸುತ
ರಜತಗಿರಿಗೆ ತಳೆರ್ದಾ ಸ್ಥಾನಿಕೆಯೊಳ್
ಗಜಚರ್ಮಾಂಬರ ಘನತರ ಕೃಪೆಯೊಳ್
ನಂದೀಶ್ವರನೊಡನುಂ ಪೇಳುತ್ತಂ
ಸಂದ ಗಣಂಗಳ ಕೂಡುಸುರುತ್ತಂ
ಎನ್ನರ್ಥಿಯನುಂ ಸಲಿಸಿದರುಂಟೇ
ಸ್ವರ್ಗದ ಮತ್ಸ್ಯವ ಬಿಟ್ಟವರುಂಟೇ
ಎಂದು ಪೊಗಳುತಂ ಗಣಪದವೀವುತ
ಚಂದದಿ ಮುಂಡಾಡುತ ಕೊಂಡಾಡುತ
ಮೆರೆದಿರ್ದಂ ಪಂಪಾಪುರದರಸಂ

ಕಂದ॥ ಖತಿಯಿಲ್ಲದ ಅತಿಭಕ್ತನು ।
ವಿತತೋನ್ನತಸ್ವರ್ಣಮಯದ ಮೀನಂ ಬಿಡುತಿರೆ ॥
ಪ್ರತಿರಹಿತಂ ಮೆಚ್ಚುತ್ತಂ ।
ಅತಿಶಯದ ಗಣಪದವನಿತ್ತ ಹಂಪೆಯ ದೇವಂ ॥

# ಮಲುಹಣನ ರಗಳೆ.

ಕಂದ॥ ಧಾರುಣಿಯೊಳ್ಮಲುಹಣನಂ
ಕಾರುಣ್ಯಾಕರನುದಾರವಾರುಧಿ ಮೆರೆದಂ ।
ಗೌರೀಕುಚಕುಂಕುಮಲಸಿ
ತೋರಸ್ಥಲನೆಮ್ಮ ಹಂಪೆಯ ವಿರೂಪಾಕ್ಷಂ ॥

## ರಗಳೆ.

ಶ್ರೀವಸುಮತೀವದನಮುಕುರವೆಂದೆನಿಸಿರ್ಪ
ಪಾವನಂ ಸಕಲ ದೇಶಕ್ಕೆ ತಾನೆನಿಸಿರ್ಪ
ಶಾರದಾದೇವಿ ಪ್ರಸನ್ನೆಯಾಗಿರುತಿರ್ಪ
ಚಾರುತರ ನೂತನಕಳಾವಿದರೊಳಿರುತಿರ್ಪ
ಊರೂರ್ಗೆ ತೀವಿದ ತಟಾಕನಿಕರಂಗಳಿಂ
ಊರೂರ್ಗೆ ಕಿಕ್ಕಿರಿದು ಕೊರ್ವಿದ ಬನಂಗಳಿಂ
ಬನದೊಳಗೆ ಸುಳಿತರ್ಪ ಕಸ್ತುರಿಮೃಗಂಗಳಿಂ
ಬಿನದದಿಂ ಪರಿತರ್ಪ ಚಮರೀಮೃಗಂಗಳಿಂ
ದೇವಮಾತೃಕ ನದೀಮಾತೃಕದ ಬೆಳೆಗಳಿಂ
ದೇವನದಿಯಂದದಿಂ ಪರಿವರಿವ ನದಿಗಳಿಂ
ನಗರಿನಗರಿಯೊಳೆಸವ ದೇವಾಲಯಂಗಳಿಂ
ಮುಗಿಲನಳ್ಕಿರಿವ ಘನವಾಡ ಕೂಟಂಗಳಿಂ

ಎಸೆವ ಕಾಶ್ಮೀರದೇಶಂ ರಂಜಿಸುವುದಿಳೆಗೆ
ಹೊಸ ಹೊಸ ಬನಂ ಪಟ್ಟಣಂಗಳಿಂದುರ್ವರೆಗೆ
ಬಂಧನಂ ಪೂಮಾಲೆಯೊಳಗಲ್ಲದಿಲ್ಲಲ್ಲಿ
ಅಂಧತ್ವ ಕಳ್ತಲೆಯೊಳಲ್ಲದಿಲ್ಲಲ್ಲಿ
ಕೊಯ್ವ ನುಡಿ ಕೆಯ್ಗಳೊಳ್ಮಾನಿನಿಯರಳಕದೊಳ್
ಬಯ್ವ ನುಡಿ ಗಿಳಿಗಳೊಳ್ನಲ್ಲರೊಳ್ ಸರಸದೊಳ್





ಬಡತನಂ ಲತೆಗಳೊಳ್ ಲಲನೆಯರ ನಡುವಿನೊಳ್
ಕೆಡಿಸುವುದು ವಂಶಮಂ ಮೇದರೊಳ್ ವೃಷಭನೊಳ್
ಅವನಿಗತಿ ಕಂಟಕಂ ಕೇತಕೀ ವೃಂದದೊಳ್
ಭುವನಕಂಟಕವೆಂಬುದಂಬುಜದ ನಾಳದೊಳ್
ಪೆರ್ಚುಕುಂದೆಂಬುದಾ ಚಂದ್ರನೊಳ್ ಶರಧಿಯೊಳ್
ಪೆಚ್ಚಿರ್ದ ದಾನಾರ್ಥವೆಂಬುದಾ ತುಂಬಿಯೊಳ್
ಇಂತಿವರೊಳಲ್ಲದಾ ನಾಡೊಳೆಲ್ಲೆಲ್ಲಿಯುಂ
ಸಂತತಂ ಸುಖಮಯಂ ದೇಶದೊಳಗೆಲ್ಲಿಯುಂ

ಆ ದೇಶದೊಳ್ ರಾಜಧಾನಿಯೆನಲೊಪ್ಪುವುದು
ಭೂದೇವತೆಯ ನೊಸಲತಿಲಕವೆನಲೊಪ್ಪುವುದು
ಭಾರತೀಯ ಪೀಠವೆಂಬುದು ಪಟ್ಟಣದ ನಾಮ
ಈರೇಳ್ಜಗಂಗಳಿಗೆ ಕೀರ್ತಿವಡೆದುದು ಗ್ರಾಮ
ಅಲ್ಲಿ ಶುದ್ಧ ಸ್ಫಟಿಕದಿಂದೆಸೆವ ಕೋಂಟೆಯಿಂ
ಅಲ್ಲಿ ಕತ್ತುರಿಯ ಕೆಸರಾಳ್ವೇರಿಮಹಿಮೆಯಿಂ
ಅಲ್ಲಿ ಮನೆಮನೆಗಳೊಳ್ಕುಂಕುಮದ ಮಡಿಗಳಿಂ
ಅಲ್ಲಲ್ಲಿ ದ್ರಾಕ್ಷಾಲತಾಮಂಟಪಂಗಳಿಂ
ಬಾಳೆ ಕಿತ್ತಳೆ ಹೇರಿಳೆ ನಿಂಬೆ ವನಂಗಳಿಂ
ನಾರಿಕೇಳಂ ನವಾಮ್ರಂ ಮಾತುಳಂಗಳಿಂ
ತಳಿರೊತ್ತಿ ರಾಜಿಸುವಶೋಕದ್ರುಮಂಗಳಿಂ
ಕಳಹಂಸ ಮಿಥುನದಿಂ ಬಳಸಿದ ಕೊಳಂಗಳಿಂ
ವೇದಘೋಷಂ ಪುರಾಣ ಪ್ರಸಂಗಂಗಳಿಂ
ಆದರಿಪ ಶಿವಕಥನ ಶೈವಾಗಮಂಗಳಿಂ
ಅಲ್ಲಲ್ಲಿ ಶಶಿಕಾಂತ ಭವನಿಕೆಗಳಿಂದೆಸೆವ
ಅಲ್ಲಲ್ಲಿ ನೆಲೆಯ ಕರುವಾಡಂಗಳಿಂದೆಸೆವ
ರಾಜಿಸುವ ನವಸೂರ್ಯಸೋಮವೀಥಿಗಳೆಸೆವ
ರಾಜಭೂಷಣನ ಭವನಾವಳಿಗಳಿಂದೆಸೆವ

ಪಟ್ಟಣವನಾಳ್ವನಪ್ರತಿಮಭೂಪಂ ನೋಡ
ಕಟ್ಟಧಿಕನುತ್ತಮ ಪ್ರವರಸೇನಂ ನೋಡ

ಗಜಘಟಾಶ್ವಾಳಿ ರಥನಿಕರ ಸಂಪದ ಕರಂ
ನಿಜಭುಜಾಗ್ರಪ್ರಯುತ ವೀರಲಕ್ಷ್ಮೀವರಂ
ವಿವಿಧವಿದ್ಯಾಧರಂ ಸತ್ಕಾವ್ಯಕೋವಿದಂ
ನವಗೀತವಾದ್ಯನೃತ್ಯತ್ರಯಕಳಾವಿದಂ
ನಿತ್ಯ ಸಾರಸ್ವತಂ ಸತ್ವ ಸಂಪದಕರಂ
ಸತ್ಯಸಾಹಿತ್ಯಗುಣಗಾಂಭೀರ್ಯ ವಿಸ್ತರಂ
ಆ ಪ್ರವರಸೇನರಾಜಂಗೆ ಹೊಯ್ಕೈಯ್ಯೆನಿಸಿ

ವಿಪ್ರನೊಪ್ಪುವನಾ ಪುರಕ್ಕೆ ಧನಪತಿ ಯೆನಿಸಿ
ತನ್ನ ಪೆಸರೊಪ್ಪುವ ಸುವರ್ಣಭಟ್ಟಂ ನೋಡ
ತನ್ನ ಸಂಪನ್ನತೆ ಕುಬೇರಂಗೆ ಸರಿ ನೋಡ
ಪೊರ್ದಿದಪೋರ್ರೆದರ್ಗೆ ಕೋಟಿ ಸಂಖೆಯ ಧನಂ
ಸಾರ್ದ ಶಿಷ್ಯಾವಳಿಗನಂತ ಸಂಖೆಯ ಧನಂ
ಹೆಸರಸತ್ರಂ ಹೆಸರ ಪುರವರ್ಗವಲ್ಲಲ್ಲಿ
ಹೆಸರ ಕೆರೆಯರವಟಗೆಯಾರವೆಗಳಲ್ಲಲ್ಲಿ
ಹೆಸರಗ್ರಹಾರಂ ಶಿವಾಲಯಗಳಲ್ಲಲ್ಲಿ
ಹೆಸರ ಧರ್ಮಪ್ರಕರವೆಣಿಸಲೆನಗರಿದಲ್ಲಿ

ಇಂತೆಸೆವ ವಿಪ್ರಂಗೆ ಸುತನೋರ್ವನೊಪ್ಪುವಂ
ಸಂತತಸುವರ್ಣಭಟ್ಟನ ಮನವನಪ್ಪುವಂ
ಆತನ ಪೆಸರ್ಪುರಕೆ ಮೆರೆವ ಮಲುಹಣನೆಂದು
ಆತನ ವಿಳಾಸದೊಳ್ ಪಿತನ ಚಿತ್ತಂ ಸಂದು
ಉಪನಯನ ವೈವಾಹಮುಂ ವಿಭವದಿಂಮ್ಮಾಡಿ
ವಿಪುಳವೇದ ಸರಸ ಶಾಸ್ತ್ರಜ್ಞರಂ ಕೂಡಿ
ಶ್ರೈವೋಪದೇಶಮುಂ ಪಿರಿಯರಿಂ ಮಾಡಿಸುತೆ
ದೈವಜ್ಞನಪ್ಪ ಮಗನಂ ನೋಡಿ ಪುಳುಕಿಸುತೆ
ದಿವ್ಯವಸ್ತ್ರಂ ಗಂಧಕಸ್ತೂರಿ ಪುತ್ರಂಗೆ
ನವ್ಯ ಭೂಷಣವಿತತಿವಿಸ್ತರಂ ಪುತ್ರಂಗೆ
ಗೀತ ವಾದ್ಯಂ ನೃತ್ಯ ಲೀಲೆ ಪುತ್ರನ ಮುಂದೆ
ನೂತನ ವಿನೋದ ಸರಸೋಕ್ತಿ ಪುತ್ರನ ಮುಂದೆ



ನವಫಳಂ ನವರಸಂ ನವಸುಖಂ ಪುತ್ರಂಗೆ
ನವವಾಹನಂ ನೂತನ ರತ್ನಂ ಪುತ್ರಂಗೆ
ಇಂತು ಪುತ್ರಂಗಿತ್ತು ಕಣ್ತ್ರೇವಿ ನೋಡುತಂ
ಸಂತತಂ ಮಲುಹಣನ ಮೋಹದೊಳ್ನಲಿಯುತಂ

ಚಿಂತಿಸಿದನಾತಂಗೆ ಸುಖದೊಳಿರ್ಪಂದಮಂ
ಮುಂತೆ ಮಾನಿಸರ ಹಂಗಿಲ್ಲದೊಂದಂದಮಂ
ನಿಚ್ಚಂ ಸಹಸ್ರ ಹೊನ್ನಂ ಲೆಕ್ಕವಂ ಮಾಡಿ
ಅಚ್ಚರಿ ಮಿಗಲ್ನೂರು ವತ್ಸರಕ್ಕನುಮಾಡಿ
ಓರ್ವಂಗೆ ಪರಮಾಯು ನೂರು ವತ್ಸರಮೆಂದು
ಸರ್ವ ಧನದೊಳಗೆ ತೆಗೆದಂ ಮಲುಹಣಂಗೆಂದು
ಮೂರು ಕೋಟಿಯ ಮೇಲೆ ಲಕ್ಷವರುವತ್ತಾಗೆ
ಬೇರೆ ವಿವರಿಸಿದ ಹೊನ್ನಂ ಮಲುಹಣಂಗಾಗೆ
ಕಟ್ಟಿ ಮುದ್ರಿಸಿದಂ ಸುವರ್ಣಭಟ್ಟಂ ನೋಡ
ಪಟ್ಟಣಕ್ಕಿಳೆಗೆ ಪೊಸತಾಗಲಾತಂ ನೋಡ
ಈ ತೆರದೊಳರ್ಥಮಂ ಪುತ್ರಂಗೆ ಬೈತಿಟ್ಟು
ನೂತನ ಸುಖಂಗಳಂ ಮನದೊಳಗೆ ಮುಂತಿಟ್ಟು
ಒಂದೆರಡು ವತ್ಸರಂ ಸುಖದೊಳಿರ್ಪನಿತಕ್ಕೆ
ಸಂದಣಿಸಿ ಹರ್ಷದಿಂ ಪದುಳವಿರ್ಪನಿತಕ್ಕೆ

ಬಂದುದು ಸುವರ್ಣಭಟ್ಟಂಗೆ ಕಾಲನ ದಾಳಿ
ನಿಂದು ಸೋಂಕಿತ್ತುಸುವನೆಯ್ದೆ ರೋಗದ ದಾಳಿ
ಸೋಂಕಿತ್ತುಗ್ರಜ್ವರಂ ತಾಪದಿಂದಳ್ಕಿದಂ
ಭೋಂಕನೆ ಸುವರ್ಣಭಟ್ಟಂ ದಿವಕ್ಕೈದಿದಂ
ತಂದೆ ಸ್ವರ್ಗಸ್ತನಾದುದನರಿದು ಮಲುಹಣಂ
ಮುಂದುಗೆಟ್ಟರಿವುಗೆಟ್ಟೊರಲುತ್ತೆ ಮಲುಹಣಂ
ಸರ್ವ ಸಂಭ್ರಮದಿಂದ ತಂದೆಯಂ ಸಂಸ್ಕರಿಸಿ
ಸರ್ವಮುಖದಿಂ ಪಿಂಡಪಿತೃಕಾರ್ಯಮಂ ಸಲಿಸಿ
ಸಕಲ ಭರಭಾರಕ್ಕೆ ತಾನೆ ವಲ್ಲಭನಾಗಿ
ಸಕಲ ಪರಿಜನಕೆಲ್ಲ ರಕ್ಷೆಶಿಕ್ಷಕನಾಗಿ

ಉತ್ತಮಂ ವ್ಯವಹಾರಪರಿಣತಂ ತಾನಾಗಿ
ಉತ್ತಮೋತ್ತಮ ಸಂಪದಕ್ಕೆ ನೆಲೆವನೆಯಾಗಿ
ಇರೆ ಮಲುಹಣನನಪ್ಪಿದುದು ಯೌವ್ವನೋದಯಂ

ಸ್ಮರನ ಕೈಗೆಯ್ದಿತ್ತು ಪುಷ್ಪಚಾಪೋದಯಂ
ಸವಿ ನುಡಿಗಳಂ ಕಿವಿಗಳಾಲಿಸಲ್ತೊಡಗಿದವು
ಅವಯವಂ ಮೃದುವಸನದಿಚ್ಛೆಯನೊಡರ್ಚಿದವು
ನೋಟವೊಪ್ಪುವ ರೂಪನೆಚ್ಚರಿಸಲೆಳಸಿದವು
ತೋಟಿಗೆಳಸುವ ಪುರ್ಬು ಗಂಟಿಕ್ಕತೊಡಗಿದವು
ಸವ ಮಧುರಮಂ ಜಿಹ್ವೆ ಬಯಸಲನುಗೈಯಿತ್ತು
ಸವ ಗಂಧಮಂ ಘ್ರಾಣವರಿಯಲನುಗೈಯಿತ್ತು
ಗುಡಿ ಮೆಲ್ಲಮೆಲ್ಲನಕ್ಷಿಗಳತ್ತ ಹೊದ್ದಿತ್ತು
ನಡೆಯುರವಣೆಯನುಳಿದು ಗಮಕದೊಳ್ಬೆರಸಿತ್ತು
ಕರತಳಂ ತನುರುಚಿಯ ನೋವನಂಗೈಸಿದವು
ಕರಣತತಿ ಭೋಗಸಂಪದಮನಿಚ್ಛೈಸಿದವು
ಇಂತು ಸರ್ವೇಂದ್ರಿಯಂ ಸುಖದ ಬಳಕೆಗೆ ಸಲಲ್
ಕಂತು ಚಿಂತಿಸಿ ಷೋಡಶಪ್ರಾಯದೊಳ್ನಿಲಲ್
ಅಂಗರುಚಿ ಮುಗ್ಧೆಯರ ಕಣ್ಗೆ ಕನ್ನಡಿಯಾಗೆ
ಅಂಗಲತೆ ತರುಣಿಯರ ಸಂಗಸಂಪದವಾಗೆ
ಸುರಕುಜದ ಚಂದನದ ಕರ್ಪುರದ ಸಸಿಯಂತೆ
ಪರಿಮಳದ ಚಂದ್ರಿಕೆಯ ಕಾಂತಿ ಕರುವಿಟ್ಟಂತೆ
ಬೆಳೆಯುತಿರ್ದಂ ಸುಖಮನೆಳಸಿ ಮಲುಹಣನಿತ್ತ
ಬೆಳೆಯುತಿರ್ದಳ್ ಸುಖಾಕಾರೆ ಮಲುಹಣೆಯತ್ತ

ಆ ದೇಶದಧಿದೈವವೆನಿಪ ವಿಜಯೇಶ್ವರನ
ನೇದಕ್ಕಗವ್ಯವೆಂದೆನಿಪ ವಿಜಯೇಶ್ವರನ
ಪಾತ್ರದ ವಿಳಾಸಿನಿಯೆನಿಪ್ಪ ಪದ್ಮಾವತಿಯ
ಚಿತ್ರತರ ಮಧುರತರ ನಾಟಕಕಳಾವತಿಯ
ಎಸೆವ ಬಸಿರೊಳ್ ಬಂದು ಶಿಶುಭಾವಮಂ ತಳೆದು
ಕುಸುಮಬಾಣನ ಕೀರ್ತಿ ಬೆಳೆವಂದದಿಂ ಬೆಳೆದು



ಮಲುಹಣೆಯ ಜೌವ್ವನವನೇನೆಂದು ಬಣ್ಣಿಪೆಂ
ಮಲುಹಣನ ಸಕಲ ಸುಖನಿಧಿಯನೇನೆಂದಪೆಂ

ಮನವನೆಡೆಗೊಂಡನಾ ಮನಸಿಜಂ ಪರಿತಂದು
ತನುವನೆಡೆಗೊಂಡುದಾ ಸೌಭಾಗ್ಯವೆಯ್ತಂದು
ಪ್ರೇಮದಿಂ ಮಧುರೂಪಿನೊಳ್ಪುಗಲ್ನೂತನಂ
ಪೂಮುಡಿಯನಿಂಬುಗೊಂಡುದು ಮಕರಕೇತನಂ
ಭ್ರೂಲತೆಯನಾಶ್ರಯಿಸಿತಿಕ್ಷುಚಾಪಂ ನೋಡ
ಆಲೋಕನವನೊತ್ತಗೊಂಡವಲರ್ಗಣೆ ನೋಡ
ಮಿಗೆ ಸೊಬಗಿನೊಳ್ಪೊಕ್ಕಳಲ್ಲಿ ರತಿಯೆಯ್ತಂದು
ಮೊಗಮನೋಲೈಸಿದಳ್ ಸರಸಿಜಶ್ರೀ ಬಂದು
ನೆಯ್ದಿಲೆಯರಲ್ಬಯಸಿ ಕರ್ಣಪಾಲಿಕೆಯೊಳಿರೆ
ಎಯ್ದೆ ಶಶಿಕಾಂತ ಗಂಡಸ್ಥಲವನಪ್ಪುತಿರೆ
ಗಂಧವಹನೆಳಸಿ ಮಧುರಶ್ವಾಸದೊಳ್ ಪುಗಲ್
ಬಂಧುರಮೃಣಾಲರುಚಿ ಭುಜಲತೆಗಳೊಳ್ಮಿಗಲ್
ಅಮಳ್ಪಕ್ಕಿಗಳ ಚೆಲ್ವು ಘನಕುಚವನಿಚ್ಛೈಸೆ
ಕಮಲಸೂತ್ರದ ಕಾಂತಿ ಬಾಸೆಯಂ ಬಾಸಣಿಸೆ
ಬಾಸೆ ತನ್ನಂ ತೋರಿ ಬಡನಡುವನುಂಟೆನಿಸೆ
ಮೀಸಲ್ಗೊಳನ ಗುಣ್ಪು ಸುಳಿನಾಭಿಯೊಳ್ನೆಲಸೆ
ಮದನನಿಳಯದ ನೇತ್ರದಂಡದಾಕೃತಿ ಬಂದು
ಸದಮಳ ತಿವಳಿಯೊಳ್ನೆಲಸೆ ನಲವಿಂದಂದು
ಕೃತಕಾಚಲದ ಸೊಂಪು ತಣ್ಪು ವೃತ್ತಂ ಬಯಸಿ
ನುತ ಜಘನವಂ ಬಳಸಿ ಪರ್ಬಿ ಪದಪಿಂದೆಳಸಿ
ಕದಳಿಯಾಕೃತಿ ಬಟ್ಟದೊಡೆಗಳಂ ಸಾರುತಿರೆ
ಮದನದೊಡೆಯಾಕಾರ ಕಣಗಾಲ್ಗೆ ಸೇರುತಿರೆ
ಕೆಂದಾವರೆಯ ಕೆಂಪು ಪದತಳಮನೋಲೈಸೆ
ಮಂದಯಾನಂ ಎಸೆವ ಹಂಸಗತಿಯಾವರಿಸೆ
ಇಂತು ಸರ್ವಾಂಗ ಸೌಂದರ್ಯಮಂ ಕೆಳೆಗೊಂಡು
ಕಂತು ಮೊದಲಾಗಿ ಚರಿಸುವ ರೂಪನೊಳಕೊಂಡು
ಅಳಿ ತುಡುಂಕದ ಮಘಮಘಿಪ ಬಿರಿ ಮುಗುಳಂತೆ

ಎಳಸುವ ಚಕೋರಿ ಮೊಗವಿಡದ ಚಂದ್ರಿಕೆಯಂತೆ
ಸಿಕಚಂಚು ಸಂಚಾರವಿಲ್ಲದೆಳೆದಳಿರಂತೆ
ಶುಕಮುಖದಿ ಅಣ್ಣೆವಳಿಯದ ಪಕ್ವ ಫಳದಂತೆ
ತೊಳತೊಳಗಿ ಬಳೆವುತಿರ್ದಳ್ ಚಂದ್ರಕಳೆಯಂತೆ
ನಳನಳಿಸಿ ಬಳೆವುತಿರ್ದಳ್ ಕುಸುಮಶರದಂತೆ

ಬಳೆವ ಮಲುಹಣಿಯ ರೂಪಂ ಜನನಿ ನಿಂಗೆ ನೋಡಿ
ಆಳವಲ್ಲದಕ್ಕರಿಂ ಸುಖರಸದೊಳೋಲಾಡಿ
ನವ ಯೌವ್ವನದ ನೆಲೆಗೆ ಮನದೊಳಗೆ ತೂಪಿರಿದು
ಅವಯವದ ಚೆಲ್ವಿಂಗೆ ಕಣ್ಗಳೊಳ್ ತೂಪಿರಿದು
ಕಡು ನೇಹದಿಂದೆ ನವ ಲಾಸ್ಯಮಂ ವೈಗೊಳಿಸಿ
ಪೃಡನೊಲ್ಪು ರಸಗಾನಮಂ ನೆರೆ ಕೊರಳ್ಗೊಳಿಸಿ
ಮಗಳ ನಿಟ್ಟಿಸುತ ಕಣ್ಣೊಳಗಿಕ್ಕಿ ಮುಚ್ಚುತ್ತಿರೆ
ನಿಂಗೆ ವಿಳಾಸಿನಿಯರಿಂ ಸಿಂಗರಿಸುತಿರುತವಿರೆ

ಪ್ರಥಮಸ್ಥಲ ಸಂಪೂರ್ಣ

---



## ದ್ವಿತೀಯಸ್ಥಲ.

ಕಂದ॥ ಹೊಸನಡೆ ಹೊಸನುಡಿ ಹೊಸನುಡಿ ।
ಹೊಸ ಹೊಸ ಸೌಭಾಗ್ಯವೆಸೆವ ಹೊಸ ಲಾವಣ್ಯಂ ।
ಹೊಸಹರೆಯಂ ಹೊಸನೋಟಂ ।
ಹೊಸ ಜವ್ವನದೇಳ್ಗೆ ಮಲುಹಣಿಗೆ ಚಿತ್ರತರಂ ॥

### ಗದ್ಯ.

ಇಂತೊಪ್ಪೆ ಚರಣಂ ತೀವಿದ ಮಂದಗತಿಯಿಂದಪರಭಾಗಂ ತೀವಿದ ನಿತಂಬದಿಂ ಉರಂ ತೀವಿದ ಪೇರ್ವೊಲೆಯಿಂ ಮೊಗಂ ತೀವಿದ ಲೋಚನದಿಂ ಅವಯವಂ ತೀವಿದ ಚೆಲ್ವಿಂ ಮೆಯ್ತೀವಿದ ಜವ್ವನದಿಂ ಮನಂ ತೀವಿದ ಸುಖದಿಂ ಮರೆದು ಮನಸಿಜಂ ಮುದ್ರಿಸಿದ ನನೆಗಣೆಯಂತಿರ್ದ ಮಲುಹಣಿಗೆ ಸುಕುಮಾರಾಂಗಿಗೆ ಹೊಸ ಹರೆಯದೊಡನೆ ರಸಮಯವೆನಿಪ್ಪ ಲಾಸ್ಯ ಸಂಪದಂ ಕೈಗೂಡಿತ್ತೆಂಬುದಂ ಪದ್ಮಾವತಿಯರಿದು ವಸಂತ ಮಾಸದೊಳೊಂದು ದೆವಸಂ ವಿಜಯೇಶ್ವರದೇವರಂ ಕೇಳಿಸಲೆಂದು ಕ್ಷಣಮಂ ಕೈಕೊಂಡು ಮಲುಹಣಿಗೆ ಸಿಂಗರಂ ಮಾಡಲ್ಕೆ ಸಖೀಜನಕ್ಕೆ ಪೇಳೆ,

ಕೆಳದಿಯರ್ನಲಿದು ಬಂದು ಮಾಂದಳಿರ ಹಸೆಯ ಮೇಲೆ ಪುಷ್ಪ ಮಂಜರಿಯಪ್ಪಂತಿರ್ದ ಸುಕುಮಾರಾಂಗಿಗೆ ನನೆಯಂಬಂ ಕೈಗೆಯ್ವ ವಸಂತವಿಳಾಸಿನಿಯರಂತಿರ್ದ ವಿಳಾಸಿನಿಯರ್ಮಲುಹಣಿಗೆ ಪಾದಮುದ್ರಿಕೆಯನಲಂಕರಿಸಿ ಸೊಡಗಮನನುಲರ್ಚಿಸಿ ನೇವುರಮನಳವಡಿಸಿ ಕಂಕಣಮಂ ತಿರುಂಪಿ ನೂಂಕಿ ರತ್ನಮುದ್ರಿಕೆಗಳಂ ಕೆಯ್ಗೊಳಿಸಿ ಬಾಹುಪೂರಯುಮನಿಕ್ಕಿ ಕರ್ಣಾವತಂಸಮಂ ಕೆಳೆಗೊಳಿಸಿ ಚಕ್ರಮಿಥುನಕ್ಕೆ ಗವಸಣಿಗೆಯನಿಕ್ಕುವಂತೆ ಕುಚಯುಗಕ್ಕೆ ಕಂಚುಕೆಯಂ ತೊಡಿಸಿ ತೋರಮುತ್ತಿನ ಹಾರಮಂ ಹತ್ತೆ ಸಾರ್ಚಿ ಶಶಿಬಿಂಬಕ್ಕೆ ಶುಕ್ರನಂ ಸೇರಿಸುವಂತೆ ಮುಖಬಿಂಬದೊಳ್ ಮುತ್ತಿನ ಮೂಕುತಿಯಂ ಮೇಳೈಸಿ ಕಾವನಂಬಂ ಕತ್ತುರಿಯ ಸಾಣೆಯಿಕ್ಕುವಂತೆ ಕಜ್ಜಳಮನೆಚ್ಚಿ ಎಳೆಲತೆಯಂ ಬೆಳ್ದಿಂಗಳಿಂ ಬಾಸಣಿಸುವಂತೆ ನವದುಕೂಲಮಂ ನಿರಿವಿಡಿದುಡಿಸಿ ನಿರ್ಮಳ ಶಶಿಬಿಂಬದಂತಿರ್ದ ಮುಖಮಂಡಲಕ್ಕೆ ಚಂದ್ರಮನ ದಿಟ್ಟಿ ತಾಗದಂತೆ

ಕತ್ತುರಿಯ ತಿಲಕಮಂ ನೊಸಲೊಳಿಟ್ಟು ಕಾಮನ ಮೆಯ್ಸಿಗು ಮ
ಪೊಕ್ಕಂತೆ ಕತ್ತಲಿಪ ಮುಡಿಯೊಳ್ ಹೊಸ ಕುಸುಮದೆಸಳಂ ತುರುಂಬಿ
ತೊಡಿಸಿದಾಭರಣಮುಮಂ ಮುಡಿಸಿದ ಪೊಸ ಪುಷ್ಪಂ ನಸುದೋಪ
ಸಪುರ ದುಕೂಲಮಂ ಮುಸುಂಕಿಟ್ಟು,

ಗಿಳಿ ಹಂಸೆ ಕೋಗಿಲೆ ಕುಸುಮಕುಲಂ ಮಧುಕರಂ ಮಂದಾನಿಲಂ
ಚಂದ್ರಿಕೆ ಚಕೋರ ಚಕ್ರವಾಕನೆಳಗಳ್ಳಿಗಳ್ನೆರೆದು ಬಂದು ಕಾಮನ
ಪುಷ್ಪಿನಂಬಂ ನಡುವಿಟ್ಟುಕೊಂಡೋಲೈಸುತುಂ ಬರ್ಪಂತೆ ಪದ್ಮಾವತಿ
ಮೊದಲಾದ ಸಕಲ ಸಂಪ್ರದಾಯಮುಮಂ ಸಖೀ ಜನಂಗಳುಂ ಸುತ್ತಿ
ಮುತ್ತಿ ಬರೆ ಮಲುಹಣಿಯು ಮರೆಗೊಂಡು ಕರ್ಬಿನ ಬಿಲ್ಲಗೊಲೆಗೇರಿ
ಸುತ್ತ ಎಲರಂಬಂ ನಡೆತರೆ ಪೂಸಿದ ಚಂದನದ ಜವಾಜಿಯ ಯಕ್ಷ
ಕರ್ದಮದ ಸೌರಭ್ಯದೊಡನೊಡನೆ ದೆಸೆದೆಸೆಗೆ ಪಸರಿಸಿ ತೀಡುವ ಹೊಸ
ಜವ್ವನದ ಪಸಿಯ ಕಂಪಿನ ಬಳಿವಿಡಿದು ಸುವಿಟರ್ಕವಿದು ಬರೆ ತುಂಬಿ
ಗಳ ಝೇಂಕಾರಂ ಕಂಕಣದ ಝುಣತ್ಕಾರಂ ಮಾಪುರದ ಕ್ರೇಂಕಾರಂ
ಪಾದಮುದ್ರಿಕೆಯ ಠಣತ್ಕಾರಂ ಮದನನಬಿಲ್ಲ ಟೇಂಕಾರಂ ಬೆರಸಿ
ಬೆಳೆದು ಪುರಜನರ ಕಿವಿಗಳ್ಗೆ ಹೊಸ ಸವಿಗಳಂ ಸಾಲಿಡೆ ವಿಳಾಸದಿಂ
ವಿಜಯೇಶ್ವರದೇವರ ರಂಗಮಂಟಪಕ್ಕೆ ಬಂದು ಚಂದ್ರಧರಂಗೆ ವಂದ
ನಂಗೆಯ್ದು ಗಿರಿಜಾವಲ್ಲಭನಂ ಕೇಳಿಸಲೆಂದು ಸಕಳ ಸಂಪ್ರದಾಯಮುಂ
ಸುಗತಿ ಸಂವರಣೆಗೊಂಡು ರಂಗಂಬುಗುತ್ತಿರಲು,

ಇತ್ತ ಮಲುಹಣದೇವಂ ವಿಜಯೇಶ್ವರದೇವರ ದಿವ್ಯ ಪಾದಪ್ರಣಾತ
ನಿತ್ಯ ನಿಯಮಾಸಕ್ತನಾಗಿ ನೊಸಲೊಳಿಟ್ಟ ಭಸಿತದ ಕೀಲಿಸಿದ ಕರ್ಣಾ
ಭರಣದ ಕೈಗೊಳಿಸಿದ ಕ್ಷೀರಹಾರದ ಉಟ್ಟು ಹೊದೆದ ಹೊಸ ದುಕೂ
ಲದ ಕಿವಿಯೊಳಂಕೆಗೊಂಡ ಮೃಗಮದದ ಕಕ್ಷಪುಟದೊಳ್ಮಗಮಗಿಪ
ಕತ್ತುರಿಯ ಸಾರದ ಉದ್ವರ್ತನಂಗೆಯ್ದ ಚಂದನದ ತುರುಂಬಿದ ಕುಸು
ಮಾವಳಿಯ ಪೊಸ ಕಂಪುಂ ಸೊಗಯಿಸುವ ಸೊಂಪುಂ ಮೋಹಿಸುವ
ಬೆಳಗುಂ ಮುಪ್ಪುರಿಗೊಂಡು ಬಳಸಿ ಬೀದಿವರಿಯೆ ಏರುಂಜವ್ವನದುರ್ಬ
ಕೊರ್ಬ ಪರ್ಬುಗೆವಡೆಯೆ ನಿಜ ನಿಳಯಮಂ ಪೊರಮಟ್ಟು ಬರ್ಪಾಗಳ್
ವೇದ ನಾದಾಕ್ಷರದೊಡನಕ್ಷತೆಗಳಂ ನೀಡುವ ವಿಪ್ರಕುಲದ ನವೀನ ಗದ್ಯ
ಪದ್ಯದೊಡನೆ ನಲವರಕೆಯಂ ನೀಡುವ ಕವಿಗಳ ಕೈವಾರದೊಡನೆ
ಸ್ತುತಿಗಳಂ ನೀಡುವ ವಂದಿಗಳಂ ತುಂಬಿಗಳ ನುಣ್ಚರದೊಡನೆ ಜೋಳಿಸಿ



ಮಾಣದಾಣತಿಗುಡುವ ಗಾಯಕರಿಂ ಸಮ ಕುಲಂ ಸಮ ಶೀಲಂ ಸಮ
ರೂಪು ಸಮಪ್ರಾಯದೊಡನೆ ಮನಂಗೊಡುವ ಮಿತ್ರರೆನಿಪ ವಿಟ ವಿದೂ
ಷಕ ನಾಗರಿಕ ಪೀಠಮರ್ದನರ್ನಡುವೆ ಕಾಮನ ಕೆಯ್ಸೆರೆ ಬರ್ಪಂತೆ
ವಿಜಯೇಶ್ವರ ದೇವರ ಶಿವಾಲಯಕ್ಕೆ ನಡೆತಂದು,

ಮಲುಹಣಿಯ ತನಿ'ನೇಹಂ ತನ್ನನೀ ತೆರದೊಳ್ ಸುತ್ತುವುದೆಂ
ಬುದಂ ತೋರುವಂತೆ ಪ್ರದಕ್ಷಿಣಂ ಬಂದೊಳಪೊಕ್ಕು ಸೋಮಧರನ
ವಾಮಭಾಗದೊಳ್ಪದ್ಮಾಸನನಾಗುತ್ತಂ ಆಗಮಸ್ಥಾನದೊಳ್ವಿಭೂತಿಯನಿಟ್ಟು
ಪಂಚಬಾಣಕ್ಕೆಡೆಮಾಡುವಂತೆ ಶೋಷಣ ದಾಹನ ಪ್ಲವನಂಗಳಿಂ
ಹೃದಯಾಧಾರಮಂ ಶುದ್ಧಿಮಾಡಿ ಎಲೆ ದೇವ ಈ ಕನ್ನೆಯಂ ಸೋಂ
ಕಿದ ಬಳಿಕ್ಕವೆನ್ನಂಗವಿಕಾರವೆಲ್ಲಂ ತನ್ನಂಗದೊಳೆಂಬುದಂ ಮುಟ್ಟಿ
ತೋರುವಂತಂಗನ್ಯಾಸಕರನ್ಯಾಸಮಂ ನಿರ್ಮಿಸಿ ಎಲೆ ದೇವ ಪಲವು ದಿನಕ್ಕ
ಲ್ಲದೆ ನಿತ್ಯ ನಿಯಮಕ್ಕೆ ಬಾರೆನೆಂಬುದನೇಕಾಂತದೊಳ್ಬಿನ್ನವಿಪಂತೆ ಜಪಪ
ನೆಣಿಸಿ ಎಲೆ ದೇವ ಮಲುಹಣಿಯಂ ಕಂಡ ಬಳಿಕ ನಿನ್ನಂ ಕಾಣ್ಬುದರಿದೆಂ
ಬುದಂ ಅರಿಪುವಂತೆ ಕಣ್ಗಳಂ ಮುಚ್ಚಿ ಎಲೆ ದೇವ ನಿನ್ನೋಲಗದ
ಕನ್ನೆಯಂ ಬೇಗ ಕರುಣಿಸೆಂದು ಕಾಲ್ವಿಡಿವಂತೆ ಲಿಂಗದಂಘ್ರಿಯೊಳ್
ಸ್ಪರ್ಶನಮಂ ಮಾಡಿ ಮಲುಹಣಿಯಂ ಬೇಡಿ ಸದಾಶಿವನಿಂ ಧಾರೆಯಂ
ಪಡೆವಂತೆ ಪಾದೋದಕಮಂ ಕೊಂಡು ಪೊಡೆಮಟ್ಟು ಬೀಳ್ಕೊಂಡು
ಸೌಂದರ್ಯಸಂಪನ್ನಂ ವಿಳಾಸನಿಧಿ ಸೌಭಾಗ್ಯಸಾರೋದಯಂ ಸಾಕಾರ
ರ್ಯಕಟಾಕ್ಷವಿಕ್ಷೇಪಂ ರಸಭರಿತಚಿತ್ತನಪ್ಪ ಮಲುಹಣದೇವಂ ತಿರಿಗಿ
ಬರ್ಪಾಗಳ್,

ಮುಂದಣ ರಂಗಮಂಟಪದ ಮಧ್ಯದೊಳೆತ್ತರಂಗೊಂಡೋಲಗ
ವಿತ್ತು ಕುಳ್ಳಿರ್ದ ಪರಮಭಕ್ತರ ಸಚಿವರ ರಾಜಪುತ್ರರ ವಡ್ಡ ವ್ಯವ
ಹಾರಿಗಳ ಕವಿಗಳ ಕಳಾವಿದರ ಸತ್ಯರ ಸಾಹಿತ್ಯರ ಸಂಗೀತ ಸಂಪನ್ನರ
ವಿಳಾಸಿನಿಯರ ಪರಿಜನದ ಪುರಜನದ ನಡುವಣ ರಂಗಮಂಟಪದೊಳ್ನ
ರ್ತನಂಗುಡುವ ತಾಳದ ಗತಿಗುಡುವ ಮದ್ದಳೆಯ ಲಹಣಿಗುಡುವ
ಆವುಜದ ದೆಖ್ಖಾಳಂಗುಡುವ ಕರಡೆಯ ಸವಿಗುಡುವ ವೀಣೆಯ ನಯಂ
ಗೊಡುವ ಕಿನ್ನರಿಯ ಬಿಲ್ಲೆಗೊಡುವ ಕೌಸಳದ ಹಲ್ಲಣಿಗುಡುವ ವಾಸದ
ಲಲ್ಲೆಗುಡುವ ಜೇವಣಿಗೆಯರ ಸಂಗೀತದ ಸಂದಣಿಯೊಳ್ಪುಷ್ಪಾಂಜಲಿಯ
ಸಮಯದೊಳ್ ನವೀನ ಕನ್ಯಾವರನಿವಾಹಮೂರ್ತದ ತೆರೆ ಸರಿಪಂತೆ

ಮಲುಹಣ ನೊಡೆ ನೊಡೆ ಜವನಿಕೆಯೊಡೆ ದೊಣೆಯುನಗಲ್ದ ಕಾವ: ನಂಬಿನಂತಿರ್ದ ಮಲುಹಣಿಯ ರೂಪಿನೊಳ್ನೋಟಂ ಸಿಲ್ಕಿ ಎವೆ ಜಿರಗಾಗಿ ಕಣ್ಗಳ ಧಾರೆಯಿಂದೊಳಪೊಕ್ಕು ರೂಪು ಕರಣವನೊಕ್ಕಲಿಕ್ಕಿ ಭಾವವಂ ಬರಿಕೈದು ಚಿತ್ತಮಂ ತೊೞ್ತುಳಿದುಳಿದು ಜೊಲ್ದು ಝೊಂಪಿಸಿ ಮಿತ್ರರ ಮೇಲೆ ಮೆಯ್ಯನೀಡಾಡುವ ಜವ್ವನಿಗನಂ ಮಲುಹಣೆ ಭೋಂಕನೆ ನೋಡಿ ಕಂಡು ಮನಂ ಬೆದರಿ ಹೃದಯಂ ನಡುಗಿ ತನು ಬೆಮರ್ತು ಗತಿ ಸ್ತಂಭಿಸಿ ಪಾದಂ ಪೈಸರಂಬೋಗಿ ಹಸ್ತಂ ಮಲಂಗಿ ನೋಟ ಮಚ್ಚೊತ್ತಿ ಮೂರ್ಛಿಸುವ ಮಗಳಂ ಪದ್ಮಾವತಿ ಕಂಡು ಇದೇನಿದೇನು ರಂಗಮಂಟಪಂ ವಿರಹಮಂಟಪವಾದುದು ಈಶ್ವರ ಕೇಳಿಕೆ ರತೀಶ್ವರ ಕೇಳಿಕೆಯಾದುದು ಅಕ್ಕಕ್ಕು ಸೋಜಿಗಂ ಸೋಲ್ತ ಮಲುಹಣಂ ಸದರ್ಥನೆಂಬುದಂ ಅಱಿದು ಮನವಂ ಬಲಿದು ಈರ್ವರುಮನೊಡಗೊಂಡು ಬಂದು,

ಪರ್ಬಿದ ನೇಹಮಂ ನೆಲೆವೆರ್ಚಲೊಡರ್ಚಿಸಿ ನಿಜನಿಳಯಕ್ಕೈತಂದು ಮದನಕೇಳಿ ಸದನವೆನಿಪ್ಪ ಸೆಜ್ಜೆಯ ಮನೆಯ ಸಿರಿಮಂಚದ ಹಂಸತೂಳ ತಳ್ಪದೊಳ್ಪವಳಿಗೊಳಿಸಿ ತಾನುಂ ಸಖೀಜನಂಗಳುಂ ಜಾಣಿಂ ಜಾರಲನಂಗ ಕೇಳಿಗೆ ಮನಂ ಸಂದಣಿಯಲ್ಲಿಂದ್ರಿಯಂಗಳುರವಣಿಸೆ ತವಕಮನುಗುಳೆ ಲಜ್ಜೆ ಹೆಜ್ಜೆದೆಗೆಯೆ ಮನಂ ಮುಂದುಗೆಟ್ಟು ಅನುರಾಗವೆಲ್ದು ಸವಿನೋಟಂ ಒಳಪೊಕ್ಕು ಭೀತಿ ಬಿಟ್ಟು ಮುಂಡಿಮಾಳಂ ಮೈಸಂದು ಸೋಂಕು ಸವಿಗಂಡಾಲಿಂಗನಕ್ಕಾತುರಿಸಿ ರೂಪಂ ಕಣ್ತೀವಿ ನೋಡಿ ಕುಚವಾರಲಪ್ಪಿ ಮೆಯ್ಯಾರೆ ಕೂಡಿ ಮನಂದಣಿಯೆ ಮರೆದು ಮರಹನರಿಯದೆ ಅರುಲುಗೊಂಡ ಚಕೋರನಂ ಬೆಳ್ದಿಂಗಳೊಳ್ ಬಿಸುಟಂತೆ ಹಸಿದ ಪಿಕನಂ ಪೊಸ ಬನದೊಳಿರಿಸಿದಂತೆ ಬಳಲ್ದ ಚಕ್ರಮಿಥುನಕ್ಕೆ ಬಿಸಿಲೊಳ್ ಬಳಲ್ವಂತೆ ಮನದರ್ಥದೊಡನೆ ತನುವಿನ ಸುಖಂ ತಲೆಗೇಱೆ ಬೇಱೆ ಬೇಱೆ ಅವಯವದ ಕೂಟಕ್ಕೆ ಸರ್ವಾಂಗಮನೊಪ್ಪಿಸಿ ಕೊಟ್ಟು ಅಪ್ಪಿದೊಡೆ ಬಿಡಲಱಿದು ಅಗಲ್ದೊಡೆ ಬಾಳಲಱಿದೆನಿಪ ಮಲುಹಣಿಯ ತನುವಿನ ಕದಂಬಾಮೋದಂ ತೀಡೆ ಮನೋಮೇಘಂ ತೊರೆಯೆ ನೋಟದ ಮಿಂಚಡರೆ ಬೞಲ್ಮುಡಿಯೆಂಬ ನವಿಲಾಡೆ ಕೂಡೆ ಪೊಣ್ಮುವ ಸವಿದನಿಮೊಳಗೆ ಎಚ್ಚರೆಂಬ ಹಂಸೆಯೋಡೆ ಮೋಹದ ಮಳೆ ಕರೆದು ಚಿತ್ತಭೂಮಿ ತಣಿದು ಅನುರಾಗದ ಬೀಜಂ ಬಿತ್ತಿ ಮುನಿಸಂಕುರಿಸಿ ಪ್ರಣಯ ಕಲಹಂ ಪಲ್ಲವಿಸಿ ತೀವಿನ ನೊನೆ ಮುಗುಳೊತ್ತಿ ಆಲಿಂಗನಂ ಫಲಿತ



ಮಾದ ಸಮಾನುರಾಗದೊಳಗಲದಿರೆ ಮತ್ತೆ ಮತ್ತೆ ಬೇಡಿ ಕೂಡುವಲ್ಲಿಂ ನೋಟವಱಿದಪ್ಪುವ ಸೈರಣೆಯಱಿದು ಸೋಂಕುವ ಆಸೆಯಱಿದಾಲಿಂಗಿಸುವ ಬಯಕೆಯಱಿದು ಬೆಱಸುವ ಮನವಱಿದನುಭವಿಸುವ ಇಚ್ಛೆಯಱಿದು ಹೆಚ್ಚುವ ಅಗ್ಗಳಿಕೆಯಱಿದು ಬೋಳೈಸುವ ಎಚ್ಚರಿಕೆಯ ಸಮರತಿಯೊಳಿರ್ದು ಹಿಗ್ಗಿ ಸುಖದ ಸೋಂಕು ಮಿಕ್ಕು ಮೀಱಿ ನಲಿವು ತಲೆಗೆತ್ತಿ ನಖಮುಖದಿಂ ಸೋಂಕಿ ಸೆಳೆಯಲನುಗೈಯ್ವಲ್ಲಿಂ ಮುನ್ನಂ ರೋಮಾಂಚದ ಬಾಸುಳೆಪ್ಪ ಸುಕುಮಾರಾಂಗಿಯೊಳೊಲ್ದು ನೆರೆವ ಸುಖಸಮಯದೊಳ್ಕರುಣವೆಲ್ಲಂ ನೋಟ ನೋಟವೆಲ್ಲಂ ನುಡಿ ನುಡಿಯೆಲ್ಲಂ ವಿರಹ ವಿರಹವೆಲ್ಲಂ ದೈನ್ಯ ದೈನ್ಯವೆಲ್ಲಂ ಸಾತ್ವಿಕಂ ಸಾತ್ವಿಕವೆಲ್ಲಂ ಮೆಯ್ ಮೆಯ್ಯೆಲ್ಲಂ ಕೂಟಂ ಕೂಟವೆಲ್ಲಂ ಮನಂ ಮನವೆಲ್ಲಂ ಮೆಚ್ಚು ಮೆಚ್ಚೆಲ್ಲಂ ಸೋಲಂ ಸೋಲವೆಲ್ಲಂ ರಸಮಯವಾಗಿ,

ಸಂವತ್ಸರಂಗಳುಂ ದಿನಂಗಳಾಗಿ ದಿನಂಗಳುಂ ನಿಮಿಷಗಳಾಗಿ ಪದ್ಮಾವತಿ ಸಂಪನ್ನೆಯಾಗಿ ನಿಚ್ಚಂ ಸಾಸಿರ ಹೊನ್ನಿಂದು ನೂರುಂ ಬರಿಸಕ್ಕೆ ತಂದೆ ಮಡಗಿದ ಧನಂ ಹತ್ತು ಬರಿಸಕ್ಕೈದದಿರೆ ಧನಂ ತೀರೆ ಮನಂ ತೀರದಿರೆ ಮುಡಿದ ಹೂವಗಲ್ದೊಡಂ ಹಿಡಿದ ಪರಿಮಳವಗಲದಿರ್ಪಂತೆ ಮೋಹರಸವಾರದೆ ಸಮಸುಖಸಾರಹೃದಯಸಂಜಾತಹರ್ಷರಾಗಿ ಮಲುಹಣನುಂ ಮಲುಹಣಿಯುಂ ಪರಮಾನುರಾಗದೊಳಗಲದಿರೆ ಮೆಲ್ಲಮೆಲ್ಲನೆ ಪಲವುಂ ದಿನಕ್ಕೆ ಬರ್ಪ ಪೊನ್ನಿನುರುವಣಿಯುಡುಗೆ ಉಚಿತ ವ್ರಯಕ್ಕೆ ಆಪದ್ಧನವಿಲ್ಲದಿರೆ ಪದ್ಮಾವತಿ ಬೆಚ್ಚಿ ಬೆದರಿ ಎಚ್ಚರಂಗೊಂಡರ್ಥದ ಸವಿಗೆ ಮನಮುಂ ನಾಲಗೆಯುಂ ಲವಲವಿಸಿ ಮಿಕ್ಕು ಮೀಱಿದ ರಕ್ಕಸಿಗುಂಟಿಣಿ ಚೂತಮನಪ್ಪಿದ ಮಲ್ಲಿಕಾಲತೆಯನಗಲ್ಚುವ ಬಿರುಗಾಳಿಯಂತೆ ಭೇರುಂಡಪಕ್ಕಿಯ ನಡುವಂ ಸೀಳಲೊಯ್ವ ಲುಬ್ಧಕನಂತೆ ಮಗಳನಗಲ್ಚಲ್ ಬಗೆದು,

ಏಕಾಂತಮುಂಟೆಂದು ವಿಳಾಸಿನಿಯರಂ ಕಳುಪೆ ಬಂದ ಸಖಿಯರವರೀರ್ವರಿರವಂ ಕಂಡು ಕರೆಯಲಾರದೆ ಪೋಗಲುಂ ಮೀರಲುಂ ಅಱಿಯದೆ ತಳುವಿತ್ತಂ ಕಂಡು ಸಿಡಿಮಿಡಿಗೊಳುತ್ತುಮಿರೆ ತಾನೆ ಬಂದು ರವಣಿಸಿ ನುಡಿದೆಲ್ಲರಂ ಜರಿದು ಝುಂಕಿಸಿ ಏಳೇಳ್ಮಗಳೆ ನಿಮ್ಮ ಮಾವಂ ದ್ವೀಪಾಂತರದಿಂ ದಿವ್ಯ ವಸ್ತ್ರಾಭರಣಂಗಳಂ ಕೊಂಡು ಬಂದನವನ

ನೋಡಲ್ಕೆ ಏಳೀಳ್ಕಗಳೆ ಎಂಬ ನುಡಿ ಕಿವಿಯೊಳಂಬಂ ಹೊಸದಂತಾಗಿ
ಆಲಿಂಗನವುನಗಲಲಾರದೆ ಅಂತಃಕರಣದೊಳ್ ಹೊತ್ತಿದ ಕಾಮಗಿಚ್ಚಿನ
ತಿದಿಯೊತ್ತಿದಂತೆ ಕಿಡಿ ಸೂಸೆ ಸೂಯ್ದು ಕೋಪಂ ಸೂಸಲರಿದು ಹರಣಂ
ಹಾರೆ ಹಮ್ಮಯಿಸುತ್ತೆಂತಕ್ಕೆ ಸಂತಯಿಸಿಕೊಳ್ಳಲಾರದೆ ಈ ರಕ್ಕಸಿಯ
ನುಡಿ ಯೆದೆಗಿಚ್ಚಂ ನಂದಿಸಿ ಬರ್ಸನಂಜದಿರೆಂಬಂತೆ ಮಲುಹಣನಂ
ದಯಾದೃಷ್ಟಿಯಿಂ ನೋಡಿ ಮೆಲ್ಲಮೆಲ್ಲನಚ್ಚಳಿಯದಾಲಿಂಗನಮಂ ಬಿಚ್ಚು
ತಿರ್ಪಲ್ಲಿ ಹಂಸೆಯೆಂಬುಗೀಡಾಗಿ ಬೀಳ್ವಂತೆ ಮಂಚದಿಂ ಕೆಳಕ್ಕೆ ಬೀಳ್ವ
ಮಲುಹಣಿಯುಂ ಸಖಿಯರ್ಕಯ್ಯಾಂತು ಪಿಡಿಯಲಂತಂತು ತರಹರಿಸಿ
ನೊಸಲ ಕಣ್ಣ ಹೊಗೆ ಸುತ್ತಿದ ಪೂಸರದಂತೆ ಕೆಳದಿಯರ ಕೈಯ್ಯೊ
ಳ್ಕೈಯ್ಯನೀಡಾಡೆ,

ಮೆಲ್ಲಮೆಲ್ಲನೆ ಬಂದು ತಾಯಂ ನೋಡಿ ಕೆಯ್ಯಾ ನೀಡಿ ಎಲೆ
ಪಾಪಿ ಎಲೆ ಸುಖವೈರಿ ಕರೆದ ಕಾರಣವೇನೆಂದು ಬೆಸಗೊಳ್ವುದುಂ
ಎಲೆ ಮರುಳ್ಮಗಳೆ ಅರ್ಥಂ ತೀರ್ದುದು ಜನ್ವನಂ ಸೋರ್ದುದು ಇನ್ನೀ
ಮಲುಹಣನಂ ಬಿಡುಬಿಡೆಂದು ನುಡಿಯೆ ಸಿಡಿಲದನಿಗೇಳ್ದ ಹಂಸೆಯಂತೆ
ನಡನಡನೆ ನಡುಗಿ ಎಲೆ ತಾಯೆ ಕಮಲತಂಡುಲಮನಾರೋಗಿಪ
ಹಂಸೆಗೆ ಹರಳನಿಕ್ಕುವರೆ ಕೋರಕಮಂ ಸವಿವ ಕೋಕಿಲೆಗೆ ಕೊರಡ
ನಿಕ್ಕುವರೆ ಬೆಳ್ದಿಂಗಳನಾಸ್ವಾದಿಪ ಚಕೋರಿಗೆ ಬಿಸಿಲಂ ಮಾಳ್ಪರೆ ಪರಿ
ಮಳವನುಣ್ವ ತುಂಬಿಗೆ ಹೊಗೆಯನಿಕ್ಕುವರೆ ಪಳರಸವನೀಂಟುವರ
ಗಿಳಿಗೆ ಕಾದನೀರೆರೆವರೆ ಮಲುಹಣನೊಳಭೇದ ಸುಖದೊಳಿರ್ಪೆನ್ನೊಡ
ನಿಂತು ಮಾತಂ ನುಡಿವರೆ ಲೋಭ ಮುಂತಾಗಿ ಹುಟ್ಟಿದ ದೀನೆ ಮುಪ್ಪು
ಮುಂತಾಗಿ ಹುಟ್ಟಿದ ನಿರಸೆ ಸುಖಮಂ ಕೊಯ್ವ ಮಾನಸಗರಗಸವೆ
ಆಯ್ಯೋ ಏಕೆನ್ನನರಿದರಿದು ಸುಟ್ಟಪೆ ಇದಿರಿದು ಬಿಸುಟಪ್ಪೆ ದಾಕ್ಷಿಣ್ಯ
ವಹನೆ ಪೋಗು ಪೋಗೆಂದು ಭೋಂಕನೆ ತಿರುಗಿ ಮಲುಹಣನೊಳ್
ನೇಹ ಸುಖ ಸುಪ್ತಿಯಿಂದಿರ್ಪ ಮಗಳ ಮೋಹಕ್ಕೆ ಪದ್ಮಾವತಿ ಬೆರ
ಗಾಗಿ ಕೈಯರ್ಥಮಂ ಸೆಳೆದು ಕೊಂಡಂತೆ ಮಮ್ಮಲಂ ಮರುಗಿ ಮಗಳ
ದಾಕ್ಷಿಣ್ಯಕ್ಕೆ ಮತ್ತಂ ಕೆಲವು ದಿನವಿರಿಸಿ ಸೈರಿಸಲಾರದೆ ಮಲುಹಣಿಯ
ನಂದಂದಿಂಗೆ ಕರೆಕರೆದಗಲ್ಕೆಯನಭ್ಯಾಸಂಮಾಡಿ ಮಲುಹಣನಂ ಸೆಜ್ಜೆ
ಯೊಳ್ಮಾದಲಿಸಿ ಕುಳ್ಳಿರ್ದೆಡೆಯೊಳ್ಕುಸುರಿದರಿದು ನಿಂದಿರ್ದೆಡೆಯೊಳ್ನೀರಂ
ಚಲ್ಲಿ ಮನೆಯ ಮುಂದೆ ಸುಳಿವ ಹೊಸ ಹರೆಯದ ಸಂಪನ್ನರಪ್ಪ



ರಾಜಪುತ್ರರುಟ್ಟುಡುಗೆಯಂ ತೊಟ್ಟ ತೊಡಿಗೆಯಂ ಕಂಡು ಸೈರಿಸಲಾ
ರದೆ ಮನಂ ಮರುಗಿ ಔಡಂ ಕಚ್ಚಿ ವಿಳಾಸಿನಿಯರಂ ನಿಃಕಾರಣಂ
ಬಡಿದು ಕಾಳ್ಗಗಳಮಂ ತೆಗೆದು ಬೇನೆ ಇಲ್ಲದೆ ನರಳ್ದು ಸಾವಿಲ್ಲದೆ
ಶೋಕಂಗೈಯ್ದು ಬರಿಸಾಲಕ್ಕೆ ಪುಸಿದಗಹಂ ಕೊಟ್ಟು ಮಲುಹಣನಂ
ಮನೆಯಿಂ ಪೊರಮಡಿಸಿ ನಿಶ್ಚಲನಂ ನಿಃಕರಿಸಿ ಸಪ್ಪನನಿದಿರ್ಗೊಳಲೆಂದು
ಪದ್ಮಾವತಿಯು ಮಲುಹಣಿಯಂ ಮಲುಹಣನ ವಿರಹ ಸಂತಪ್ತ ಚಿತ್ತೆಯಂ
ತಿಳುಪಿ ಬೋಧಿಸುತ್ತಮಿರೆಯಿರೆ.

## ದ್ವಿತೀಯ ಸ್ಥಲ ಸಂಪೂರ್ಣ

---

## ತೃತೀಯ ಸ್ಥಲ.

ಕಂದ॥ ಪೊರಮಡಿಸೆ ಮಲುಹಣಂ ನೆರೆ।
ಮರುಗಿ ಮನಂಗುಂದಿ ಕಂದಿ ಮನ್ಮಥಬಾಣಂ॥
ಮರುವೊನೆಗಂಡಂತದರೊಳ।
ಗೆರಗಿ ಕರಂ ತನುವನುರುಪಿ ಪೊರಳುತ್ತಿರ್ದಂ॥

### ರಗಳೆ.

ಇಂತು ಮಲುಹಣನಂಗಜಾಗ್ನಿಯೊಳ್ಬೇವುತಂ
ಸಂತತಂ ಮಲುಹಣಿಯ ಮೋಹದೊಳ್ಪೊರಳುತಂ
ಪೊರಮಡಿಸೆ ಪೋಗಲಾರದೆ ಮನೆಯ ಮುಂದಿರ್ಪ
ಮರುಗಿ ಮನವುಕ್ಕಿ ತಲೆಗರೆದು ತಾಪಿಸುತಿರ್ಪ
ನಡೆದು ಗಳಗಳನೆ ಪೋಪಂ ಕಾರ್ಯವಿನಿತಿಲ್ಲ
ನುಡಿವನೊರ್ವೋರ್ವ ತನ್ನಂ ನುಡಿಸುವವರಿಲ್ಲ
ಸುಮ್ಮನಿರ್ಪಂ ಧ್ಯಾನವೆಳ್ಳಿನಿತು ತನಗಿಲ್ಲ
ನೆಮ್ಮಿ ಕುಳ್ಳಿರ್ಪನನುಸಂಧಾನವಿನಿತಿಲ್ಲ
ನಿಂದರಂ ಕಂಡು ಮಲುಹಣಿ ಎನುತೆ ಸೋಂಕುವಂ
ಬಂದರಂ ಕಂಡು ಮಲುಹಣಿ ಎನುತಪ್ಪುವಂ
ದಾರಿಯೊಳ್ಬೀದಿಯೊಳ್ಮಲುಹಣಿಯ ಕಳವಳಂ
ಕೇರಿಕೇರಿಗಳೊಳಗೆ ಮಲುಹಣಿಯ ಕಳವಳಂ
ನಿಂದಿರ್ದು ಕುಳ್ಳಿರ್ದು ನಡೆನಡೆದು ಬೆಚ್ಚುವಂ
ಮುಂದಿರ್ದರಂ ಕಂಡು ಬಂದಂತೆ ಹೆಚ್ಚುವಂ
ಭಾವರತಿಯೊಳ್ಕೂಡಿ ಕಣ್ಮುಚ್ಚಿ ಕರಗುವಂ
ಭಾವದಚ್ಚಳಿಯೆ ಕಣ್ದೆರೆದರಸಿ ತಿರುಗುವಂ
ತನುವೆತ್ತಿ ಪೊರವಳಲಬನದೊಳಗೆ ಪರಿದಲ್ಲಿ
ತನತನಗೆ ತೀವಿರ್ದ ಪೂಗೊಳನ ತಡಿಯಲ್ಲಿ
ಕಮಳಮಂ ಮಲಹಣಿಯ ಮೊಗವೆಂದು ಮುಟ್ಟುವಂ
ಕುಮುದಮಂ ಮಲುಹಣಿಯ ಕಣ್ಗಳೆಂದಕ್ಷಿಯೊಳಗೊತ್ತುವಂ
ಮಧುಕರಂಗಳನಳಕವೆಂದು ತಲೆಯೊತ್ತುವಂ
ಅಧರವೆಂದಾ ಬಿಂಬಫಳಮನಚ್ಚೊತ್ತುವಂ



ದಾವಾಗ್ನಿಯೆಂದಶೋಕೆಯನರಿದು ಹೆರೆ ಸಾರ್ದು
ಪೂವನಂಗಜಬಾಣವೆಂದು ಕಂಡೊಳಸಾರ್ದು
ಬಿಸಿಯ ಬೆಳಗೆಂದು ಬೆಳ್ದಿಂಗಳಿಗೆ ಹೇಡೈಸಿ
ಪಸಿಯ ಕಿಚ್ಚೆಂದು ಪೊಸ ಪಲ್ಲವಕೆ ತಲ್ಲಣಿಸಿ
ಯೋಡಿಬಂದೂರೊಳಗೆ ಹಳಹಳಸುತಂ ಪೊಕ್ಕು
ಬಾಡಿ ಬಸವಳಿದು ಮಲುಹಣಿಯ ವಿರಹಂ ಮಿಕ್ಕು
ಗಳಗಳನೆ ನಾಲ್ಕೈದವಸ್ಥೆ ದೇಹದೊಳೇರೆ
ಯೊಳಗೊಳಗು ಸುಡಲೊಳಗು ಪೊರಗೆಲ್ಲ ಕಾಹೇರೆ
ಮೈಸೋಂಕೆ ಮೆಲ್ಗಾಳಿ ಘರಿಘರಿಲನರಿವಪುದು
ಕೈ ಸೋಂಕೆ ಬೆಳ್ದಿಂಗಳಗ್ಗಳಂ ಕಾದವುದು
ಹೊಕ್ಕ ಕೊಳನುಕ್ಕಿ ನೆರೆ ಬತ್ತಿ ಬರಿದಾದವುದು
ಮಿಕ್ಕು ಮುಟ್ಟಿದ ಪಲ್ಲವಂಗಳುರೆ ಸೀದವುದು
ಯೆಂಬ ವಿರಹದೊಳಿರುತಿರಲಾರದೆಯ್ತಂದು
ಇಂಬಿಲ್ಲದಾತುರಂ ತಲೆಗೇರೆ ಪರಿತಂದು

ಮಲುಹಣಿಯ ಮನೆಯ ಮುಂದಲ್ಲಲ್ಲಿ ನಿಂದಿರ್ದು
ಮಲುಹಣಂ ಮತಿಗೆಟ್ಟು ಕಳವಳಿಸುತುಂ ಸಾರ್ದು
ಉರವಣೆಯ ಕರಣಂಗಳೊಡಗೂಡಿ ತಾಪಿಸುತ್ತ
ತಿರುಗಿ ಮಲುಹಣಿ ಮಲುಹಣಿ ಎಂದು ಮೂರ್ಛಿಸುತ್ತ
ತನ್ನಿಂದ ತಾನೆ ಮತ್ತೆಚ್ಚತ್ತು ನೋಡುತ್ತ
ಉನ್ನತಾನಂಗ ಶಿಖಿಯಿಂದುರಿದು ಬೇವುತ್ತ
ನಡೆತಂದು ಮಲುಹಣಿಯ ಬಾಗಿಲೊಳ್ ಬಳಲುತುಂ
ಅಡಿಗಡಿಗೆ ಘನತಾಪವೆಡೆಗೊಂಡು ಕಳಲುತುಂ
ದೂರಿಸುತೆ ತಾಪಿಸುತೆ ತಾ ಭಿತ್ತಿಯಂ ನೆಮ್ಮಿ
ಹಾರುತುಂ ಕಣ್ಮುಚ್ಚಿ ಕೊರಗಿ ವಿರಹಂ ಪೊಣ್ಮಿ
ಮಲುಹಣಿಯನೀಕ್ಷಿಸಿದ ಕಣ್ಗೆ ತೊತ್ತಾಗುತುಂ
ಮಲುಹಣಿಯ ನುಡಿಗೇಳ್ದ ಕಿವಿಗೆ ಮಾರಾಗುತುಂ
ಕೆಳದಿಯರ್ ಪೊರಮಡಲು ಚರಣದೊಳ್ ಪೊರಳುತುಂ
ಅಳವಲ್ಲದುರವಣೆಯ ತಾಪದೊಳು ಕೆರಳುತುಂ
ಮನದೊಳಗೆ ಕಣ್ಣೊಳಗೆ ಮಲುಹಣಿಯ ಕಳವಳಂ

ತನುವಿನೊಳ್ ತವಕದೊಳ್ ಮಲುಹಣಿಯ ಕಳವಳಂ
ಬಂದೆಂಜಲಂ ಚೆಲ್ಲುವೊಂದು ಹೊಸ ಕುಳಿಯೊಳಗೆ
ನಿಂದು ಮಧ್ಯಮ ರಾತ್ರೆ ಪರ್ಯಂತವದರೊಳಗೆ
ಇರಲಲ್ಲಿ ಮಲುಹಣಿದೇವಿಯಾರೋಗಿಸಿದ
ಪರಿಯಾಣಮುಮನೊರ್ಬ ಹೊಸ ವಿಳಾಸಿನಿ ತೊಳೆವ
ಉದಕಮಂ ಚಲ್ಲಲಾತನ ಮೇಲೆ ಪಸರಿಸಲ್
ಪಡೆದು ಪುಳಕಪ್ರತತಿ ತನ್ನ ಮೆಯ್ಯೊಳ್ಮಿಗಲ್
ಹಾ ಮಲುಹಣಿ ಮಲುಹಣಿ ಎಂದು ಹಾರೈಸೆ
ಆ ಮಾತು ಮಲುಹಣಿಯ ಕಿವಿಗಳೊಳ್ಪೂರಯಿಸೆ

ಮಲುಹಣನ ದನಿಯೆಂದು ಗಳಗಳನೆ ನಡೆತಂದು
ಮಲುಹಣ ಇದೇಕಿಂತು ನಿಲ್ವರೇ ನೀನೆಂದು
ಕೆಟ್ಟೆ ನೀನೇಕಿಲ್ಲಿ ನಿಂದಿರ್ಪೆ ಪೋಗೆನ್ನುತೆ
ಮುಟ್ಟೆ ಕೈಗೊಡಹಿ ಕಡು ವಿರಹಕ್ಕೆ ಕಂಪಿಸುತೆ
ಹೋಗಲುರಿಯೊಳಗೆ ತುಪ್ಪವನೆರೆದ ತೆರನಾಗೆ
ಪೂಗಣೆಗಳಟ್ಟಣಿಸಿ ಮುಸುರಿ ಮನವಂ ತಾಗೆ
ಮತ್ತೆ ವಿರಹಂ ನೆಗೆದು ಕರಣದೊಳ್ನೋರ್ಮಡಿಸೆ
ಹೊತ್ತಿ ಹೊಗೆಯಿಲ್ಲದೊಳಗುರಿ ಪರಿದು ನೂರ್ಮಡಿಸೆ
ನಿಂದಿರ್ದನಿರ್ದನಿರ್ದಂ ಮಹಾ ನಿಶಿಯೊಳಗೆ
ಸಂದಣಿಸಿ ಮಂದೈಸಿ ಕವಿವ ಹೊಸ ಹಿಮದೊಳಗೆ
ಇರೆ ಕರೆದುದತಿ ನೂತ್ನ ಶೀತಪಾತನ ಮೇಲೆ
ಪರಿಪರಿಯ ಹೊಸ ಹಿಮದ ಘಟ್ಟಿಯಾತನ ಮೇಲೆ
ಮುಚ್ಚಿ ಮುಸುಕಲು ನಡುವೆ ಮಲುಹಣಂ ನಿಂದಿರ್ದ
ನಚ್ಚರಿಯ ವಿರಹದಿಂ ಹಿಮದೊಳಗೆ ಸಂದಿರ್ದ
ಎಳೆಯ ಬೆಳ್ಮುಗಿಲೊಳಗೆ ಹೊಳೆವ ಪಾವಕನಂತೆ
ಹೊಳೆವಾಲಿಕಲ್ಲಮನೆಯೊಳಗಿರ್ಪ ರವಿಯಂತೆ
ದಿಟ್ಟಿಸಲ್ಕಣ್ಮುಚ್ಚಿ ಹೊಯ್ವ ಸೀತದ ನಡುವೆ
ಮುಟ್ಟಿದೊಡೆ ಕೈಕಡಿದು ಬೀಳ್ವ ತುಹಿನದ ನಡುವೆ
ನೆನೆದೊಡೆ ಮನಂ ಮುರುಂಟುವ ಸೀತಳದ ನಡುವೆ
ತನು ಕರಗಿ ಕೋಡಿಸುವ ಬಹಳ ಸೀತದ ನಡುವೆ



ಕೊಲುವ ಹಿಮಪಾತಂಗೆ ಶಿಶಿರೋಪಚಾರವದು
ಒಲಿವ ಚೇಗೆಯ ಬೆಂಕಿಗೊಂಡಲೆವ ಶೀತವದು
ತಾನಾಗೆ ಹಿಮದ ಗೂಡಾರದೊಳಗಿರ್ಪಂತೆ
ನಾನಾ ಹಿಮೋಪಚಾರದ ಹಿಮಗೃಹದಂತೆ
ಜೆಳಗಪ್ಪಿನಿಂ ಶೀತಳಾಲಯದೊಳೊಪ್ಪಿರಲ್
ಬೆಳಗಾಗೆ ಮಲುಹಣಿಯ ಕಣ್ಣೆ ಪೊಸತಾಗಿರಲ್

ಕಂಡು ಮಲುಹಣಿಯಿದೇಂ ಹಿಮಪೊಟ್ಟಲೇಕಿಲ್ಲಿ
ಕಂಡೆನಾನಿರುಳಿರ್ದ ಮಲುಹಣಂ ತಾನಿಲ್ಲಿ
ಅಕಟಕಟ ಮಲುಹಣಂ ಹಿಮದೊಳ್ಮುರುಂಟಿದಂ
ಅಕಟಕಟ ಪಾಪಿ ಎನಗೊಲ್ದು ನೆರೆ ಮುಗ್ಗಿದಂ
ಪಾಪಿಯಾದೆಂ ಪಾಪಿಯಾದೆನೆಂದೆನುತಲ್ಲಿ
ತಾಪಿಸುತ್ತಂ ಪರಿಚ್ಛೇದಿಸುತ್ತಂತಲ್ಲಿ
ಸತ್ತ ನೋಡ ಮರಣವಿದು ತಪ್ಪದೆನುತ ಬಂದು
ಸುತ್ತುಮುತ್ತಿರ್ದ ಸತಿಯರು ಸಂದಣಿಸಿ ನಿಂದು
ತೆಗೆ ಹಿಮವನೆಂದು ಮರವುಟ್ಟನಿಂ ತೆಗೆಯಿಸಲ್
ಮೊಗೆದು ಕೆಲಬಲಕಿಕ್ಕಿ ಸುತ್ತುಂ ನಿವಾರಿಸಲ್
ಕಪಟವಳಿದೊಳಗೊಪ್ಪುವನುರಾಗವಿರ್ಪಂತೆ
ಯುಪಚಾರವಳಿದು ಸತ್ಯ ಸ್ನೇಹವಿರ್ಪಂತೆ
ಇರ್ದನಾ ಮಲುಹಣಂ ವಿರಹಕ್ಕೆ ತಂಪಾಗಿ
ಇರ್ದನಾ ಮಲುಹಣಂ ತಾಪಕ್ಕೆ ತೆರಹಾಗಿ
ಇರೆ ಕಂಡು ಮಲುಹಣಿ ಮನಂ ಮರುಗಿ ಬೆರಗಾಗಿ
ಉರಿವರಿವ ವಿರಹದುರವಣೆಗೆ ಕಲ್ಮರನಾಗಿ
ಮಲುಹಣನಕ್ಕರಿಂ ಕರುಣದಿಂದಂ ನೋಡಿ
ಮಲುಹಣಿ ಮನೋದುಃಖದಿಂದೆ ನುಡಿದಳ್ಬಾಡಿ

ಎನ್ನ ಮೇಲಿಕ್ಕುವೀ ಚಿತ್ತದಾತುರತೆಯುಂ
ಪನ್ನಗಾಭರಣನೊಳ್ಮಾಳ್ಪುದೆನ್ನೊಲ್ಮೆಯುಂ
ಎಂದ ಮಾತಂ ಕೇಳ್ದು ಬಳಿಕ ನೀನೆನಗಪ್ಪೆ
ಇಂದುಧರನಂ ಬೇಡು ನಿನ್ನತ್ತನಾಂ ಬಪ್ಪೆ
ಎನ್ನ ಹವಣೇ ಕೋಟಿ ಮಲುಹಣಿಯರಾಗರೇ

ಮನಸಿಜಾರಿಯನರಿದು ದುಃಖಮಂ ನೀಗರೇ
ಬೇಡಿಕೊಳ್ಳೀಶ್ವರನೊಳಿನ್ನು ಮಲುಹಣ ಪೋಗು
ನೋಡಬಾರದು ವಿರಹದನುತಾಪಮಂ ನೀಗು
ಎನೆ ವಿರಹಮಂ ತೆಗೆದು ಹರನ ಮೇಲಿಕ್ಕಿದಂ
ತನಿನೇಹಮಂ ಶಿವನ ಮೆಲ್ಲಡಿಗೆ ಸಾರ್ಚಿದಂ

ನಡೆತಂದನಾ ಹಿಮವನೋಸರಿಸಿ ಮಲುಹಣಂ
ಮೃಡನಲ್ಲಿಗನುತಾಪವೆಯ್ದುತಿರೆ ಮಲುಹಣಂ
ಬರಲಲ್ಲಿ ವಿಜಯೇಶ್ವರನ ರಂಗ ಮಂಟಪಕೆ
ಹರನ ಶಂಕರನ ಶಶಿಧರನ ಶಿವಮಂಟಪಕೆ
ಕತ್ತುರಿಯ ಸಾರವಣೆ ರಂಜಿಸುವ ಭೂಮಿಯಂ
ಮುತ್ತು ಮಾಣಿಕದಿನೊಪ್ಪುವ ರಂಗವೋಲೆಯಂ
ನಡುವೆ ಕೇಳಿಸುವ ತೂರ್ಯತ್ರಯದ ಲಹರಿಯಿಂ
ಪೊಡೆವಡುವ ಬಲವಪ್ಪ ಕುಣಿವ ಭಕ್ತಾಳಿಯಿಂ
ತನತನಗೆ ಭೋರೆಂಬ ದುಂದುಭಿ ಧ್ವನಿಗಳಿಂ
ತನತನಗೆ ಪೂರಯಿಪ ಶಂಖಸ್ವರಗಳಿಂ
ಅಲ್ಲಲ್ಲಿಯುಚ್ಚರಿಪ ವೇದನಾದಂಗಳಿಂ
ಅಲ್ಲಲ್ಲಿ ಕೇಳಿಸುವ ಶಿವಕೀರ್ತನಂಗಳಿಂ
ತರತರಂಗೊಂಡು ಬರ್ಪಗ್ಗಣಿಯ ಹಾದಿಯಿಂ
ನೆರೆನೆರೆದು ತರುತಿರ್ಪ ಪರಿಮಳದ ವೀಧಿಯಿಂ
ಪಂಚಧಾರಾಶರ್ಕರಾಭಾಜನಂಗಳಿಂ
ಪಂಚಾಮೃತಂ ತುಂಬಿಯೊಪ್ಪುವ ಕೊಡಂಗಳಿಂ
ಸಂದಣಿಪ ಸಂಭ್ರಮವನೆಂತಕ್ಕೆಯೋಸರಿಸಿ
ಇಂದುಧರನಲ್ಲಿಗಾತುರಚಿತ್ತನುರವಣಿಸಿ
ಸಂದಣಿಸಿ ಕುದಿವ ಕರಣಂಗಳಿಂ ನಡುಗುತುಂ
ಬಂದು ಕುಳ್ಳಿರ್ದು ಶಿವನಂ ಹೊಗಳ ತೊಡಗುತಂ

ದೇವ ಶಂಕರ ಭಕ್ತಜನ ಮನೋರಥ ರೂಪ
ದೇವ ಶಶಿಧರ ಶರಣಹೃದಯ ಸದಮಳ ದೀಪ
ಗೌರೀಕಚಪ್ರಚಯ ಪುಷ್ಪಗಂಧಕ್ಕೆಳಸಿ
ಭೋರೆನುತ್ತೆರಗಿ ಮಧುಕರವ್ರಜಮನನುಕರಿಸಿ



ಮೆರೆವ ಗರಳವ ಗರ್ವ ಕರುಣಿಪುದು ಕರುಣಿಪುದು
ಹರೆಯ ಮಧುರಾಂಶುಮಂಡಿತಮಕುಟ ಕರುಣಿಪುದು
ಸುರಶಿರೋಮಾಲೆಯ ಮಹಾಮಹಿಮ ಕರುಣಿಪುದು
ಸರಸಿಜಾಸನ ಶಿರಃಕಂಜ ಕರ ಕರುಣಿಪುದು
ಕರುಣಿಪುದು ಕರುಣಾಳು ಶಂಭುಸಿಧಿ ಕರುಣಿಪುದು
ಗಿರಿಜಾಮನೋಹರನೆ ಕರುಣಿಪುದು ಕರುಣಿಪುದು
ಎಂದು ಕುದಿಕುದಿವ ಕರಣಂಗಳೊಳ್ ಬಣ್ಣಿಸಲ್
ಬಂದು ವಿರಹಸ್ತೋತ್ರನೀಶನೊಳ್ ಸಂದಿಸಲ್

ಶಂಕರಂ ಕೇಳ್ದು ಸೈರಿಸಲಾರದೇಳ್ತಂದು
ಭೋಂಕನೆ ಮಹಾಲಿಂಗದಂಗದಿಂದೈತಂದು
ಸುರಿವ ಪೂಮಳೆಯೊಳಗೆ ಪೊಯ್ವ ದುಂದುಭಿಯೊಳಗೆ
ನೆರೆವ ಗಣಕುಲದೊಳಗೆ ಕರೆವ ಕಹಳೆಗಳೊಳಗೆ
ಕಿರುಜಡೆ ಮಹಾಮಕುಟವಿಂದುಕಳೆ ರಂಜಿಸಲ್
ಕರೆಗೊರಲ್ ಪಂಚಮುಖದಶಭುಜಂ ರಂಜಿಸಲ್
ಮೆಚ್ಚಿದೇಂ ಬೇಡಿಕೊಳ್ಳೆಲವೊ ಮಲುಹಣ ಎನಲ್
ಚೆಚ್ಚರಂ ಮಲುಹಣಿಯ ನೀವುದೆನೆಗೆಂದೆನಲ್
ಕೊಟ್ಟೆನೆಲೆ ಮಗನೆ ಕೊಟ್ಟೆಂ ಮತ್ತೆ ಬೇಡೆನೆಲ್
ನಿಟ್ಟೆ ಪಿರಿದಾಯ್ತು ಮಲುಹಣ ಬೇಡು ಬೇಡೆನಲ್
ದೇವ ಮಲುಹಣಿಯೊಡನೆ ನೂರುಂ ಬರಿಸಮಿರ್ದು
ದೇವಲೋಕಕ್ಕೆ ನಿಮ್ಮಡಿಗಳಂ ನೆರೆ ಸಾರ್ದು
ತನು ಸಹಿತಲೀರ್ವರುಂ ಬರ್ಪಂತೆ ಕರುಣಿಪುದು
ಮನವಾರೆ ಸುಖದೊಳಿರ್ಪಂದಮಂ ಕರುಣಿಪುದು
ಎಂದೊಡಭವಂ ಕೊಟ್ಟೆನೆಂದು ಕಾರುಣ್ಯದಿಂ
ಮುಂದಿರ್ದ ಲಿಂಗದೊಳ್ಪೊಕ್ಕನಾನಂದದಿಂ
ಪುಗಲತ್ತಲಿತ್ತಲೀಶ್ವರಸುಪ್ರಸಾದದಿಂ
ಬಗೆವೆರ್ಚೆ ಮೆಯ್ವೆರ್ಚೆ ಬರುತಿರ್ದನೊಪ್ಪದಿಂ
ಮಲುಹಣಿಯುಮವಳ ತಾಯುಂ ಕೂಡಿ ಮೈಯಿಕ್ಕಿ
ಮಲುಹಣಂ ಮುಂದೆ ಬಂದಾನಂದದಿಂದುಕ್ಕಿ
ರಂಗಮಂಟಪದೊಳಗೆ ಹರುಷದಿಂ ಮುಂದಿಟ್ಟು

ಲಿಂಗದ ಸಮಕ್ಷದೊಳ್ಮಗಳನೊಪ್ಪಿಸಿ ಕೊಟ್ಟು
ಮಗಳುಮಂ ಮಲುಹಣನ ನಗರಿಯೊಳು ಮೆರಿಸುತುಂ
ಸೊಗಯಿಪ ಪ್ರವರಸೇನಂ ಬಂದು ಮೆರಿಸುತುಂ
ಬರೆ ನಿಜ ನಿವಾಸಕ್ಕೆ ಬಂದರಾನಂದದಿಂ
ಪರಮನಿತ್ತಾಜ್ಞೆಕೆಯ್ಗೂಡಿ ಸಮಚಿತ್ತದಿಂ

ಕಾಮಮುಂ ಕ್ರೋಧಮುಂ ಶಂಕರಂಗರ್ಪಿತಂ
ನೇಮಮುಂ ಪ್ರೇಮಮುಂ ಶಶಿಧರಗರ್ಪಿತಂ
ಕೂಟಮುಂ ತೃಪ್ತಿಯುಂ ತ್ರಿಣಯನಿಂಗರ್ಪಿತಂ
ನೋಟಮುಂ ಬೇಟಮುಂ ಪುರಹರಂಗರ್ಪಿತಂ
ಕಂಡುದುಂ ಸೋಂಕಿದುಂ ಕಾಮಾರಿಗರ್ಪಿತಂ
ಕೊಂಡುದುಂ ಸವಿದುದುಂ ವಿಷಧರಂಗರ್ಪಿತಂ
ಆಗಿ ನೂರುಂಬರಿಸಭವನಾಜ್ಞೆಯೊಳಿರ್ದು
ನಾಗಭೂಷಣನಿತ್ತ ಭೋಗನಿಕರದೊಳಿರ್ದು
ಭೂಲೋಕದಿರವು ಸಾಲ್ಗೆಂದಿರ್ಬ್ಬರುಂ ಬಂದು
ಬಾಲೇಂದು ಮೌಳಿಯಲ್ಲಿಗೆ ಭರದೊಳೇಳ್ತಂದು
ದೇವ ಮುನ್ನಿತ್ತ ವರಮಂ ಕರುಣಿಪುದು ತಂದೆ
ದೇವಯಿಲ್ಲಿರವೆಮಗೆ ಸಾಲ್ಗುಮಿನ್ನೆಲೆ ತಂದೆ
ಕಾರುಣ್ಯವಾರ್ಧಿ ವಿಜಯೇಶ್ವರನೆ ಕರುಣಿಪುದು
ಮಾರಾರಿ ದುರಿತಾರಿ ಕಾಲಾರಿ ಕರುಣಿಪುದು
ಭಕ್ತಾತ್ತಸಂತುಷ್ಟಮುಕ್ತನೇ ಕರುಣಿಪುದು
ಮುಕ್ತಿದಾಯಕನೇ ಗರಳಗ್ರೀವ ರಕ್ಷಿಪುದು
ಗಗನಚರಪುರದಹನವನವಹ್ನಿ ಕರುಣಿಪುದು
ಸಗುಣನಿರ್ಗುಣತತ್ವನಿತ್ಯನಿಧಿಕರುಣಿಪುದು
ಸತ್ಯನೆ ಸದಾಶಿವನೆ ಶಾಶ್ವತನೆ ಕರುಣಿಪುದು
ನಿತ್ಯನೆ ನಿರಾಶ್ರಯನೆ ನಿರ್ಭಯನೆ ಕರುಣಿಪುದು
ನಿರ್ಮಳನೆ ನಿರುಪಮನೆ ನಿರವಯನೆ ಕರುಣಿಪುದು
ನಿರ್ಮಳನೆ ನಿಷ್ಕಳನೆ ಕರುಣಿಪುದು ಕರುಣಿಪುದು
ಗಜಚರ್ಮದಭವ ಪುಲಿದೊವಲದರಸ ಕರುಣಿಪುದು
ಭುಜಗಾಭರಣ ನಿರಾವರಣನಿಧಿ ಕರುಣಿಪುದು



ಉಗ್ರದೇವೋಗ್ರಗರಳಗ್ರೀವನೆ ಕರುಣಿಪುದು
ನಿಗ್ರಹಾನುಗ್ರಹ ಸಮುಗ್ರಬಲ ಕರುಣಿಪುದು

ಎಂದು ಪೊಗಳುತ್ತ ಪೊಣ್ಮುತ್ತ ಪತ್ತಿರೆ ಬಂದು
ಇಂದುಧರನೊಳ್ಪೊಕ್ಕರಾನಂದದಿಂದಂದು
ಮೇಲೆ ನೆಗೆದುದು ವಿಮಾನಂ ಗಗನವೆಡೆಗೊಳಲ್
ಭೂಲೋಕದೊಳ್ ಪುಷ್ಪವೃಷ್ಟಿ ಸುಖಮಂ ಕೊಡಲ್
ನೆರೆದ ಕಾಶ್ಮೀರ ದೇಶಂ ನೋಡಿ ಬೆರಗಾಗೆ
ಹರಭಕ್ತರೆಲ್ಲರ್ಗೆ ಸಂತಸಂ ಸಿರಿದಾಗೆ
ಮಲುಹಣಿಯುಂ ಮಲುಹಣನು ಜಯಜಯಧ್ವನಿಯೊಳಗೆ
ಲಲನೆಯರ ಅನುಮಿಷರ ಚಮರ ಸೀಗುರಿಯೊಳಗೆ
ಬಂದು ಕೈಲಾಸಮಂ ಪೊಕ್ಕರಾನಂದದಿಂ
ಇಂದುಧರನಂ ಕಂಡು ವೈಯ್ಯಕ್ಕಿ ಹರುಷದಿಂ
ಬಂದಿರ್ದ ಸುಖಮಿಥುನಮಂ ಶಿವಂ ನೆರೆ ನೋಡಿ
ಇಂದುಮುಖಿ ಪಾರ್ವತಿಗೆ ತೋರಿ ಹರುಷಂಗೂಡಿ
ಕಡು ನೇಹದಿಂ ಮಲುಹಣಗೊಲಿದರಿಂತುಂಟೆ
ಬಿಡದುರಿವ ವಿರಹಕ್ಕೆ ಮೆಯ್ಯಾಂತರಿಂತುಂಟೆ
ಹಿಮದೊಳಗೆ ನಿಂದಿರ್ದು ಸೈರಿಸಿದರಿಂತುಂಟೆ
ಹಿಮಗೃಹದೊಳಗಿರ್ಪಂತೆ ನಿಂದಿರ್ದರಿಂತುಂಟೆ
ಎನ್ನಲ್ಲಿ ಬೇಡೆನಲ್ ಬೇಡಿ ಬಂದವರುಂಟೆ
**ತನ್ನ ವಿರಹವನೆನ್ನ ಮೇಲಿಟ್ಟರಿಂತುಂಟೆ**
ಎಂದು ಕೊಂಡಾಡುತುಂ ಗಣಕುಲಕೆ ತೋರುತುಂ
ಮುಂದುವರಿದಾನಂದ ರಸದೊಳೋಲಾಡುತುಂ
ಮಲುಹಣಂಗಲ್ಲಿ ನಲವಿಂದ ಗಣಪದವಿತ್ತು
ಮಲುಹಣಿಗೆ ರುದ್ರಕನ್ನಿಕೆಯರಿಪ್ಪಿರವಿತ್ತು

ಸಕಲ ಗುಣ ನಿಖಿಳಪತಿಯಕಳಂಕನೊಪ್ಪಿದಂ
ಸಕಲಸುರನಿಕರಮಣಿಮುಕುಟಪದನೊಪ್ಪಿದಂ
ಅಸಿತಸಮಭಸಿತಮಯನಿಶಿತತನು ವೊಪ್ಪಿದಂ
ಕುಸುಮಶರ ಪುರದಹನ ವನವಹ್ನಿಯೊಪ್ಪಿದಂ

ಸುರರ ಖೇಚರರ ಕಿನ್ನರರ ಪತಿಯೊಪ್ಪಿದಂ
ಗರುಡ ಗಂಧರ್ವ ಮುನಿವರರ ಪತಿಯೊಪ್ಪಿದಂ
ಸುರುಚಿರ ಸುಧಾಕರ ಕಳಾಜೂಟನೊಪ್ಪಿದಂ
ಆರರೆ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

**ಕಂದ॥** ಕರುಣಂ ಮಿಗೆ ಮಲುಹಣನಂ
ವಿರಹಾನಲದಗ್ಧ ಚಿತ್ತನಂ ಮಲುಹಣಿಯೊಳ್ ।
ನೆರಪಿ ನೆರೆ ಮೆರೆದ ಪಂಪಾ ।
ಪುರಪತಿ ಎಮಗೀಗೆ ಭಕ್ತಿ ಸುಖ ಸಂಪದಮಂ ॥

---

# ಭೃಂಗೀಶ್ವರನ ರಗಳೆ.

**ಕಂದ॥** ಶೃಂಗಾರಾದಿ ಸಮಸ್ತ ರ ।
ಸಂಗಳನಭಿನಯಿಸಿ ತೋರೆ ಮಿಗೆ ಮೆಚ್ಚುತ್ತಾ ॥
ಲಿಂಗಿಸುತೆ ತನ್ನನಿತ್ತಂ ।
ಭೃಂಗೀಶಂಗೆಮ್ಮ ಹಂಪೆಯ ವಿರುಪಾಕ್ಷಂ ॥

## ರಗಳೆ.

ಶ್ರೀಕೈಲಾಸ ಸಭಾಮಂದಿರದೊಳ್
ಲೋಕೇಶ್ವರನಿರೆ ಭದ್ರಾಸನದೊಳ್
ಕೆಲಬಲದೊಳ್ ಶೈವಗಣಂ ಬಂದಿರೆ
ಜಲಜಭವಂ ಜಲಶಯನಂ ಬಂದಿರೆ
ಸುರರುಂ ಕಿನ್ನರರುಂ ಸಂಗಡದೊಳ್
ಗರುಡರ್ಗಾಂಧರ್ವರ್ವಂಗಡದೊಳ್
ಮುನಿಗಳ್ ಸಿದ್ಧರ್ ವಿದ್ಯಾಧರರುಂ
ಮನುಗಳ್ ಕಿಂಪುರುಷರ್ಖೇಚರರುಂ

ವೇದಂ ತರ್ಕಂ ತಾವೊಂದೆಸೆಯೊಳ್
ನಾದಂ ರಾಗಂ ಬೇರೊಂದೆಸೆಯೊಳ್
ರವಿ ಶಶಿಕೋಟಿಗಳಂತೊಂದೆಸೆಯೊಳ್
ಭುವನಾಧಿಕ್ಯಪತಿಗಳೊಂದೆಸೆಯೊಳ್
ಮಕುಟಂಗಳ ಪಂಕ್ತಿಗಳೊಂದೆಸೆಯೊಳ್
ಸಕಲಾನರ್ಘ್ಯಮಣಿಗಳೊಂದೆಸೆಯೊಳ್
ತರದಿಂ ಸುರನಾರಿಯರೊಂದೆಸೆಯೊಳ್
ನೆರೆದಿರೆ ಕಿನ್ನರಿಯರದೊಂದೆಸೆಯೊಳ್
ಸುರಪನನಲನಂತಕ ನೈರುತಿಗಳ್
ವರುಣನನಿಲ ವಿತ್ತಪ ದಿಕ್ಪತಿಗಳ್
ಬಂದಿರೆ ಚಂದ್ರಾಭರಣನ ಸಭೆಯೊಳ್
ಹೆಂದದ ಕಾಂತಿ ನೆಗೆದವೇಣ್ದೆಸೆಯೊಳ್

ನೊಳೆತವು ಸುರಸತಿಯರ ತನುವಿಂದಂ
ಬೆಳೆದವು ರನ್ನದ ತೊಡಿಗೆಗಳಿಂದಂ
ದಳವೇರಿದವು ಸಿತಾಂಬರದಿಂದಂ
ತಳಿತವವರ್ಗಳ ಮುಖರಸದಿಂದಂ
ಕವಲ್ವರಿದವು ಕಂಗಳ ಕಡೆಯಿಂದಂ
ತವೆ ಕುಸುಮಿತವಾದವು ನಗೆಯಿಂದಂ
ಇಂತೆಸವಾ ನವರತ್ನಪ್ರಭೆಯೊಳ್
ಸಂತತವೊಪ್ಪುವ ಶರ್ವನ ಸಭೆಯೊಳ್
ಗಡಣದ ಕಿನ್ನರಿಯರ್ತಾರ್ಯೈಸಲ್
ನೃಡನ ಮನಂ ಸುಖದಿಂ ಹಾರೈಸಲ್
ರಾಗದ ರಸದೊಳ್ ಸಭೆಯೀಸಾಡಲ್
ಲಾಗಿನ ಲಹರಿಯೊಳಗೆ ಮುಳುಗಾಡಲ್

ವಹಣಿಯ ತೆರೆಯೊಳ್ ತೇಂಕಾಡುತ್ತಿರೆ
ಬಹು ಸುಗತಿಗಳೊಳಗೋಲಾಡುತ್ತಿರೆ
ತಿರುಪಿನ ಸುಳಿಗಳೊಳಗೆ ಸುಳಿವುತ್ತಿರೆ
ತರದಿಂ ವಹಣಿಗಳೊಳೆ ಮಣಿವುತ್ತಿರೆ
ಕಂಪನದೋಳ್ಪೊಂಪುಳಿವೋಗುತ್ತಿರೆ
ಇಂಪಿನ ಸೋಂಪಿನೊಳಗೆ ಕರಗುತ್ತಿರೆ
ಕಿನ್ನರಿಯರ್ ಶಿವನಂ ಕೇಳಿಸುತಿರೆ
ಪನ್ನಗಭೂಷಂ ತಲೆದೂಗುತ್ತಿರೆ
ಇರಲೊಂದಣಕದ ಜವನಿಕೆ ಮೂಡಲ್
ಸುರಸಭೆ ಕೌತುಕದಿಂದಂ ನೋಡಲ್
ಭೃಂಗೀಶಂ ತಾನಾಗದೆ ಮಾಣಂ
ಹಿಂಗಿಸು ಸಭೆಯಂ ಬಂದಂ ಜಾಣಂ
ತೆರಹಂಗುಡು ಚಕ್ರಿಗೆ ಕಿನ್ನರಪತಿ
ಹೆರೆಸಾರಿಂದ್ರ ತೊಲಗು ವಾಣೀಪತಿ
ಹೋ ಹೋ ಕಳಕಳವೇಕೆಂದೆನುತಂ
ಆಹಾ ಹೊಸ ಪರಿ ಚಿತ್ರೈಸೆನುತಂ
ನಂದೀಶಂ ನುಡಿವುತೆ ಹೆರಸಾರಲ್
ಚಂದದ ರಸವಾದ್ಯಂಗಳ್ ಸೇರಲ್



ಸಂಗೀತರಸಂ ರಂಗಂಬೊಕ್ಕುದು
ಸಂಗಡಿಸಿದ ಕಡು ಸೊಗಸಂ ಮಿಕ್ಕುದು
ಒಡದ ಮುನ್ನಡ್ಡೈಸಲ್ತೊಡಗಿತು
ನೋಡದ ಮುನ್ನವೆ ಸೊಗಯಿಸತೊಡಗಿತು
ನೋಡುವವರ ಮನಮುಂ ಜವನಿಕೆಯೊಳ್
ನಾಡೆ ಜಗಳವಾಡುತ್ತಿರೆ ಸಭೆಯೊಳ್

ದಿಧಿಕಾರವನುಗುಳಲ್ಮದ್ದಳೆಗಳ್
ಸುಧೆಯಂ ಸೂಸುತ್ತಿರಲಾವುಜಗಳ್
ಸುಗತಿಯನುಗುಳುತ್ತಿರೆ ಕಹಳೆಗಳುಂ
ಸೊಗಸಂ ಸೋಂಪಿಸುತಿರೆ ಕರಡೆಗಳುಂ
ಕೈಸಾಳಂ ಸನ್ನೆಯೊಳೊತ್ತುತ್ತಿರೆ
ದೇಸಾಳಂ ನುಡಿಯೊಳೆ ಬೆಳೆವುತ್ತಿರೆ
ತಾಳಂ ನರ್ತನಮುಂ ಕರೆವುತ್ತಿರೆ
ಮೇಳವಣೆಗೆ ಶಬ್ದಂ ಕೂಡುತ್ತಿರೆ
ಬಿಂಕದ ಕಾಳಾಸಂ ತುಳ್ಕಾಡಲ್
ಭೊಂಕನೆ ಮುಂದಣ ಜವನಿಕೆಯೋಡಲ್

ಹೊಗೆ ತಗ್ಗಿದ ಹುತಹವನಂತಿರ್ದಂ
ಮುಗಿಲೋಸರಿಸಿದ ರವಿಯಂತಿರ್ದಂ
ಛಾಯೆಯಡಂಗಿದ ಜ್ಯೋತಿಯೊಲಿರ್ದಂ
ಮಾಯೆಯಡಂಗಿದ ಹರನಂತಿರ್ದಂ
ಇರಲೊಪ್ಪಿತು ಭೃಂಗಿಯ ಶೃಂಗಾರಂ
ಸಿರಮಧ್ಯದ ಲಿಂಗದ ವಿಸ್ತಾರಂ
ಭಾಳಂ ತೀವಿದ ಭಸಿತದ ತಿಳಕಂ
ತಾಳಕ್ಕೊಲೆದಾಡುವ ಕೈಚಳಕಂ
ಫಣಿಕುಂಡಲ ಮುತ್ತಿನ ಹಾರಂಗಳ್
ಮಣಿಖಚಿತದ ರತ್ನದ ಮುದ್ರಿಕೆಗಳ್
ಕೆಯ್ಯೂರಂ ಹೊಸ ವಜ್ರದ ಕಂಕಣ
ಒಯ್ಯಾರಂ ಮಿಗೆ ಗೆಜ್ಜೆಯ ಚಲ್ಲಣ
ವೆಸೆಯಲ್ ಸರ್ವಾಂಗದ ಹೊಸ ಭಸಿತಂ

ಮುಸಗಲ್ ಕಾಲ್ತೊಡರು ಝಣ ಝಣೆಂ
ಕೆಯ್ಯೊಳಗೊಪ್ಪಲ್ ನರ್ತನ ದಂಡಂ
ಮೆಯ್ಯೊಳ್ ಹೊಳೆಯಲ್ ಗತಿಗಳ ತಂಡಂ
ಮೊಳೆಯಲ್ ಸರ್ವಾಂಗದೊಳೆ ಸುಗತಿಗಳ್
ಬೆಳೆಯಲ್ ತ್ರಿಭಂಗಿಗೊಂಡಾಕೃತಿಗಳ್
ಮುಂದುವರಿಯೆ ಮೆಚ್ಚುಗಳೋಲಗದೊಳ್
ಸಂದಣಿಸಲ್ಸಾಹಂಗಳ್ಮುಖದೊಳ್
ಕಡೆಗಂಗಳ ಕೊನೆಯೊಳ್ಮೈಳೈಸಲ್
ನಿಡುವುರ್ಬಿನ ತುದಿಯೊಳ್ಮೈಳೈಸಲ್
ಕರತಳದಿಂ ಬಹು ಗತಿಗಳ ಸೂಸುತೆ
ಚರಣತಳದಿ ಹೊಸ ತಾಳಂಗುಟ್ಟುತೆ
ತಡವಿ ತಡವಿಯಾಡುತೆ ಹಿಮ್ಮೆಟ್ಟುತೆ
ಕಡು ಸೊಗಸಂ ಕಾಳಾಸದಿ ತೋರುತೆ
ನಡೆದು ನಡೆದು ಲಾಗಿನಲೋಲಾಡುತೆ
ತಡೆದು ತಡೆದು ತೂಗುತೆ ಲೋಲಾಡುತೆ
ಸಿರಿದುಂ ನೆಗೆದಾಕಾಶದಿ ನಿಲುತಂ
ತರಹರಿಸುತೆ ಪಂಜರದೊಳ್ತಿರುತಂ
ಥಾಳದೊಳುಂ ಮುತ್ತಂ ಬಳುಕುತ್ತಂ
ತಾಳವನವಯುವದೊಳ್ ಪಿಡಿವುತ್ತಂ

ಆಡಿತೆ ಗತಿ ನಿಂದುದೆ ಕಾಳಾಸಂ
ನೋಡಿತೆ ಸೊಗಸಿರ್ದುದುವೆ ವಿಳಾಸಂ
ತಾನಾಗಿರೆ ರಸಮಯನಾಗಾಡುತೆ
ನಾನಾ ವಿಧ ಬಹು ಗತಿಗಳ್ ತೋರುತೆ
ಭಾಪಾವುಜೆ ಮದ್ದಳಿಕೇ ಯೆನುತಂ
ಭಾಪುರೆ ಕಹಳೆ ಸುದೇಶಿಯೆನುತ್ತಂ
ವೇವುರೆ ಹೊಸತುಗ್ಗಡಣೆಯೆನುತ್ತಂ
ರಾವುರೆ ತಾಳದ ಗತಿಯೆಂದೆನುತಂ
ಅವಧಾರುರೆ ಮೇಳವಣಿಯೆಂದೆನುತಂ
ಅವಧಾರಭವನೆ ಕರುಣಿಯೆಂದೆನುತಂ



ನೆಗೆದು ತಿರುಗಿ ಕೆಯ್ಯೂರಿ ನಿಲುತ್ತಂ
ಬಗೆಯದೆ ತಲೆಯಿಂ ನಡೆದಾಡುತ್ತಂ
ಬರೆಯಿಂದಂ ಹರಿದಾಡಿ ನಿಲುತ್ತಂ
ಬರಲೋಯೆ ತಿರ್ರನೆ ತಿರುಗುತ್ತಂ
ಕೆಯ್ಯೊಳ್ಕಾಲೊಗೆದಂತಾಡುತ್ತಂ
ಮೆಯ್ಯೆಲ್ಲಂ ಮುಖನಾದಂತಿರುತಂ
ಕೆಲದೊಳ್ ಬಲದೊಳ್ ಸುತ್ತೇಣ್ದೆಸೆಯೊಳ್
ನೆಲನೊಳ್ಮುಗಿಲೊಳಗಂಬರಜೆಡೆಯೊಳ್
ಹೊಸ ಕರಣಂಗಳನೀಡಾಡುತ್ತಿರೆ
ಶಶಿಧರನೊಲವಿಂ ತಲೆದೂಗುತ್ತಿರೆ
ಹೆಸರಿಡಬಾರದ ಗತಿಗಳನಾಡುತೆ
ಹೊಸ ಹೊಸ ಪರಿಗಳ ರೀತಿಯನಾಡುತೆ
ಮನದೊಳೆ ದೇಹವನಡಗಿಸಿಯಾಡುತೆ
ಮನವೇ ತನುವಾದಂತಿರಲಾಡುತೆ
ಗತಿಗೆ ಮನಂ ಹೊಸ ತನುವಾದಂತಿರೆ
ಗತಿಗೆ ತನುವಿನವಯುವವಾದಂತಿರೆ
ಸಮ ವಿಷಮಂಗಳ ಪರಿಗಳನಾಡುತೆ
ಕ್ರಮದಿಂ ನವರಸಗತಿಗಳನಾಡುತೆ
ಧಾರುಣಿಯಂದದೆ ತಿರದಿಂದಾಡುತೆ
ವಾರಿಯ ಪೋಲ್ ನಿರ್ಮಳನಾಗಾಡುತೆ
ಅನಲನ ಪೋಲುಜ್ವಲನಾಗಾಡುತೆ
ಅನಿಲನ ಪೋಲ್ ಸುತ್ತಂ ಸುಳಿದಾಡುತೆ
ಗಗನದ ಪೋಲ್ತನ್ಮಯನಾಗಾಡುತೆ
ಮೃಗಧರನಂತಿರೆ ಹೊಸ ಕಳೆಯೇರುತೆ
ದಿನಕರನಂತಿರೆ ದೆಸೆಯಂ ಬೆಳಗುತೆ
ಎನಿಸುಂ ಜೀವನ ಪೋಲ್ ಚೇತರಿಸುತೆ
ಎಳೆವಿಸಿಲಂತಿರೆ ಬಣ್ಣಂದೋರುತೆ
ಬೆಳುದಿಂಗಳ ಪೋಲ್ತಂಪಂ ಬೀರುತೆ
ಕೋಗಿಲೆಯಂತಿರೆ ಸರಗೈದಾಡುತೆ
ರಾಗದಿ ಗಿಳಿಯಂತಿರೆ ನುಡಿದಾಡುತೆ

ಆಳಿಯಂತಿರೆ ಝೇಂಕಾರದೊಳಾಡುತೆ
ಕಳಹಂಸೆಯು ಮೆಲ್ಮೆಲ್ಲನೆ ನಡೆಯುತೆ
ಎಳೆಲತೆಯಂದದಿ ತೂಗಾಡುತ್ತಂ
ಎಳೆಮಿಂಚಿನ ವೊಲ್ ಹೊಳೆದಾಡುತ್ತಂ
ಮುಗಿಲಂತಿರೆ ಮೊಳಗುತೆ ಬಂದಾಡುತೆ
ಮಿಗೆ ಚಾವಗೆಯಂತಿರೆ ನಲಿದಾಡುತೆ
ನವಿಲಂತಿರೆ ಸವಿದನಿಗೊಟ್ಟಾಡುತೆ
ನವ ಪ್ರೇರಣೆಯಿಂ ಶಬ್ದಂದೋರುತೆ
ನಲವಿಂ ಕಾಲೊಳ್ಕಟ್ಟಿದ ಗೆಜ್ಜೆಗ
ಳುಲಿಯಲ್ಗತಿಗಳನುಗುಳುವ ಹೆಜ್ಜೆಗ
ಳಳವಡೆ ಪದಗತಿಯಂ ಬಾರಿಸುತಂ
ಸೆಳೆವುತೆ ಹಿಮ್ಮೆಟ್ಟುತೆ ಸಿಂದಿರುತಂ
ಪದತಳದೊಳೆ ತಟಗಿರ್ರೆಂದೆನುತಂ
ಮೃದುಗತಿಯೊಳ್ ಘುಲಘುಲಕೆಂದೆನುತಂ
ಚರಣತಳದೊಳುಗ್ಘಡಿಸುವ ತೆರದಿಂ
ನೆರೆದ ಸುಗತಿ ಕಾಲ್ಗೆರಗಿದ ತೆರದಿಂ
ಗತಿ ಪುಳಕಿತವಾಗಿರೆ ಹೆಜ್ಜೆಗಳಿಂ
ದತಿ ಚಲ್ವಿನ ಶಬ್ದದ ಹೆಜ್ಜೆಗಳಿಂ
ಬಾರಿಸುತಂ ಕಿವಿಗಿನಿದಂ ತೋರುತೆ
ಹಾರೈಸಲ್ ಬಹು ರೂಪಂದೋರುತೆ

ದಕ್ಷನ ಮುಖಮಂ ಕೆಡಿಸಿದ ಪರಿಯಂ
ತ್ರ್ಯಕ್ಷಂ ತ್ರಿಪುರವನುರುಪಿದ ಪರಿಯಂ
ಕಾಮನನಭವಂ ನೋಡಿದ ಪರಿಯಂ
ಪ್ರೇಮದಿ ರತಿ ಮಿಗೆ ಶೋಕಿಪ ಪರಿಯಂ
ಗಿರಿಜೆ ತಪಸ್ಸಿನೊಳಗಿರ್ದ ಪರಿಗಳಂ
ಕರುಣದೊಳೀಶಂ ಬಂದ ಪರಿಗಳಂ
ಪ್ರೇತಪತಿಯನಂದುರುಪಿದ ಪರಿಯಂ
ಶ್ವೇತಂಗೊದವಿದ ಕರುಣದ ಪರಿಯಂ
ಉಪಮನ್ಯು ತಪಂಬಟ್ಟ ಪರಿಗಳಂ



ಕಪರ್ದಿ ಪಾಲ್ಗಡಲಿತ್ತ ಪರಿಗಳಂ
ಪುಲಿಯ ತೊವಲನುಗಿದುಟ್ಟ ಪರಿಗಳಂ
ಕಲಿ ಗಜಚರ್ಮವ ತೊಟ್ಟ ಪರಿಗಳಂ
ತಡೆಯದೆ ಕಡಲಂ ಕಡೆದ ಪರಿಗಳಂ
ಕಡೆಯಲ್ ಹೊಸ ಬಿಸುವುಗುಳ್ದ ಪರಿಗಳಂ
ಸುರಸಂತತಿ ಬಿಗುತೋರ್ಡಿದ ಪರಿಯಂ
ಕೊರಳೊಳ್ಗರಳವ ಧರಿಸಿದ ಪರಿಯಂ
ಭಾವರಸದ ಲಹರಿಯನಾಡುತ್ತಿರೆ
ದೇವಂ ಮನದೊಳ್ಮಿಗೆ ಹಿಗ್ಗುತ್ತಿರೆ

ನಂಬಿಗೆ ಕುಂಟಣಿಯಾದ ಪರಿಗಳಂ
ನಿಂಬಿಗೆ ಸೂರೆಯನಿತ್ತ ಪರಿಗಳಂ
ಭೋಗಣ್ಣನೊಡನೆ ಪೋದ ಪರಿಗಳಂ
ರಾಗದಿ ಪುರದೊಳ್ನಿಂದ ಪರಿಗಳಂ
ಕಣ್ಣಪ್ಪಂ ಕಣ್ಣಿತ್ತ ಪರಿಗಳಂ
ಬಣ್ಣಿಸೆ ಶರ್ವಂ ಮೆರೆದ ಪರಿಗಳಂ
ಕಲ್ಲಂ ಕೊಂಡವನಿಟ್ಟ ಪರಿಗಳಂ
ನಿಲ್ಲದೆ ವರವಂ ಕೊಟ್ಟ ಪರಿಗಳಂ
ಬೇಡಂ ಬೇಂಟೆಯನಾಡಿದ ಪರಿಯಂ
ರೂಢೀಶಂ ದಿಟ ಮಾಡಿದ ಪರಿಯಂ
ಓಹಿಲನಂ ಕೊಂಡೊಯ್ದಾ ಪರಿಯಂ
ನೇಹದೊಳುದ್ಭಟನೈದಿದ ಪರಿಯಂ
ಅಲ್ಲಯ್ಯನ ಕೈಯೊಕ್ಕ ಪರಿಗಳಂ
ಬಲ್ಲಾಳನ ಮನವರಿದ ಪರಿಗಳಂ
ಏಕಾಂತದ ರಾಮಯ್ಯನ ಪರಿಯಂ
ಲೋಕಾಂತವದಂ ಮಾಡಿದ ಪರಿಯಂ
ಬಸವಣ್ಣಂ ವಿಷವುಂಡ ಪರಿಗಳಂ
ವಿಷವುಂ ಪ್ರಸಾದವಾದ ಪರಿಗಳಂ
ಕನ್ನೆಯಳುತೆ ಹಾಲೆರೆದ ಪರಿಗಳಂ
ಬಿನ್ನಣದಿಂ ತಾನುಂಡ ಪರಿಗಳಂ

ಚೆನ್ನನ ಮನೆಯೊಳು ಸಲಿಸಿದ ಪರಿಯಂ
ಮನ್ನಿಸಿ ಚೋಳಂಗೊಲಿದಿಹ ಪರಿಯಂ
ಚೇಲಾಳನನರಿದಿತ್ತ ಪರಿಗಳಂ
ನೋಲದ ಮಗನಂ ಕರೆದ ಪರಿಗಳಂ
ಕಕ್ಕನ ಕಂಕರಿಗಾಡಿದ ಪರಿಯಂ
ಚಿಕ್ಕನನಭವಂ ಕಾಡಿದ ಪರಿಯಂ
ದಾಸನನಭವಂ ಕಾಡಿದ ಪರಿಯಂ
ಕೇಶವರಾಜಂಗಂಜಿದ ಪರಿಯಂ
ಗುಂಡನ ಮುಂದಾಡಿದ ಪರಿಯ.ಗಳಂ
ಚಂಡೇಶ್ವರನಂ ಮೆರೆದ ಪರಿಗಳಂ
ಹಂಪೆಯೊಳಗೆ ನೆಲಸಿದ ಪರಿಯುಗಳಂ
ಹಂಪೆಯ ಹರಿಹರಗೊಲಿದ ಪರಿಗಳಂ †
ಇವು ಮೊದಲಾಗಿರೆ ಶಂಕರನೊಲವಿಂ
ಸವಿದಾಡಿದ ಸುಖಲೀಲೆಯೊಳೊಲವಿಂ
ಬಹು ರೂಪುಗಳಿಂ ಬಂದಾಡುತ್ತಂ
ಬಹಳ ರಸಂಗಳೊಳೋಲಾಡುತ್ತಂ

ಆಡುತ್ತಾಡುತ್ತೆಡಿಸಿ ನಿಲುತಿರೆ
ನೋಡುವ ಸಭೆ ಮಿಗೆ ಘೋಳನೆ ನಗುತಿರೆ
ಸಭೆಯ ಮೆಯ್ಯ ಜೊಮ್ಮಲ್ಲಂ ಹಾರಲ್
ಅಭಿನವ ಮುಖದೊಳ್ ನಸುನಗೆ ದೋರಲ್
ಪ್ರಹಸನ ರಸಮಂ ತೊಡಗಿದನಾಗಳ್
ಸಹಸದ ನಗೆಗಳ್ಮೊಡಲ್ಮೊಗದೊಳ್
ಕೊಡಗಿಯಾಟವನೇರಿಸಿಕೊಂಡಂ
ನೋಡಿ ನಗುತ್ತಿರೆ ದೇವರ ತಂಡಂ
ತಲೆಯೊಳ್ಸುತ್ತಿದ ಕವಡಿಕೆ ದಂಡೆಗ
ಕೊಲವಿಂ ಪಲ್ಗಳ ಎಡಿಸಿದ ಕವಡೆಗ
ಕ್ಕಣ್ಣೊಂದರೊಳಿಕ್ಕಿದ ಬೆಗ್ಗವಡಿಕೆ

† ಪಾಠಾಂತರ—
ಹಂಪೆಯ ಹರಿಗಂಗೊಲಿದಾಪರಿಯಂ



ಕಣ್ಣಂ ಮೆಳ್ಳಿಸಿ ನೆತ್ತಿಯ ಜೆಂಡಿಕೆ
ಹಲುಗಿರಿಯುತೆ ಪುರ್ಬಂ ನೆಗೆಪುತ್ತಂ
ಬಲುಗಿವಿಯಂ ಮಂಡಿಸಿ ಮಣಿವುತ್ತಂ
ಬಾಯಂ ತೆರೆವುತೆ ಬರಿದೆ ನಗುತ್ತಂ
ಆ ಯೆಂದೀಶನನೇಡಿಸಿ ನಿಲುತಂ
ಕೊಂಕಿ ನಡೆದು ಕೆಯ್ಯಂ ಮುರುಕಿಸುತಂ
ಟೊಂಕಮನುರುಗಿಸಿ ಸಿಂದೇಡಿಸುತಂ
ಮೊಳಕ್ಕೈ ಮುಂಗೈಗಳನಾಡಿಸುತಂ
ಮೊಳಕಾಲಿಕ್ಕುತ್ತೆರಗುತೆ ನಿಲುತಂ
ಕಾಲುಂ ಕೆಯ್ಯುಂ ಜೆಂಗೊಂಡಾಗಿರೆ
ಮೇಲುಂ ತಳವುಂ ಕಲವುಂ ಡೊಂಕಿರೆ
ಕುಳ್ಳಿರ್ದೇಳುತ್ತಂ ಬೀಳುತ್ತಂ
ಅಳ್ಳೆಯನೆರಡು ಕರದಿ ಬೆರಟುತ್ತಂ
ಮೆಳ್ಳಿಸಿ ನೋಡುತೆ ಪುರ್ಬಂ ಕೆತ್ತುತೆ
ಘೊಳ್ಳನೆ ಸಭೆ ನಗೆ ಪಲ್ಲಂ ಕಿರಿವುತೆ
ಅಡ್ಡಂ ತಿಗಟಂ ವಿಸಟಂ ಬರುತಂ
ಗುಡ್ಡಿಸಿ ಮೂಗಿಲುದ್ದಕೆ ನೆಗೆವುತ್ತಂ
ಅಣಕಂ ಮೆರೆವುತೆ ಮೆಯ್ಯಿಕ್ಕುತ್ತಂ
ತ್ರಿಣಯನ ನೋಡುತೆ ಗಹಗಹಿಸುತ್ತಂ
ಮೂಗಿನ ತುದಿಯಂ ಮೆಳ್ಳಿಸಿ ನೋಡುತೆ
ತೂಗಿ ತೊನೆದು ಸೃಚಪ್ಪಳೆಗುಟ್ಟುತೆ
ತುದಿಗಾಲೊಳು ನಿಲುತಂದೊಲೆದಾಡುತೆ
ಬೆಮಾದರಂತಿರೆ ಬೆಚ್ಚುತ್ತೋಡುತೆ
ನಿಂದಿರುತೊಂದೇ ಮಡುಹಾಡಿಸುತಂ
ಮಂದಿಯ ನೇಡಿಸುತಪ್ಪಳಿಸುತ್ತಂ
ಮುಡುಹುಗಳಂ ಕೊರಳೊಳು ಪತ್ತಿಸುತಂ
ಕಡೆವಾಯೊಳೆ ತುಟಿಗಳ ಜೋಲಿಸುತಂ
ಬರಿದೇ ಧ್ವನಿಸಿ ಬೆಂಗಾಗುತ್ತಂ
ಮರದಂತೇನಕ್ಕೆಯನರಸುತ್ತಂ
ಹೊಟ್ಟೆಯನಾಡಿಸುತಂ ಹೊಂಗಿಸುತಂ

ನಿಟ್ಟೊಡಲಾಗುತ್ತಂ ನಿಂದಿರುತಂ
ಕೊಂಕಿದ ದೇಹಮನುರುಗಿಸಿ ನಡೆವುತೆ
ಬಂಕಿದ ಮುಖದೊಳ್ ಬಾಯ್ದೆರೆದುಲಿವುತೆ
ತೋಳಂ ಬೀಸುತೆ ತೂಗಾಡುತ್ತಂ
ನೀಳಂ ಮಾಡಿಯೆ ಮೊಗದಿರುಹುತ್ತಂ
ದಿಟ್ಟಿಸಿ ನೋಡುತ್ತಂ ಜಿಗಲುತ್ತಂ
ನೆಟ್ಟಂದದಿ ನಿಂದಿರ್ದು ನಗುತ್ತಂ
ತುಟಿ ಮಿಡುಕುತ್ತಿರೆ ಹಲು ಹರಿಗುಟ್ಟುತೆ
ಕಟಿಯಲುಗುತ್ತಿರೆಯಡ್ಡಂ ಮೆಟ್ಟುತೆ
ಕುಂಟನ ವೋಲ್ಕೊಂಕಾಡಿ ನಿಲುತ್ತಂ
ತುಂಟನ ವೋಲ್ಬೆಚ್ಚಡಿಗಳನಿಡುತಂ
ಹೆಳವನ ವೋಲ್ಮೊಳಕಾಲಿಕ್ಕುತ್ತಂ
ಗಳಿಯಂದದೆ ಸೈವೆರಗಾಗುತ್ತಂ
ಎದ್ದೆದ್ದೆತ್ತಿದ ವೋಲ್ ನಿಲ್ಲುತ್ತಂ
ಬಿದ್ದುಂ ಬಿಲ್ಲಂದದೆ ಬೆರೆಯುತ್ತಂ
ಮೂಗಂ ಪತ್ತಿಸಿ ಕೊಡಕೆಯನಾಡಿಸಿ
ಮೋಗಂ ಮೆಳ್ಳಿಸಿ ಕೊರಲಂ ತೂಗಿಸಿ
ತಲೆಯ ನಿವಾಳಿಸಿ ಕರವಂ ಬಾರಿಸಿ
ಸಿಲವಂ ಕೊಂಕಿಸಿ ಬೆರಲಂ ಬಂಕಿಸಿ
ಸುರಪನನೇಡಿಸುತಂ ರೋಡಿಸುತಂ
ಶರಣರ ಚರಣವ ಪಿಡಿದಾಡುತ್ತಂ
ದೇವನನುರುಗಿಸಿ ನೋಡಿ ನಗುತ್ತಂ
ದೇವಸಭೆಯನೊಲಿದಲ್ಲಾಡಿಸುತಂ
ನಗೆಗಳನೆಲ್ಲರ ಮೊಗದೊಳ್ಚೆಲ್ಲುತೆ
ಬಗೆಗಳ ನಗೆಯಂ ಹೊರವಂಟಾಡುತೆ
ನೋಡುವವರ ನಗೆ ಗೂಡಾಗಿಸುತಂ
ನೋಡುವರವಯವವಂ ನಗಿಸುತ್ತಂ
ಬಂದಾಡುತ್ತಿರೆ ಹರನೋಲಗದೊಳ್
ಹೆಂದದ ನಗೆಗಳ್ ಮಸಗಲ್ಕಾಗಳ್



ಹೊಸ ಭಕ್ತಿಯ ಕರುವಿನ ಪೊಲವಂತಿರೆ
ಶಶಿಧರನಚ್ಚರಿಯೊಳ್ಮರೆವುತ್ತಿರೆ
ಹರಕೀರ್ತಿಯನೆ ಕೊಂಡಾಡುತ್ತಿರೆ
ವರ ಮೂರ್ತಿಯನೆ ಕಣ್ಣೊಳಗಿಟ್ಟಿರೆ
ಮೈಸೋಂಕಂ ತನ್ನೊಳ್ ತೆಗೆವುತ್ತಿರೆ
ಕೈ ಶಿವಪೂಜೆಗೆ ಲವಲವಿಸುತ್ತಿರೆ
ತನ್ನ ಮರೆವುತೆ ಪರವಶನಾಗಲ್
ಭಿನ್ನಂದೋರದ ಸಮಸುಖಿಯಾಗಲ್
ಹರ ಸಾತ್ವಿಕ ಭಕ್ತಿಯ ರಸದೋರಲ್
ಕರುಣ ರಸಂ ಹರನೊಳ್ ಕೈಮೀರಲ್

ಹಿಡಿದೆತ್ತಿದ ಭೃಂಗೀಶನನೀಶಂ
ಅಡಿಗಡಿಗಪ್ಪಿದನಾ ಗಿರಿಜೇಶಂ
ಆಲಿಂಗಿಸಿ ಮೆಯ್ಯಂ ತಡಹುತ್ತಂ
ಸಾಲದಿದೆನ್ನಂ ಕೊಟ್ಟೆನೆನುತ್ತಂ
ಹಂಪೆಯ ವಿರುಪಂ ಕರುಣಂ ಮಾಡಲ್
ಸೊಂಪಿಂ ಹೊಗಳಲ್ ಸುರಸಭೆ ನೋಡಲ್
ದೇವ ಶರಣಸಂಕುಳಪರಿಪಾಲಕ
ದೇವ ಶರಣ ಮುಗುದಾಜನ ಲೋಲಕ
ದೇವ ಸಕಲವರ ವಿದ್ಯಾವಲ್ಲಭ
ದೇವ ಅನೇಕ ಶೃತಿತತಿ ದುರ್ಲಭ
ದೇವ ನತಾಖಂಡಲ ಸುರಮಂಡಲ
ದೇವ ವಿರಾಜಿತ ಫಣಿಪತಿಕುಂಡಲ
ಎಂದು ಪೊಗಳುತಿರೆ ಸಂತಸದಿಂದಂ
ಇಂದುಧರಂ ಹಿಗ್ಗುತೆ ನಲವಿಂದಂ
ವರವಂ ಕುಡಲೆಂದನುಗೈವುತ್ತಂ
ಸುರಸಂತತಿಗಭಯವನೀವುತ್ತಂ
ಪರಿಪರಿಯುಳ್ಕರೊಳೋಲಾಡಿಸುತಂ
ಶರಣತತಿಗೆ ಭಕ್ತಿಯನೀವುತ್ತಂ
ಭೃಂಗೀಶನನಡಿಗಡಿಗಪ್ಪುತ್ತಂ

ಹಿಂಗದೆ ನೇಹದಿ ಸಲೆ ಮೆಚ್ಚುತ್ತಂ
ಹಂಬೊಮ್ಮರ ವರ ಗುರು ವೊಪ್ಪಿರ್ದಂ
ಶರಣಜನದ ಸುರತರು ವೊಪ್ಪಿರ್ದಂ
ಭಕ್ತರ ಪರುಷದ ಕಣಿಯೊಪ್ಪಿರ್ದಂ
ಭಕ್ತರ ಚಿಂತಾಮಣಿಯೊಪ್ಪಿರ್ದಂ
ಭಕ್ತರ ಮತಿಯುನ್ನತಿಯೊಪ್ಪಿರ್ದಂ
ಭಕ್ತರ ಕಣ್ಣಿಂಗತಿಯೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ಕಂದ॥ ಪರಮೋತ್ಸಾಹದಿ ಭೃಂಗೀ ।
ಶ್ವರನಂ ಕೊಂಡಾಡಿ ನೋಡಿ ನಲವೇರುವ ತಂ ।
ಕರನೊಲ್ದು ಭಕ್ತಿಸುಖಮಂ ।
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ ॥

---

## ಲಿಂಗಾರ್ಚನೆಯ ರಗಳೆಯು.

ಕಂದ॥ ಇಂದುಧರ ನಿಮ್ಮ ಚರಣ ।
ದ್ವಂದವನನವರತವರ್ಚಿಸುತ್ತಿಹ ಸುಖಮಂ ॥
ತಂದೆ ಭವಭವದೊಳೀವುದು ।
ಕಂದರ್ಪ ಮದಾರಿ ಹಂಪೆಯ ವಿರೂಪಾಕ್ಷಾ ॥

### ಲಲಿತ ರಗಳೆ.

ಶ್ರೀಗುರುವೆ ಹಂಪೆಯ ವಿರೂಪಾಕ್ಷ ಕೇಳಯ್ಯ
ನಾಗಭೂಷಣ ನಿಮ್ಮ ನೇಳೆಯಾಳಾನಯ್ಯ
ಸಲುಗೆಯಿಂ ಬಿನ್ನಪಂಗೈಯ್ದಪೆಂ ನಾನಯ್ಯ
ಒಲವಿಂದಲೆನಗೆ ವಿರೂಪಾಕ್ಷ ಕರುಣಿಪುದಯ್ಯ
ಧರೆಯೊಳಗೆ ನಿಮ್ಮ ತೊಳ್ತೆಂದು ಸಲಹುವುದಯ್ಯ
ಪರಮ ಭಕ್ತರ ಪದಕ್ಕೆನ್ನ ಸಲಿಸುವುದಯ್ಯ

ಅಗಲದೆ ನಿರಂತರಂ ನಿಮ್ಮನರ್ಚಿಸುವುದಂ
ಮಿಗೆ ಮೆಚ್ಚಿ ಮನವುಕ್ಕಿ ಬಂದು ಪುಳುಕಿಸುವುದಂ
ತುಂಗಭದ್ರಾನದಿಯ ಸಲಿಲಮಂ ಮೊಗೆತಂದು
ಲಿಂಗ ನಿಮಗಾನೆ ಮನವಾರೆ ಮಜ್ಜನಕೆರೆದು
ಮುಗಮುಗಿಪ ಚಂದನವನುದ್ವರ್ತನಂ ಮಾಡಿ
ಅಗರು ಕರ್ದಮಗಳಂ ನಿಮ್ಮ ಮೆಯ್ಯೊಳ್ತೀಡಿ
ಅರೆವಿರಿದ ಸುರಗಿ ಸುರಹೊನ್ನೆ ಸಂಪಿಗೆಗಳಂ
ಪರಿಮಳಂಗಳನೀವ ದುಂಡ ಮಲ್ಲಿಗೆಯರಲ್ಗಳಂ
ತನಿಗಂಪನೀವ ಮಲ್ಲಿಗೆ ಮೊಲ್ಲೆಜಾಜಿಯುಂ
ಮನವೊಸೆದು ಕುಯ್ತಂದ ಪರಿಮಳದ ಪಾದ್ರಿಯುಂ
ಕಂಪಿಸುವ ಕೈಗಳಿಂ ಪೂಮಾಲೆಗಳನೆತ್ತಿ
ಪೆಂಪೆಸೆಯೆ ಶಿವ ನಿಮ್ಮ ಸಿರಿ ಮುಕುಟದೊಳ್ಸುತ್ತಿ
ಕಮನೀಯವೆನಿಪ ಗುಗ್ಗುಳದ ಧೂಪವನೆತ್ತಿ

ರುದ್ರ ಪಶುಪತಿ ಹಲಾಯುಧ ಮಯೂರಯ್ಯನಂ
ಸಾಮವೇದಿಗಳಿಗೊಪ್ಪುವ ಶ್ವಪಚದೇವರಂ
ಕಾಮಿತವನೀವ ಸಿರಿಯಾಳಚಂಗಳೆಯರಂ
ನಂಬಿಯಣ್ಣನ ನಿಂಬಿಯಕ್ಕ ಸತ್ಯಕ್ಕನಂ
ಕೆಂಭಾವಿಯೊಳ್ಮೆರದ ಭಂಗಭೋಗಣ್ಣನಂ
ಕೊಂಡಗುಳಿಯ ಕೇಶಿರಾಜ ತೆಲುಗೇಶನಂ
ಪಂಡಿತಾರಾಧ್ಯನಿಂಡೆಯ ಶಾಂತಿಮಯ್ಯನಂ
ಚೋಳ ಚೇರಮ ಗೊಲ್ಲಳನ ಬಿಬ್ಬಿಬಾಚನಂ
ಕೋಳೂರು ಕೊಡಗೂಸು ಮಹದೇವಿಯಕ್ಕನಂ
ಕಾಳಿದಾಸನ ಕಣ್ಣಪ್ಪನ ಚೆನ್ನಬಸವನಂ
ಮೋಳಿಗೆಯ ಮಾರಿತಂದೆಯ ಮಾದಿರಾಜನಂ
ಅಮ್ಮವ್ವೆ ರೆಮ್ಮವ್ವೆ ಕದಿರ ರೆಬ್ಬವ್ವೆಯಂ
ನಿರ್ಮಳ ಜ್ಞಾನಿ ಕಮಳವ್ವೆ ಬಾಚವ್ವೆಯಂ
ಗುರುಭಕ್ತ ಜಗದೇವ ಮೊಲ್ಲೆ ಬೊಮ್ಮಣ್ಣನಂ
ಪರದೈವ ರಹಿತ ಶಂಕರದಾಸಿಮಯ್ಯನಂ
ನಚ್ಚಿನರುವತ್ತುಮೂವರನಸಂಖ್ಯಾತರಂ
ಅಚ್ಚರಿಯೊಳೆಸವ ಭಕ್ತ್ಯಂಗನೆಯರೆಲ್ಲರಂ
ಭಕ್ತಿಯಿಂ ಪಾಡಲ್ಕೊಸೆದು ಮೆಚ್ಚಾಗಿ
ಯುಕ್ತಿಯಿಂ ಮೀರಿಸರಸಂ ನಿಮ್ಮ ನಚ್ಚಾಗಿ
ಹೊಸ ರೀತಿ ರಾಗದಿಂ ದೆಸೆದೆಸೆಗಳಂ ಬೀರಿ
ಪಸರಿಸುವ ತಾಳದಿಂ ಸುಗತಿ ನರ್ತನವೇರಿ

ಇಂತು ಮಹಲಿಂಗಮಂ ಕಣ್ಗಳೊಳಗೊತ್ತುತಂ
ಮುಂತೆ ಹಾ ಹಾ ಯೆಂದು ವಿಷಯಕ್ಕೆಯುಳ್ಕುತಂ
ಭೃಂಗಿಯ ಪದಂಗಳಂ ನೆನೆನೆನೆದು ನೆನೆನೆನೆದು
ಭೃಂಗಿಯಿಂ ಕೋಡಗಾಟವನಾಡಿ ತೊನೆತೊನೆದು
ಗತಿ ವಾದ್ಯ ಗತಿಗಳಿಂ ಕುಣಿಕುಣಿದು ಕುಣಿಕುಣಿದು
ಅತಿಶಯ ಸುಬೋಧೆಯಿಂ ಭಕ್ತಿಗೆ ಮನಂದಣಿದು
ಏನುವಂ ತಾನರಿಯದಾನಂದದಿಂ ನಿಂದು
ಮೌನವೇ ಗತಿ ಮತಿಯದಾಗಿ ನೆರೆ ಸಲೆಸಂದು



ಪೊಗಳ್ವಕ್ಕರಂ ನಲಿದು ನಾಲಿಗೆಯ ಮೇಲಿರಲ್
ಬಗೆಯ ಭಾವಂ ಒಲಿದು ಮನವನೆಡೆಗೊಂಡಿರಲ್
ಏನೆನ್ನ ಶಂಭುವೆ ಸದಾಶಿವ ಮಹಾದೇವ
ಏನೆನ್ನ ಕಾರುಣ್ಯಸಿಂಧುವೆ ಮಹಾದೇವ
ಏನೆನ್ನ ನಚ್ಚಿನಧಿದೈವವೆ ಮಹಾದೇವ
ಏನೆನ್ನ ಮೆಚ್ಚಿನ ಮಹಾಸುಧೆ ಮಹಾದೇವ
ಏನೆನ್ನನೊಲಿದು ಪೊರೆವಾಳ್ದನೆ ವಿರೂಪಾಕ್ಷ
ಏನೆನ್ನನೊಲಿವ ಕುಲದೈವವೆ ವಿರೂಪಾಕ್ಷ
ಎಂದೀ ತೆಂದಿ ನಿಮ್ಮನಪ್ಪಿ ಸುಖವಡೆವುದಂ
ತಂದೆ ಕರುಣಿಪುದಯ್ಯ ಸದ್ಭಕ್ತನಪ್ಪುದಂ

ಆವ ಜಾತಿಗಳೊಳಗೆ ಹುಟ್ಟಿಸಿದಡೆಲೆ ದೇವ
ನೀವಲ್ಲದರಿಯದಂತಿರಿಸೆನ್ನನೆಲೆ ದೇವ
ಇಳಿಕೆಯ್ಯದೀ ಸುಖವನೆನಗೆ ಕರುಣಿಪುದಯ್ಯ
ಬಳಿವಳಿಯ ತೊಳ್ತೆಂದು ಬಡಿದು ಕಲಿಸುವುದಯ್ಯ
ಬೇರೊಂದನೊಲಿವನಲ್ಲೆಂಬುದನರಿವುದಯ್ಯ
ಸಾರಿ ಮೊರೆಯಿಟ್ಟೆನೆನ್ನಂ ದಯದಿ ನೋಡಯ್ಯ
ಆವ ತೆರದಿಂದಾದೊಡಂ ಗುರು ವಿರೂಪಾಕ್ಷ
ದೇವ ಕರುಣಿವುದಯ್ಯ ಹಂಪೆಯ ವಿರೂಪಾಕ್ಷ
ಆಳಿನಪಮಾನವಾಳ್ದಂಗಯ್ಯ ಕಾಯಯ್ಯ
ಜಾಳಿಸಿದ ಪಾಪಾತ್ಮವಿದನಿನ್ನು ನೀಗಯ್ಯ
ಮಾಡುವವನುಂ ನೀನೆ ನೋಡುವವನುಂ ನೀನೆ
ಬೇಡುವವನುಂ ನೀನೆ ನುಡಿಸುವವನುಂ ನೀನೆ
ಈಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರುಪಾಕ್ಷ
ರಕ್ಷಿಸು ವಿರೂಪಾಕ್ಷ ರಕ್ಷಿಸು ವಿರೂಪಾಕ್ಷ
ಭಯಹರ ವಿರೂಪಾಕ್ಷ ದಯೆಗೈ ವಿರೂಪಾಕ್ಷ
ಜಯಜಯ ವಿರೂಪಾಕ್ಷ ಜಯಜಯ ವಿರೂಪಾಕ್ಷ
ಜಯ ಜಯ ನಮಸ್ತು ತೇ ಜಯ ಜಯ ನಮಸ್ತು ತೇ
ಜಯ ಜಯ ನಮಸ್ತು ತೇ ಜಯ ಜಯ ನಮಸ್ತು ತೇ

ಕಂ॥ ಕೇಳಯ್ಯ ವಿರೂಪಾಕ್ಷ ಕೃ।
ಪಾಳುವೆ ನಿಮ್ಮಡಿಯ ತೊತ್ತು ತೊತ್ತಿನ ಭೃತ್ಯಂ
ಗಾಳಿನಾಳಾಳಿ ನಾಳಾ।
ಳೀಳುಂ ಭವದಲ್ಲಿ ಹಂಪೆಯ ವಿರೂಪಾಕ್ಷಂ॥

---

## ಪ್ರಾರ್ಥನೆಯ ರಗಳೆ.

ಕಂ॥ ದೇವ ಹರ ದೇವ ಪುರಹರ।
ದೇವ ಸದಾ ವರದ ದೇವ ಚಂದ್ರಾಭರಣಾ॥
ದೇವ ಪತಿ ಎನಗೆ ಕರುಣಿಸು।
ದೇವ ಕೃಪಾ ಬಹುಳ ಹಂಪೆಯ ವಿರೂಪಾಕ್ಷಾ॥

### ಮಂದಾನಿಲ ರಗಳೆ.

ದೇವ ಶ್ರೀ ಪಂಪಾಪುರದಧಿಪತಿ
ದೇವ ಸದಾನತ ಸಂಕುಳ ಸದ್ಗತಿ
ದೇವಾ ಭಾಸುರ ಪಿಂಗ ಜಟಾಧರ
ದೇವ ತರಂಗ ಲಸದ್ಗಂಗಾಧರ
ದೇವ ಮಹೇಶ ಸುಧಾಕರಶೇಖರ
ದೇವ ಕಿರೀಟಾಲಂಕೃತ ಶುಭಕರ
ದೇವ ಮಧುವ್ರಜ ಸಮ ನೀಲಾಳಕ
ದೇವ ಭವಾನೀ ಸಮ ಸುಖ ಪಾಲಕ
ದೇವ ದಿವಾಕರ ಶಶಿ ಶಿಖಿ ಲೋಚನ
ದೇವ ನತ ವ್ರಜ ಮಾಯಾ ಮೋಚನ
ದೇವ ಭುಜಂಗಾರಾಜಿತ ಕುಂಡಲ
ದೇವ ಸಮುನ್ನತ ಘನ ಭುಜ ಮಂಡಲ
ದೇವ ಜಗತ್ಪಾವನ ಪಂಚಾನನ
ದೇವ ಹರಿಸ್ತುತ ನತ ಚತುರಾನನ
ದೇವ ಗಜಾಜಿನ ಮಂಡಿತ ವಿಗ್ರಹ
ದೇವ ಪ್ರಮಥ ನಿಕಾಯಾನುಗ್ರಹ
ದೇವಾ ನಿಶಿತಾಯುಧ ಸಂಚಯ ಧರ
ದೇವ ಸರೋಜೋದ್ಭವ ಶಿರಧರ ಕರ
ದೇವ ಸುರವ್ರಜ ಮಸ್ತಕ ಭೂಷಣ
ದೇವ ಶರಣ ಸಂಕುಳದಘ ಶೋಷಣ

ದೇವ ಫಣಾಧರ ವಳಯ ವಿಮಂಡಿತ
ದೇವಾನತ ಜನ ಸಂತತ ಸದ್ಗತಿ
ದೇವಾ ಹರಿ ಬೊಮ್ಮಾರ್ಚಿತ ಪದತಳ
ದೇವ ಯಶೋಧವಳಿತ ದಿಕ್‌ಸಂಕುಳ
ದೇವಾ ಪರಿವೃತ ಸುರಭೂರುಹ ಜಯ
ದೇವಾ ಅಪಾಯ ರಹಿತ ಜ್ಯೋತಿರ್ಮಯ
ದೇವಾ ಸಜ್ಜನ ಭವ ಭಯ ಭಂಜನ
ದೇವ ನಿರಂತರ ನಿತ್ಯ ನಿರಂಜನ
ದೇವ ಪುರತ್ರಯ ವನ ದಾವಾನಲ
ದೇವ ಜಲಂಧರ ಮೇಘ ಮಹಾಬಲ
ದೇವ ರತೀಶ ಮದಾಂಧ ದಿವಾಕರ
ದೇವ ಕೃತಾಂತ ಕಳೇವರ ಸಂಹರ
ದೇವ ಮೃಡಾಣೀ ದೇಹಾರ್ಧಪ್ರದ
ದೇವ ಸುಪರ್ಣಧ್ವಜ ಚಕ್ರಪ್ರದ
ದೇವ ವಿಶಾಲ ವೃಷೇಂದ್ರ ಸುಖಾಸನ
ದೇವಾ ದಕ್ಷ ವಿಯಾಗ ವಿನಾಶನ

ದೇವಾ ಅನೇಕ ಶ್ರುತಿ ತತಿ ದುರ್ಲಭ
ದೇವ ಪುರಂದರ ಸಂಕುಳ ವಲ್ಲಭ
ದೇವ ಮಹಾ ಸಂಪತ್ ಪರಿಶೋಭಿತ
ದೇವ ವಿಶೇಷ ಜ್ಞಾನ ವಿಭೂಷಿತ
ದೇವಾ ಮುಕ್ತಿ ನಿಕಾಯ ವಿರಾಜಿತ
ದೇವಾ ಶಕ್ತಿತ್ರಯ ಸಂಸೇವಿತ
ದೇವ ವಿಶುದ್ಧ ಷಡಧ್ವ ನಿಕೇತನ
ದೇವ ಸದಾ ಶರ್ವಾಣೀ ಚೇತನ
ದೇವಾ ನಿರುಪಮ ನಿರ್ಮಳ ನಿಷ್ಕಳ
ದೇವ ಸದಾವರಣಪ್ರಭು ನಿಶ್ಚಳ
ದೇವಾ ತುಂಬುರ ವರ ನಾದಪ್ರಿಯ
ದೇವಾ ನಾರದ ವರ ವೀಣೋದಯ
ದೇವಾ ನಾದಪ್ರಿಯ ಸಂಭಾವನ



ದೇವಾ ಭಕ್ತಪ್ರಕರ ಮಹಾ ಘನ
ದೇವ ವಿವಸ್ವತ ಕೋಟಿ ಸಮಪ್ರಭ
ದೇವಾ ಕೋಟ್ಯಾನಲ ತೇಜಪ್ರಭ
ದೇವ ಜರಾಮಯ ಪಾಶ ವಿವರ್ಜಿತ
ದೇವ ಪ್ರಳಯ ಸಮಯ ಘನ ಗರ್ಜಿತ
ದೇವ ಸುಹೃಜ್ಜನ ಹೃದಯ ಸದಾ ಗತಿ
ದೇವ ಧರಿತ್ರೀ ಧರ ಹರಿ ಸಂಗತಿ
ದೇವ ನಿರಂತರ ದೇವ ವಿಪೂತನ

ದೇವ ಮಹೇಶ್ವರ
ದೇವ ಮದೀಶ್ವರ
ದೇವ ಮಹಾಚಲ
ದೇವ ಮಹಾಬಲ
ದೇವ ಮಹಾನಭ
ದೇವ ಮಹಾಪ್ರಭ
ದೇವ ಮಹಾಶಶಿ
ದೇವ ಮಹಾರಸಿ
ದೇವ ಮಹಾಭವ
ದೇವ ಮಹಾಶಿವ
ದೇವ ಮಹಾಗುಣಿ
ದೇವ ಮಹಾಮಣಿ
ದೇವ ಮಹಾಜಪ
ದೇವ ಮಹಾತಪ

ಕಂ॥ ಶರಣು ಸುರತರುವೆ ಶರಣಾಂ ।
ಬುರುಹ ದಿವಾಕರನೆ ಶರಣು ಕರುಣಾಕರನೆ ॥
ಶರಣು ಶರಣೆನುತಲಿದ್ದೆನೆ ।
ಕರುಣಿಸು ಸದ್ಭಕ್ತಿ ಯೆನಗೆ ಶ್ರೀ ವಿರುಪಾಕ್ಷ ॥

# ಹಂಪೆಯ ರಗಳೆ

## ಸ್ರಗ್ಧರಾವೃತ್ತ

ನಿತ್ಯ ಶ್ರೀಕಂಠಾಭರಣ ಕಿರಣಸಂಘಾತ ಸಂಭೂತನೂತ್ನಾ
ದಿವ್ಯ ಪ್ರಾತುಂಗ ಗಂಗಾಧರ ಪುರಹರ ಭಾಳಾಕ್ಷ ಚಂಚದ್ಭವಾನೀ
ಪ್ರತ್ಯಕ್ಷಸ್ವಾಮಿ ಕಾಮಾಂತಕ ನಿಖಿಳ ಮುಖಾಧಾರ ವಿಸ್ತಾರ ಭಕ್ತ
ಗರ್ತ್ಯಂತ ಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

## ಉತ್ಸಾಹ ರಗಳೆ.

ಸಕಲ ರತ್ನನಿಕರಖಚಿತ ಮುಕುಟಧರನೆ ಹಂಪೆಯರಸ
ಪ್ರಕಟ ಮುಕುಟ ಜಟಾಜೂಟಮಂಡಿತ ಮಹಿಮ ಹಂಪೆಯರಸ
ಸುಕರವೆನಿಪನರ್ಘಪಳಕ ಪಟಲ ನಿಟಲ ಹಂಪೆಯರಸ
ಸಕಲಲೋಕ ಭರಿತ ನಿರುತ ಸರ್ವಜೀವ ಹಂಪೆಯರಸ
ಮಂಡಿತ ಪ್ರಚಂಡ ಕಿರಣಗಂಡಯುಗಳ ಹಂಪೆಯರಸ
ತಂಡದಿಂದ ದೆಸೆಗೆ ಮಿಸುಪ ಸುಖದ ಮುಖವೆ ಹಂಪೆಯರಸ
ಪುರವನುರುಪಿ ಧರೆಗೆ ಪರಮ ಹರುಷವಿತ್ತೆ ಹಂಪೆಯರಸ
ಶರಣಜನಕ್ಕೆ ಹರಣವಾಗಿ ಕರುಣಿಸಿರ್ಪೆ ಹಂಪೆಯರಸ
ಕೇಳ್ವುದೆನ್ನ ಚಿನ್ನ ಬಿನ್ನಪವನುಮಾಧಿನಾಥ
ತಾಳ್ವುದಿದನು ಮುದ್ದುಮಾಡಿ ಭಾವಭರಿತ ಭಕ್ತಿಯೂಥ

ಸಕಲ ಕಾಮ ನಿಕರದಿಂದ ವಿಕಳನಾಗುತಿರ್ದೆನಯ್ಯ
ಸುಕರವೆನಿಪ ಭಕುತಿಯರಿಯದಖಿಳ ವಿಷಯಿಯಾದೆನಯ್ಯ
ಕೋಪ ತಾಪ ಲೇಪದಿಂದೆ ತಾಪಿಸುತ್ತಮಿರ್ದೆನಯ್ಯ
ಪಾಪ ಲಾಭ ಲೋಭದಿಂದೆ ಕೋಪಿಸುತ್ತಮಿರ್ದೆನಯ್ಯ
ಮೋಹ ಮದ ಸಮೂಹದಿಂದೆ ದಾಹಿಸುತ್ತಮಿರ್ದೆನಯ್ಯ
ದೇಹದಿಚ್ಛೆ ಮೆಚ್ಚಿ ಹೆಚ್ಚಿ ಮಚ್ಚರಕ್ಕೆ ವೇಳೆಯಾದೆನಯ್ಯ
ನಾದಮೂರ್ತಿ ಪುಣ್ಯಕೀರ್ತಿ ಕಾಯ್ದುಕೊಳ್ಳೊ ಹಂಪೆಯರಸ
ವೇದಪಕ್ಷ ವಿಮಲವಕ್ಷ ರಕ್ಷಿಸೆನ್ನ ಹಂಪೆಯರಸ



ಆಸೆಯಲಗು ನಚ್ಚಿ ಮೆಚ್ಚಿ ಮನವ ನುಚ್ಚುಮಾಡಿತಯ್ಯ
ಗಾಸಿಯಾಗಿ ನೊಂದು ಬೆಂದು ಬರಿದೆ ಬಳಲುತಿರ್ದೆನಯ್ಯ
ಮನ ಧನಂ ಸುತರ್ಕುಲಂ ಛಲಂ ಬಲಂಗಳೆಂಬಿವೆಲ್ಲ
ಜನನಿ ಜನಕರಬಲೆ ಯೌವ್ವನಂ ಶರೀರವೆಂಬಿವೆಲ್ಲ
ಮಿಂಚು ಮಂಜು ಕನಸು ಕರಕವೆಂಬ ತೆರನನರಿದುದಿಲ್ಲ
ಸಂಚಲಂ ಮರೀಚಿಕಾಜಲಂಗಳೆಂದು ಕಂಡುದಿಲ್ಲ
ಗಗನ ಕುಸುಮಮಂಬುಲಿಪಿಯನಿತ್ಯವೆಂದು ಬಗೆದುದಿಲ್ಲ
ಮುಗಿಲ ನೆಳಲುಮಿಂದ್ರಚಾಪವಚಿರವೆಂದು ಕಂಡುದಿಲ್ಲ
ನಿತ್ಯವೆಂದು ನಿರುತವೆಂದು ಹತ್ತೆ ಸಾರುತಿರ್ದೆನಯ್ಯ
ಸತ್ಯವರಿಯದತ್ತಲಿತ್ತ ಸುತ್ತಿ ಬಳಲುತಿರ್ದೆನಯ್ಯ
ಅರಿಯದರಿಸಿ ಮರೆದು ಮರುಗಿ ಕುರುಹುಗೆಟ್ಟೆನೆನ್ನ ಗುರುವೆ
ತೆರಹುಗಾಣದರುಹುಗುಂದಿ ಮರಹುಗೊಂಡೆನೆನ್ನ ಗುರುವೆ

ಮಾಯೆಯಂ ಸಡಿಲ್ಚಿ ಕಳೆದು ಕಾಯಿ ತಂದೆ ಹಂಪೆಯರಸ
ಜೀಯ ನಿತ್ಯ ಕಾಯಿ ದೇವರಾಯ ನೋಡು ಹಂಪೆಯರಸ
ವಿಷಯವೆಂಬ ಕೆಸರಿನೊಳ್ಬಿದ್ದ ಪಶುವನೆನ್ನ ರಕ್ಷಿಸಯ್ಯ
ಪಶುಪತಿ ಶಿವಾ ಭವಾ ಭವಾನಿಯರಸ ಕರುಣಿಸಯ್ಯ
ಶೃತಿಗಳರಸಿ ಮತಿಗಳರಸಿ ಯತಿಗಳರಸಿ ಕಾಣದಭವ
ನತ ಜನಕ್ಕೆ ಮುಂದೆ ಬಂದು ನಿಂದು ತೋರ್ಪೆ ಕರುಣಿ ವಿಭವ
ಏಕೆ ತಂದೆ ಎನ್ನನೊಮ್ಮೆ ನೋಡಲೊಲ್ಲೆ ಹಂಪೆಯರಸ
ನಾಕಲೋಕಪತಿಗೆ ಪತಿ ಪಿನಾಕ ಪಾಣಿ ಹಂಪೆಯರಸ

ತಾಯ ಗರ್ಭದೊಳಗೆ ತಗ್ಗಿ ಕುಗ್ಗಿ ಮುಗ್ಗಲೊಳಗೆ ಮಗ್ಗಿ
ಹೇಯಮೆನ್ನದುದರ ರಸಮನುಂಡು ಕರುಳ ಬಲೆಯೊಳೊಗ್ಗಿ
ಮಲದ ಮೂತ್ರ ಕುಲದ ನಡುವೆ ಕಲಸಿ ನೆಲಸಿ ತೊಲಗದಿರ್ದು
ಕೆಲ ಬಲಂಗಳರಿಯದಧಮ ಕೂಪದಲ್ಲಿ ತಾಪಿಸಿರ್ದು
ಸೆಡೆದೆ ನುಡಿವೆನಾರೆನೊಲ್ಲೆನಳ್ಕಿದೇಂ ಸಮರ್ಥ ಗುರುವೆ
ತಡೆಯದೆನ್ನನಚ್ಚ ಭಕುತಿ ಸುಖದೊಳಿರಿಸು ಪರಮ ಗುರುವೆ
ದೇವ ನತವಿತಾನ ವಿವರ ಜಲಧಿ ಚಂದ್ರ ಕರುಣಿಸಯ್ಯಾ

ದೇವ ಭಕ್ತ ನಿಕರ ವಿಕಸಿತ ಪ್ರಮೋದ ಕರುಣಿಸಯ್ಯ
ಕಮಲಜಾಂಡ ಫಲ ಸಮೂಹ ವಿಮಲ ವೃಕ್ಷ ಹಂಪೆಯರಸ
ಸಮುದಿತ ಪ್ರತಾನ ಭರಿತ ಚಿತ್ರಕಾಶ ಹಂಪೆಯರಸ
ಸುರಸಮಾಜರಾಜ ರಾಜರಾಜಮೌಲಿ ಹಂಪೆಯರಸ
ಗಿರಿಸುತಾ ಲತಾ ವಿತಾನ ಕಲ್ಪ ಭೂಜ ಹಂಪೆಯರಸ
ಈಶವಿಗತದೋಷ ಪುಣ್ಯ ವೇಷ ಕರುಣಿ ಕರುಣಿಸಯ್ಯ
ಪಾಶರಹಿತ ಮುಕ್ತಿವಿಹಿತ ಭಕ್ತಿಸಹಿತ ಕರುಣಿಸಯ್ಯ

ಕಳಿದು ಮುಳಿದು ಸುಳಿದು ಹೊಳೆದು ಕಾಡಲೇಕೆ ಹಂಪೆಯರಸ
ತಿಳಿದು ಬೆಳಸ ಭಕುತಿಯಿತ್ತು ಸುಖವನೀಯೊ ಹಂಪೆಯರಸ
ಬಾಲನೊರಲುತಿರ್ದೊಡೇಕೆ ಕೇಳಲೊಲ್ಲೆ ಹಂಪೆಯರಸ
ಕಾಲಕಾಲ ವಿಮಲಶೀಲ ಭಕುತಿಲೋಲ ಹಂಪೆಯರಸ
ಕಣ್ಗೆ ಕಣ್ಣೆ ಮನಕೆ ಮನವೆ ಗುಣಕೆ ಗುಣವೆ ಹಂಪೆಯರಸ
ಪಣ್ಗೆ ಪಣ್ಣೆ ರಸಕೆ ರಸವೆ ಸವಿಗೆ ಸವಿಯೆ ಹಂಪೆಯರಸ
ಕುಲಕೆ ಕುಲವೆ ಛಲಕೆ ಛಲವೆ ಬಲಕೆ ಬಲವೆ ಹಂಪೆಯರಸ
ನೆಲಕೆ ನೆಲವೆ ಜಲಕೆ ಜಲವೆ ಶಿಖಿಗೆ ಶಿಖಿಯೆ ಹಂಪೆಯರಸ
ಅಸುವಿಗಸುವೆ ಅಣುವಿಗಣುವೆ ಯಾತ್ಮಕಾತ್ಮ ಹಂಪೆಯರಸ
ಶಶಿಗೆ ಶಶಿಯೆ ರವಿಗೆ ರವಿಯೆ ನಭಕೆ ನಭವೆ ಹಂಪೆಯರಸ
ನುಡಿಯದಿರ್ದು ನೋಡದಿರ್ದೊಡೆಂತು ಬರ್ದುಂಕುವೇಂ ತ್ರಿಶೂಲಿ
ನುಡಿಸಿ ನೋಡಿ ಬದುಕಿಸೆನ್ನನಕ್ಕರಿಂ ಕಪಾಲ ಮಾಲಿ
ನೋಡಿ ನೋಡದಿರ್ಪರುಂಟೆ ಕೂಡಿ ಕೂಡದಿರ್ಪರುಂಟೆ
ಮಾಡಿ ಮಾಡದಿರ್ಪರುಂಟೆ ಬೇಡಿ ಬೇಡದಿರ್ಪರುಂಟೆ
ಭಕುತಿ ಸುಖವನೀಯದಿಹುದಿದಾವ ಹೆಂಪು ಹಂಪೆಯರಸ
ಯುಕುತಿ ಏಕೆ ಶಿಶುವಿನೊಡನೆ ಪಶುವಿನೊಡನೆ ಹಂಪೆಯರಸ

ಎನಗೆ ತಂದೆ ತಾಯಿ ಬಂಧುಬಳಗವಚಲ ಭಕ್ತಿ ನೀನೆ
ಎನಗೆ ಸುಗತಿ ಸುಮತಿ ಸೊಂಪು ಬಿಣ್ಪು ನುಣ್ಪು ತಣ್ಪು ನೀನೆ
ತನುವಿನೊಳಗೆ ತೆರಹುಗೊಡದೆ ತೀವಿ ನಿಲ್ಲು ಹಂಪೆಯರಸ
ಮನದ ಕಣ್ಗಳೊಳಗೆ ಸುಳಿದು ಸುಖವನೀಯೊ ಹಂಪೆಯರಸ



ಎನ್ನ ಚಿತ್ತದೊಳಗೆ ತಿಳಿದು ತೊಳಗಿ ಬೆಳಗು ಹಂಪೆಯರಸ
ಎನ್ನ ಭಾವದೊಳಗೆ ಕರುಣವೆರಸಿ ಬೆರಸು ಹಂಪೆಯರಸ
ಭವಭವಂಗಳೊಳಗೆ ತಿರುಗಿ ಬಂದು ಸವೆದೆ ಹಂಪೆಯರಸ
ನವನವಾದಿ ಜನನದಿಂದೆ ನವೆದು ನವೆಸಿ ಹಂಪೆಯರಸ
ಹುಟ್ಟಿ ನವೆದು ನಡುವೆ ಮತ್ತೆ ಹುಟ್ಟಿ ಸವೆದು ನವೆದೆನಯ್ಯ
ಹುಟ್ಟಿದಂತೆ ಭವವನೈದಿ ಮಾರುವೋದೆ ಕರುಣಿಸಯ್ಯ
ಪರಮಪುರುಷ ಲಸಿತ ಹರುಷ ಪುಣ್ಯ ಪುರುಷ ಹಂಪೆಯರಸ
ಗರಳಧರನೆ ದುರಿತಹರನೆ ಶರಣವರನೆ ಹಂಪೆಯರಸ

ಅಖಿಳ ಗುರುವೆ ಹಂಪೆಯರಸ
ನಿಖಿಳ ಗುರುವೆ ಹಂಪೆಯರಸ
ದಾನನಿಧಿಯೆ ಹಂಪೆಯರಸ
ಮಾನನಿಧಿಯೆ ಹಂಪೆಯರಸ
ವೇದದೂರ ಹಂಪೆಯರಸ
ನಾದಸಾರ ಹಂಪೆಯರಸ

ದೇವರಮ್ಮ ಭಾವಗಮ್ಯ
ಸಹಜ ನಿತ್ಯ ಬಹಳ ಸತ್ಯ
ಭೃತ್ಯ ಸುಲಭ ಸತ್ಯ ಶರಭ
ಪರಶುಧರನೆ ಕರುಣಿಹರನೆ
ನೋಡು ಶಿವನೆ ನೋಡು ಭವನೆ
ಬಾರ ದೇವ ಸಾರ ಹೃದಯ
ಮಂಗಳಾಬ್ಧಿ ತುಂಗಲಬ್ಧಿ
ವಿಷಮನೇತ್ರ ಲಸಿತಗಾತ್ರ
ಲಿಂಗಮೂರ್ತಿ ಜಂಗಮೂರ್ತಿ

ಎನ್ನ ಗುರುವೆ ತಂದೆ ಈಶ
ಲಾಲಿಸಯ್ಯ ಪಾಲಿಸಯ್ಯಾ
ಏವೆನೀಶ ಕಾವುದೀಶ
ಆಗಳಾಗ ಲೀಗಳೀಗ

ಳತುಳ ಕಾಯ ನತ ನಿಕಾಯ
ದೇವ ಗುರುವೆ ದೇವ ವರವೆ
ದೇವ ಗತಿಯೆ ದೇವ ಮತಿಯೆ
ದೇವ ಪತಿಯೆ ಹಂಪೆಯರಸ
ಜಯತು ಜಯತು ಹಂಪೆಯರಸ

---



# ಪಂಪಾಕ್ಷೇತ್ರದ ರಗಳೆ.

ಕಂ॥ ನೇತ್ರತ್ರಯನತ್ಯನುಪಮ
ಗಾತ್ರಂ ಪಡೆದೆಮಗೆ ಕುಡುಗೆ ಪಂಪಾನಾಥಂ।
ಧಾತ್ರೀತಳದೊಳು ಪಂಪಾಕ್ಷೇತ್ರ
ಸ್ತೋತ್ರವನೆ ಮಾಳ್ಪ ಎನ್ನಯ ಮತಿಗುನ್ನತಿಯಂ॥

### ರಗಳೆ.

ಎಂತೆನೆ ಸಮುದ್ರಮುದ್ರಿತ ಧರಾಮಧ್ಯದೊಳು
ಸಂತತಂ ಮೇರುವಿನ ದಕ್ಷಿಣ ವಿಭಾಗದೊಳು
ಮೆರೆವುದದು ಹೇಮಕೂಟವ್ರಾತ ಶಿವಪುರಂ
ಹೆರೆಸೂಡಿದಂ ನೆಲಿಸಿ ನಿಂದ ಪಂಪಾಪುರಂ
ಹೇಯಜರು ಸೊಗಸಿನಿಂ ಪೊಗಳ್ವ ಪಂಪಾಪುರಂ
ಶರಣರೊಲವಿಂದನಿರಿದಿರ್ಪ ಪಂಪಾಪುರಂ

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಪಾಪಹರ ಸುತ್ತ ಯೋಜನ ಪ್ರಮಾಣಂ ಕೂಡೆ
ಅಲ್ಲಿ ಮೂಡಣ ಬಾಗಿಲೊಳಗಿರ್ಪನುನ್ನತಂ
ಸಲ್ಲಲಿತ ಗುಣಕಿನ್ನರೇಶ್ವರಂ ಶಾಶ್ವತಂ
ಅಲ್ಲಿ ತೆಂಕಣ ಬಾಗಿಲೊಳಗಿರ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
ಪಶ್ಚಿಮ ದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯ ದಿಟಂ ಸೋಮನಾಥನತಿಪ್ರೇಮದಿಂ
ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮ ಗುಣ ಸ್ಥಾಣು ವಾಣಿಭದ್ರೇಶ್ವರಂ
ಇಂತೆನಿಸಿ ಮೆರೆವ ನಾಲ್ಕುಬಾಗಿಲುಗಳೊಳಗೆ
ತಿಂಥಿಣಿಪ ಶಿವಲಿಂಗವಿಪ್ಪವಾ ಪುರದೊಳಗೆ

ಪಂಪಾವಿರೂಪಾಕ್ಷನಲ್ಲಿಂದನಂತರಂ
ಹೆಂಪಿಂದ ಹನುಮತೇಶ್ವರನಿಪ್ಪನುರುತರಂ

ಮೊಳೆತವು ಸುರಸತಿಯರ ತನುವಿಂದಂ
ಬೆಳೆದವು ರನ್ನದ ತೊಡಿಗೆಗಳಿಂದಂ
ದಳವೇರಿದವು ಸಿತಾಂಬರದಿಂದಂ
ತಳಿತವವರ್ಗಳ ಮುಖರಸದಿಂದಂ
ಕವಲ್ವರಿದವು ಕಂಗಳ ಕಡೆಯಿಂದಂ
ತವೆ ಕುಸುಮಿತವಾದವು ನಗೆಯಿಂದಂ
ಇಂತೆಸವಾ ನವರತ್ನಪ್ರಭೆಯೊಳ್
ಸಂತತವೊಪ್ಪುವ ಶರ್ವನ ಸಭೆಯೊಳ್
ಗಡಣದ ಕಿನ್ನರಿಯರ್ತಾರ್ಯೈಸಲ್
ನೃಡನ ಮನಂ ಸುಖದಿಂ ಹಾರೈಸಲ್
ರಾಗದ ರಸದೊಳ್ ಸಭೆಯೀಸಾಡಲ್
ಲಾಗಿನ ಲಹರಿಯೊಳಗೆ ಮುಳುಗಾಡಲ್

ವಹಣಿಯ ತೆರೆಯೊಳ್ ತೇಂಕಾಡುತ್ತಿರೆ
ಬಹು ಸುಗತಿಗಳೊಳಗೋಲಾಡುತ್ತಿರೆ
ತಿರುಪಿನ ಸುಳಿಗಳೊಳಗೆ ಸುಳಿವುತ್ತಿರೆ
ತರದಿಂ ವಹಣಿಗಳೊಳೆ ಮಣಿವುತ್ತಿರೆ
ಕಂಪನದೋಳ್ಪೊಂಪುಳಿವೋಗುತ್ತಿರೆ
ಇಂಪಿನ ಸೋಂಪಿನೊಳಗೆ ಕರಗುತ್ತಿರೆ
ಕಿನ್ನರಿಯರ್ ಶಿವನಂ ಕೇಳಿಸುತಿರೆ
ಪನ್ನಗಭೂಷಂ ತಲೆದೂಗುತ್ತಿರೆ
ಇರಲೊಂದಣಕದ ಜವನಿಕೆ ಮೂಡಲ್
ಸುರಸಭೆ ಕೌತುಕದಿಂದಂ ನೋಡಲ್
ಭೃಂಗೀಶಂ ತಾನಾಗದೆ ಮಾಣಂ
ಹಿಂಗಿಸು ಸಭೆಯಂ ಬಂದಂ ಜಾಣಂ
ತೆರಹಂಗುಡು ಚಕ್ರಿಗೆ ಕಿನ್ನರಪತಿ
ಹೆರಸಾರಿಂದ್ರ ತೊಲಗು ವಾಣೀಪತಿ
ಹೋ ಹೋ ಕಳಕಳವೇಕೆಂದೆನುತಂ
ಆಹಾ ಹೊಸ ಪರಿ ಚಿತ್ರೈಸೆನುತಂ
ನಂದೀಶಂ ನುಡಿವುತೆ ಹೆರಸಾರಲ್
ಚಂದದ ರಸವಾದ್ಯಂಗಳ್ ಸೇರಲ್



ಸಂಗೀತರಸಂ ರಂಗಂಬೊಕ್ಕುದು
ಸಂಗಡಿಸಿದ ಕಡು ಸೊಗಸಂ ಮಿಕ್ಕುದು
ಆಡದ ಮುನ್ನಡ್ಡೈಸಲ್ತೊಡಗಿತು
ನೋಡದ ಮುನ್ನವೆ ಸೊಗಯಿಸತೊಡಗಿತು
ನೋಡುವವರ ಮನಮುಂ ಜವನಿಕೆಯೊಳ್
ನಾಡೆ ಜಗಳವಾಡುತ್ತಿರೆ ಸಭೆಯೊಳ್

ದಿಧಿಕಾರವನಾಗುಳಲ್ಮದ್ದಳೆಗಳ್
ಸುಧೆಯಂ ಸೂಸುತ್ತಿರಲಾವುಜಗಳ್
ಸುಗತಿಯನುಗುಳುತ್ತಿರೆ ಕಹಳೆಗಳುಂ
ಸೊಗಸಂ ಸೊಂಪಿಸುತಿರೆ ಕರಡೆಗಳುಂ
ಕೈಸಾಳಂ ಸನ್ನೆಯೊಳೊತ್ತುತ್ತಿರೆ
ದೇಸಾಳಂ ನುಡಿಯೊಳೆ ಬೆಳೆವುತ್ತಿರೆ
ತಾಳಂ ನರ್ತನಮಂ ಕರೆವುತ್ತಿರೆ
ಮೇಳವಣೆಗೆ ಶಬ್ದಂ ಕೂಡುತ್ತಿರೆ
ಬಿಂಕದ ಕಾಳಾಸಂ ತುಳ್ಕಾಡಲ್
ಭೊಂಕನೆ ಮುಂದಣ ಜವನಿಕೆಯೋಡಲ್

ಹೊಗೆ ತಗ್ಗಿದ ಹುತಹವನಂತಿರ್ದಂ
ಮುಗಿಲೋಸರಿಸಿದ ರವಿಯಂತಿರ್ದಂ
ಛಾಯೆಯಡಂಗಿದ ಜ್ಯೋತಿಯೊಲಿರ್ದಂ
ಮಾಯೆಯಡಂಗಿದ ಹರನಂತಿರ್ದಂ
ಇರಲೊಪ್ಪಿತು ಭೃಂಗಿಯ ಶೃಂಗಾರಂ
ಸಿರಮಧ್ಯದ ಲಿಂಗದ ವಿಸ್ತಾರಂ
ಭಾಳಂ ತೀವಿದ ಭಸಿತದ ತಿಳಕಂ
ತಾಳಕ್ಕೊಲೆದಾಡುವ ಕೈಚಳಕಂ
ಫಣಿಕುಂಡಲ ಮುತ್ತಿನ ಹಾರಂಗಳ್
ಮಣಿಖಚಿತದ ರತ್ನದ ಮುದ್ರಿಕೆಗಳ್
ಕೆಯ್ಯೂರಂ ಹೊಸ ವಜ್ರದ ಕಂಕಣ
ಒಯ್ಯಾರಂ ಮಿಗೆ ಗೆಜ್ಜೆಯ ಚಲ್ಲಣ
ವೆಸೆಯಲ್ ಸರ್ವಾಂಗದ ಹೊಸ ಭಸಿತಂ

ಮಸಗಲ್ ಕಾಲ್ತೊಡರು ಝುಣ ಝುಣಿಸಂ
ಕೆಯ್ಯೊಳಗೊಪ್ಪಲ್ ನರ್ತನ ದಂಡಂ
ಮೆಯ್ಯೊಳ್ ಹೊಳೆಯಲ್ ಗತಿಗಳ ತಂಡಂ
ಮೊಳೆಯಲ್ ಸರ್ವಾಂಗದೊಳೆ ಸುಗತಿಗಳ್
ಬೆಳೆಯಲ್ ತ್ರಿಭಂಗಿಗೊಂಡಾಕೃತಿಗಳ್
ಮುಂಮುವರಿಯೆ ಮೆಚ್ಚುಗಳೋಲಗದೊಳ್
ಸಂದಣಿಸಲ್ಕಾಹಂಗಳ್ಮುಖದೊಳ್
ಕಡೆಗಂಗಳ ಕೊನೆಯೊಳ್ಮೇಳೈಸಲ್
ನಿಡುಪುರ್ವಿನ ತುದಿಯೊಳ್ಮೇಳೈಸಲ್
ಕರತಳದಿಂ ಬಹು ಗತಿಗಳ ಸೂಸುತೆ
ಚರಣತಳದಿ ಹೊಸ ತಾಳಂಗುಟ್ಟುತೆ
ತಡವಿ ತಡವಿಯಾಡುತೆ ಹಿಮ್ಮೆಟ್ಟುತೆ
ಕಡು ಸೊಗಸಂ ಕಾಳಾಸದಿ ತೋರುತೆ
ನಡೆದು ನಡೆದು ಲಾಗಿನಲೋಲಾಡುತೆ
ತಡೆದು ತಡೆದು ತೂಗುತೆ ಲೋಲಾಡುತೆ
ಪಿರಿದುಂ ನೆಗೆದಾಕಾಶದಿ ನಿಲುತಂ
ತರಹರಿಸುತೆ ಪಂಜರದೊಳ್ತಿರುತಂ
ಧಾಳದೊಳುಂ ಮುತ್ತಂ ಬಳುಕುತ್ತಂ
ತಾಳವನವಯವದೊಳ್ ಪಿಡಿವುತ್ತಂ

ಆಡಿತೆ ಗತಿ ನಿಂದುದೆ ಕಾಳಾಸಂ
ನೋಡಿತೆ ಸೊಗಸಿರ್ದುದುವೆ ವಿಳಾಸಂ
ತಾನಾಗಿರೆ ರಸಮಯನಾಗಾಡುತೆ
ನಾನಾ ವಿಧ ಬಹು ಗತಿಗಳ್ ತೋರುತೆ
ಭಾಪಾವುಜೆ ಮದ್ದಳೆರೇ ಯೆನುತಂ
ಭಾಪುರೆ ಕಹಳೆ ಸುದೇಶಿಯೆನುತ್ತಂ
ಪೇವುರೆ ಹೊಸತುಗ್ಗಡಣೆಯೆನುತ್ತಂ
ರಾವುರೆ ತಾಳದ ಗತಿಯೆಂದೆನುತಂ
ಅವಧಾರುರೆ ಮೇಳವಣೆಯೆಂದೆನುತಂ
ಅವಧಾರಭವನೆ ಕರುಣೆಯೆಂದೆನುತಂ



ನೆಗೆದು ತಿರುಗಿ ಕೆಯ್ಯ್ಯಾರಿ ನಿಲುತ್ತಂ
ಬಗೆಯದೆ ತಲೆಯಿಂ ನಡೆದಾಡುತ್ತಂ
ಬರೆಯಿಂದಂ ಹರಿದಾಡಿ ನಿಲುತ್ತಂ
ಬೆರಲೂರಿಯೆ ತಿರ್ರನೆ ತಿರುಗುತ್ತಂ
ಕೆಯ್ಯೊಳ್ಕಾಲೊಗೆದಂತಾಡುತ್ತಂ
ಮೆಯ್ಯೆಲ್ಲಂ ಮುಖನಾದಂತಿರುತಂ
ಕೆಲದೊಳ್ ಬಲದೊಳ್ ಸುತ್ತೇಣ್ದೆಸೆಯೊಳ್
ನೆಲನೊಳ್ಮುಗಿಲೊಳಗಂಬರಸೆಡೆಯೊಳ್
ಹೊಸ ಕರಣಂಗಳನೀಡಾಡುತ್ತಿರೆ
ಶಶಿಧರನೊಲವಿಂ ತಲೆದೂಗುತ್ತಿರೆ
ಹೆಸರಿಡಬಾರದ ಗತಿಗಳನಾಡುತೆ
ಹೊಸ ಹೊಸ ಪರಿಗಳ ರೀತಿಯನಾಡುತೆ
ಮನದೊಳೆ ದೇಹವನಡಗಿಸಿಯಾಡುತೆ
ಮನವೇ ತನುವಾದಂತಿರಲಾಡುತೆ
ಗತಿಗೆ ಮನಂ ಹೊಸ ತನುವಾದಂತಿರೆ
ಗತಿಗೆ ತನುವಿನವಯವವಾದಂತಿರೆ
ಸಮ ವಿಷಮಂಗಳ ಪರಿಗಳನಾಡುತೆ
ಕ್ರಮದಿಂ ನವರಸಗತಿಗಳನಾಡುತೆ
ಧಾರುಣಿಯಂದದೆ ತಿರದಿಂದಾಡುತೆ
ವಾರಿಯ ಪೋಲ್ ನಿರ್ಮಳನಾಗಾಡುತೆ
ಅನಲನ ಪೋಲುಜ್ವಲನಾಗಾಡುತೆ
ಅನಿಲನ ಪೋಲ್ ಸುತ್ತಂ ಸುಳಿದಾಡುತೆ
ಗಗನದ ಪೋಲ್ತನ್ಮಯನಾಗಾಡುತೆ
ಮೃಗಧರನಂತಿರೆ ಹೊಸ ಕಳೆಯೇರುತೆ
ದಿನಕರನಂತಿರೆ ದೆಸೆಯಂ ಬೆಳಗುತೆ
ಎನಿಸುಂ ಜೀವನ ಪೋಲ್ ಚೇತರಿಸುತೆ
ಎಳೆವಿಸಿಲಂತಿರೆ ಬಣ್ಣಂದೋರುತೆ
ಬೆಳುದಿಂಗಳ ಪೋಲ್ತಂಪಂ ಬೀರುತೆ
ಕೋಗಿಲೆಯಂತಿರೆ ಸರಗೈದಾಡುತೆ
ರಾಗದಿ ಗಿಳಿಯಂತಿರೆ ನುಡಿದಾಡುತೆ

ಚೆನ್ನನ ಮನೆಯೊಳು ಸಲಿಸಿದ ಪರಿಯಂ
ಮನ್ನಿಸಿ ಚೋಳಂಗೊಲಿದಿಹ ಪರಿಯಂ
ಚೇಲಾಳನನರಿದಿತ್ತ ಪರಿಗಳಂ
ಸೋಲದೆ ಮಗನಂ ಕರೆದ ಪರಿಗಳಂ
ಕಕ್ಕನ ಕಂಕರಿಗಾಡಿದ ಪರಿಯಂ
ಚಿಕ್ಕನನಭವಂ ಕಾಡಿದ ಪರಿಯಂ
ದಾಸನನಭವಂ ಕಾಡಿದ ಪರಿಯಂ
ಕೇಶವರಾಜಂಗಂಜಿದ ಪರಿಯಂ
ಗುಂಡನ ಮುಂದಾಡಿದ ಪರಿಯ.ಗಳಂ
ಚಂಡೇಶ್ವರನಂ ಮೆರೆದ ಪರಿಗಳಂ
ಹಂಪೆಯೊಳಗೆ ನೆಲಸಿದ ಪರಿಯುಗಳಂ
ಹಂಪೆಯ ಹರಿಹರಗೊಲಿದ ಪರಿಗಳಂ †
ಇವು ಮೊದಲಾಗಿರೆ ಶಂಕರನೊಲವಿಂ
ಸವಿದಾಡಿದ ಸುಖಲೀಲೆಯೊಳೊಲವಿಂ
ಬಹು ರೂಪುಗಳಂ ಬಂದಾಡುತ್ತಂ
ಬಹಳ ರಸಂಗಳೊಳೋಲಾಡುತ್ತಂ

ಆಡುತ್ತಾಡುತ್ತೆಡಿಸಿ ನಿಲುತಿರೆ
ನೋಡುವ ಸಭೆ ಮಿಗೆ ಘೋಳನೆ ನಗುತಿರೆ
ಸಭೆಯ ಮೆಯ್ಯ ಜೊಮ್ಮಲ್ಲಂ ಹಾರಲ್
ಅಭಿನವ ಮುಖದೊಳ್ ನಸುನಗೆ ದೋರಲ್
ಪ್ರಹಸನ ರಸಮಂ ತೊಡಗಿದನಾಗಳ್
ಸಹಸದ ನಗೆಗಳ್ಮೂಡಲ್ಮೊಗದೊಳ್
ಕೊಡಗಿಯಾಟವನೇರಿಸಿಕೊಂಡಂ
ನೋಡಿ ನಗುತ್ತಿರೆ ದೇವರ ತಂಡಂ
ತಲೆಯೊಳ್ಸುತ್ತಿದ ಕವಡಿಕೆ ದಂಡೆಗ
ಳೊಲವಿಂ ಪಲ್ಗಳ ಎಡಿಸಿದ ಕವಡೆಗ
ಳ್ಕಣ್ಣೊಂದರೊಳಿಕ್ಕಿದ ಬೆಗ್ಗವಡಿಕೆ

† ಪಾಠಾಂತರ—
ಹಂಪೆಯ ಹರಿಗಂಗೊಲಿದಾಪರಿಯಂ



ಕಣ್ಣಂ ಮೆಳ್ಳಿಸಿ ನೆತ್ತಿಯ ಚೆಂಡಿಕೆ
ಹಲುಗಿರಿಯುತೆ ಪುರ್ಬಂ ನೆಗೆಪುತ್ತಂ
ಬಲುಗಿವಿಯಂ ಮಂಡಿಸಿ ಮಣಿವುತ್ತಂ
ಬಾಯಂ ತೆರೆವುತೆ ಬರಿದೆ ನಗುತ್ತಂ
ಆ ಯೆಂದೀಶನನೇಡಿಸಿ ನಿಲುತಂ
ಕೊಂಕಿ ನಡೆದು ಕೆಯ್ಯಂ ಮುರುಕಿಸುತಂ
ಟೊಂಕಮನುರುಗಿಸಿ ಸಿಂದೇಡಿಸುತಂ
ಮೊಳಕೈ ಮುಂಗೈಗಳನಾಡಿಸುತಂ
ಮೊಳಕಾಲಿಕ್ಕುತ್ತೆರಗುತೆ ನಿಲುತಂ
ಕಾಲುಂ ಕೆಯ್ಯುಂ ಚೆಂಗೊಂಡಾಗಿರೆ
ಮೇಲುಂ ತಳವುಂ ಕೆಲವುಂ ಡೊಂಕಿರೆ
ಕುಳ್ಳಿರ್ದೇಳುತ್ತಂ ಬೀಳುತ್ತಂ
ಅಳ್ಳೆಯನೆರಡು ಕರದಿ ಚೆರಟುತ್ತಂ
ಮೆಳ್ಳಿಸಿ ನೋಡುತೆ ಪುರ್ಬಂ ಕೆತ್ತುತೆ
ಘೊಳ್ಳನೆ ಸಭೆ ನಗೆ ಪಲ್ಲಂ ಕಿರಿವುತೆ
ಅಡ್ಡಂ ತಿಗಟಂ ವಿಸಟಂ ಬರುತಂ
ಗುಡ್ಡಿಸಿ ಮುಗಿಲುದ್ದಕೆ ನೆಗೆವುತ್ತಂ
ಅಣಕಂ ಮೆರೆವುತೆ ಮುಯ್ಯಿಕ್ಕುತ್ತಂ
ತ್ರಿಣಯನ ನೋಡುತೆ ಗಹಗಹಿಸುತ್ತಂ
ಮೂಗಿನ ತುದಿಯಂ ಮೆಳ್ಳಿಸಿ ನೋಡುತೆ
ತೂಗಿ ತೊನೆದು ಸೃಚಪ್ಪಳೆಗುಟ್ಟುತೆ
ತುದಿಗಾಲೊಳು ನಿಲುತಂದೊಲೆದಾಡುತೆ
ಬೆಮಾದರಂತಿರೆ ಬೆಚ್ಚುತ್ತೋಡುತೆ
ನಿಂದಿರುತೊಂದೇ ಮುಡುಹಾಡಿಸುತಂ
ಮಂದಿಯ ನೇಡಿಸುತವ್ವಳಿಸುತ್ತಂ
ಮುಡುಹುಗಳಂ ಕೊರಳೊಳು ಪತ್ತಿಸುತಂ
ಕಡೆವಾಯೊಳೆ ತುಟಿಗಳ ಜೋಲಿಸುತಂ
ಬರಿದೇ ಧ್ಯಾನಿಸಿ ಬೆಂಗಾಗುತ್ತಂ
ಮರೆದಂತೇನಕ್ಕೆಯನರಸುತ್ತಂ
ಹೊಟ್ಟೆಯನಾಡಿಸುತಂ ಹೊಂಗಿಸುತಂ

ನಿಟ್ಟೊಡಲಾಗುತ್ತಂ ನಿಂದಿರುತಂ
ಕೊಂಕಿದ ದೇಹಮನುರುಗಿಸಿ ನಡೆವುತೆ
ಬಂಕಿದ ಮುಖದೊಳ್ ಬಾಯ್ದೆರೆದುಲಿವುತೆ
ತೋಳಂ ಬೀಸುತೆ ತೂಗಾಡುತ್ತಂ
ನೀಳಂ ಮಾಡಿಯೆ ಮೊಗದಿರುಹುತ್ತಂ
ದಿಟ್ಟಿಸಿ ನೋಡುತ್ತಂ ಜಿಗಲುತ್ತಂ
ನೆಟ್ಟಂದದಿ ನಿಂದಿರ್ದು ನಗುತ್ತಂ
ತುಟಿ ಮಿಡುಕುತ್ತಿರೆ ಹಲು ಹರಿಗುಟ್ಟುತೆ
ಕಟಿಯಲುಗುತ್ತಿರೆಯಡ್ಡಂ ಮೆಟ್ಟುತೆ
ಕುಂಟನ ಪೋಲ್ಕೊಂಕಾಡಿ ನಿಲುತ್ತಂ
ತುಂಟನ ಪೋಲ್ಬೆಚ್ಚಡಿಗಳನಿಡುತಂ
ಹೆಳವನ ಪೋಲ್ಮೊಳಕಾಲಿಕ್ಕುತ್ತಂ
ಗಳೆಯಂದದೆ ಸ್ವೈರಗಾಗುತ್ತಂ
ಎದ್ದೆದ್ದೆತ್ತಿದ ಪೋಲ್ ನಿಲ್ಲುತ್ತಂ
ಬಿದ್ದುಂ ಬಿಲ್ಲಂದದೆ ಬೆರೆಯುತ್ತಂ
ಮೂಗಂ ಪತ್ತಿಸಿ ಕೊಡಕೆಯನಾಡಿಸಿ
ಮೇಗಂ ಮೆಳ್ಳಿಸಿ ಕೊರಲಂ ತೂಗಿಸಿ
ತಲೆಯ ನಿವಾಳಿಸಿ ಕರವಂ ಬಾರಿಸಿ
ಸಿಲವಂ ಕೊಂಕಿಸಿ ಬೆರಲಂ ಬಂಕಿಸಿ
ಸುರಪನನೇಡಿಸುತಂ ರೋಡಿಸುತಂ
ಶರಣರ ಚರಣವ ಪಿಡಿದಾಡುತ್ತಂ
ವೇಷನನುರುಗಿಸಿ ನೋಡಿ ನಗುತ್ತಂ
ದೇವಸಭೆಯನೊಲಿದಲ್ಲಾಡಿಸುತಂ
ನಗೆಗಳನೆಲ್ಲರ ಮೊಗದೊಳ್ಚೆಲ್ಲುತೆ
ಬಗೆಗಳ ನಗೆಯಂ ಹೊರವಂಟಾಡುತೆ
ನೋಡುವವರ ನಗೆ ಗೂಡಾಗಿಸುತಂ
ನೋಡುವರವಯುವವಂ ನಗಿಸುತ್ತಂ
ಬಂದಾಡುತ್ತಿರೆ ಹರನೋಲಗದೊಳ್
ಹೆಂದದ ನಗೆಗಳ್ ಮಸಗಲ್ಕಾಗಳ್



ಹೊಸ ಭಕ್ತಿಯ ಕರುವಿನ ಪೊಲವಂತಿರೆ
ಶಶಿಧರನಚ್ಚರಿಯೊಳ್ಮರೆವುತ್ತಿರೆ
ಹರಕೀರ್ತಿಯನೆ ಕೊಂಡಾಡುತ್ತಿರೆ
ವರ ಮೂರ್ತಿಯನೆ ಕಣ್ಣೊಳಗಿಟ್ಟಿರೆ
ಮೈಸೋಂಕಂ ತನ್ನೊಳ್ ತೆಗೆವುತ್ತಿರೆ
ಕೈ ಶಿವಪೂಜೆಗೆ ಲವಲವಿಸುತ್ತಿರೆ
ತನ್ನ ಮರೆವುತೆ ಪರವಶನಾಗಲ್
ಭಿನ್ನಂದೋರದ ಸಮಸುಖಿಯಾಗಲ್
ಹರ ಸಾತ್ವಿಕ ಭಕ್ತಿಯ ರಸದೋರಲ್
ಕರುಣ ರಸಂ ಹರನೊಳ್ ಕೈಮೀರಲ್

ಹಿಡಿದೆತ್ತಿದ ಭೃಂಗೀಶನನೀಶಂ
ಅಡಿಗಡಿಗಪ್ಪಿದನಾ ಗಿರಿಜೇಶಂ
ಆಲಿಂಗಿಸಿ ಮೆಯ್ಯಂ ತಡಹುತ್ತಂ
ಸಾಲದಿದೆನ್ನಂ ಕೊಟ್ಟೆನೆನುತ್ತಂ
ಹಂಪೆಯ ವಿರುಪಂ ಕರುಣಂ ಮಾಡಲ್
ಸೊಂಪಿಂ ಹೊಗಳಲ್ ಸುರಸಭೆ ನೋಡಲ್
ದೇವ ಶರಣಸಂಕುಳಪರಿಪಾಲಕ
ದೇವ ಶರಣ ಮುಗುದಾಜನ ಲೋಲಕ
ದೇವ ಸಕಲವರ ವಿದ್ಯಾವಲ್ಲಭ
ದೇವ ಅನೇಕ ಶೃತಿತತಿ ದುರ್ಲಭ
ದೇವ ನತಾಖಂಡಲ ಸುರಮಂಡಲ
ದೇವ ವಿರಾಜಿತ ಫಣಿಪತಿಕುಂಡಲ
ಎಂದು ಪೊಗಳುತಿರೆ ಸಂತಸದಿಂದಂ
ಇಂದುಧರಂ ಹಿಗ್ಗುತೆ ನಲವಿಂದಂ
ವರವಂ ಕುಡಲೆಂದನುಗೈವುತ್ತಂ
ಸುರಸಂತತಿಗಭಯವನೀವುತ್ತಂ
ಪರಿಪರಿಯುಳ್ಕರೊಳೋಲಾಡಿಸುತಂ
ಶರಣತತಿಗೆ ಭಕ್ತಿಯನೀವುತ್ತಂ
ಭೃಂಗೀಶನನಡಿಗಡಿಗಪ್ಪುತ್ತಂ

ಹಿಂಗದೆ ನೇಹದಿ ಸಲೆ ಮೆಚ್ಚುತ್ತಿರ್ದಂ
ಹರಿಬೊಮ್ಮರ ವರ ಗುರು ವೊಪ್ಪಿರ್ದಂ
ಶರಣಜನದ ಸುರತರು ವೊಪ್ಪಿರ್ದಂ
ಭಕ್ತರ ಪರುಷದ ಕಣಿಯೊಪ್ಪಿರ್ದಂ
ಭಕ್ತರ ಚಿಂತಾಮಣಿಯೊಪ್ಪಿರ್ದಂ
ಭಕ್ತರ ಮತಿಯುನ್ನತಿಯೊಪ್ಪಿರ್ದಂ
ಭಕ್ತರ ಕಣ್ಣಿಂಗತಿಯೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ಕಂದ॥ ಪರಮೋತ್ಸಾಹದಿ ಭೃಂಗೀ।
ಶ್ವರನಂ ಕೊಂಡಾಡಿ ನೋಡಿ ನಲವೇರುವ ಶಂ।
ಕರನೊಲ್ದು ಭಕ್ತಿಸುಖಮಂ।
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ॥

---

# ಲಿಂಗಾರ್ಚನೆಯ ರಗಳೆಯು.

ಕಂದ॥ ಇಂದುಧರ ನಿಮ್ಮ ಚರಣ।
ದ್ವಂದಮನನವರತವರ್ಚಿಸುತ್ತಿಹ ಸುಖಮಂ॥
ತಂದೆ ಭವಭವದೊಳೀವುದು।
ಕಂದರ್ಪ ಮದಾರಿ ಹಂಪೆಯ ವಿರೂಪಾಕ್ಷಾ॥

## ಲಲಿತ ರಗಳೆ.

ಶ್ರೀಗುರುವೆ ಹಂಪೆಯ ವಿರೂಪಾಕ್ಷ ಕೇಳಯ್ಯ
ನಾಗಭೂಷಣ ನಿಮ್ಮ ಹೇಳೆಯಾಳಾನಯ್ಯ
ಸಲುಗೆಯಿಂ ಬಿನ್ನಪಂಗೈಯ್ವಪೆಂ ನಾನಯ್ಯ
ಒಲವಿಂದಲೆನಗೆ ವಿರೂಪಾಕ್ಷ ಕರುಣಿಪುದಯ್ಯ
ಧರೆಯೊಳಗೆ ನಿಮ್ಮ ತೊಳ್ತೆಂದು ಸಲಹುವುದಯ್ಯ
ಪರಮ ಭಕ್ತರ ಪದಕ್ಕೆನ್ನ ಸಲಿಸುವುದಯ್ಯ

ಅಗಲದೆ ನಿರಂತರಂ ನಿಮ್ಮನರ್ಚಿಸುವುದಂ
ಮಿಗೆ ಮೆಚ್ಚಿ ಮನವುಕ್ಕಿ ಬಂದು ಪುಳುಕಿಸುವುದಂ
ತುಂಗಭದ್ರಾನದಿಯ ಸಲಿಲಮಂ ಮೊಗೆತಂದು
ಲಿಂಗ ನಿಮಗಾನೆ ಮನವಾರೆ ಮಜ್ಜನಕೆರೆದು
ಮಗಮಗಿಪ ಚಂದನವನುದ್ವರ್ತನಂ ಮಾಡಿ
ಅಗರು ಕರ್ದಮಗಳಂ ನಿಮ್ಮ ಮೆಯ್ಯೊಳ್ತೀಡಿ
ಅರೆವಿರಿದ ಸುರಗಿ ಸುರಹೊನ್ನೆ ಸಂಪಿಗೆಗಳಂ
ಪರಿಮಳಂಗಳನೀವ ದುಂಡ ಮಲ್ಲಿಗೆಯರಲ್ಗಳಂ
ತನಿಗಂಪನೀವ ಮಲ್ಲಿಗೆ ಮೊಲ್ಲೆಜಾಜಿಯಂ
ಮನವೊಸೆದು ಕುಯ್ತಂದ ಪರಿಮಳದ ಪಾದ್ರಿಯಂ
ಕಂಪಿಸುವ ಕೈಗಳಿಂ ಪೂಮಾಲೆಗಳನೆತ್ತಿ
ಪೆಂಪೆಸೆಯೆ ಶಿವ ನಿಮ್ಮ ಸಿರಿ ಮುಕುಟದೊಳ್ಸುತ್ತಿ
ಕಮನೀಯವೆನಿಪ ಗುಗ್ಗುಳದ ಧೂಪವನೆತ್ತಿ

ರಮಣೀಯುವೆನಿಪ ಪೊಳೆವಾರತಿಗಳನೆತ್ತಿ
ಸಂತೋಷದಿಂದ ಮಾಣಿಕದ ಪರಿಯಾಣಮಂ
ಮುಂತಿರಿಸಿ ನಲವಿಂದೆ ಬೆಳಗಿದಡ್ಡಣಮುಮಂ
ಚಂದ್ರಿಕೆಗಳಂ ಕಡಿದು ಕಂಡಣಿಸಿದಂತಿಪ್ಪ
ಸಾಂದ್ರ ಧವಳತಮೆನಿಪ್ಪೋಗರವಸಿಂಬಪ್ಪ
ದಿವ್ಯಾನ್ನವಮೃತಾನ್ನ ದೇವಾನ್ನವಂ ಬಡಿಸಿ
ನವ್ಯ ಸೌರಭ ಶಾಕಪಾಕಂಗಳಂ ಬಡಿಸಿ
ಹರುಷದಿಂ ಮನವುಕ್ಕಿ ಕರಗಳಂ ಮುಗಿಮುಗಿದು
ಹರನೆ ಕೈಕೊಳ್ಳೆಂದು ಭಕ್ತಿಯಿಂದಗಿದಗಿದು

ಚನ್ನಯ್ಯನಿಕ್ಕಿದಂಬಲಿಯಿದಾರೈಸಯ್ಯಾ
ಕನ್ನೆ ನಿಮಗೆರೆದ ಹಾಲೆಂದು ಹಾರೈಸಯ್ಯಾ
ಚೋಳಿಯಕ್ಕನ ಬಾಯ ತುತ್ತೆಂದು ಕೊಳ್ಳಯ್ಯ
ಚೋಳ ನಿಮಗಿತ್ತನ್ನವೆಂದು ಕೈಕೊಳ್ಳಯ್ಯ
ಕಣ್ಣಪ್ಪನಣುಗನೆಂದೆನೆಗೆ ಕರುಣಿಪುದಯ್ಯ
ಉಣ್ಣದಿರಬಾರದೆಂಬುದನರಿದೆನುಣ್ಣಯ್ಯ
ಇಳೆಯಾಂಡಗುಡಿಮಾರನ ವರಸುತ ನಾನಯ್ಯ
ಚಳಿಸಿ ದೇವಾನ್ನವಿಕ್ಕಿದರ ಮಗ ನಾನಯ್ಯ
ಒಕ್ಕಲಿಗ ಮುದ್ದಯ್ಯನಕ್ಕರಿನ ಸುತನಯ್ಯ
ಚಿಕ್ಕನುಣ್ಣದೊಡೆ ನಿಮ್ಮಣುಗಸುತ ನಾನಯ್ಯ
ಎಂದು ಭಕ್ತಿಯ ಮನದೊಳಾನೆ ನಿಮಗುಣಲಿತ್ತ
ಸಂದ ಶರಣರ ವರ ನಿಧಾನ ನಿಮಗುಣಲಿತ್ತ

ಪನ್ನೀರಲಗ್ಗಣಿಯ ತಂದು ಹಸ್ತಕ್ಕೆರೆದು
ಪನ್ನಗಾಧರಗೆ ಕೈಘಟ್ಟಿಯಂ ಕೊಟ್ಟೆರೆದು
ಕರ್ಪೂರ ವೀಳೆಯವನೊಸೆದಳ್ತಿಯಿಂ ಕೊಟ್ಟು
ಸರ್ಪಭೂಷಣ ನಿಮ್ಮ ಚರಣಕ್ಕೆ ಪೊಡೆಮಟ್ಟು
ಪೊರೆಸಾರ್ದು ನಿಮ್ಮ ಪೂಜೆಯನಕ್ಕರಿಂ ನೋಡಿ
ಕರಿಕಂಠ ಶರಣೆಂದು ಸದ್ಭಕ್ತಿಯಂ ಬೇಡಿ
ಮನವುಕ್ಕಿ ಪೊಗಳಲುದ್ಯುತನಾಗಿ ನಿಂದಿರ್ದು



ತಸಿನೇಹವೊತ್ತರಿಸಿ ನಿಮ್ಮ ಹತ್ತಿರೆ ಸಾರ್ದು
ದೇವ ಮಮ ಹೃತ್ಕಮಲ ಮಂಡಿತ ವಿರೂಪಾಕ್ಷ
ದೇವ ಪ್ರಮಥ ನಿಚಯ ಪರಿವೃತ ವಿರೂಪಾಕ್ಷ
ದೇವ ನೃಕರೋಟಿಮಾಲಾಧರ ವಿರೂಪಾಕ್ಷ
ದೇವ ಕೋಟ್ಯರ್ಕ ತೇಜೋಮಯ ವಿರೂಪಾಕ್ಷ
ದೇವ ಗಂಗಾಮಕುಟರಂಜಿತ ವಿರೂಪಾಕ್ಷ
ದೇವ ಭೃಂಗೀಶನಾಂಟ್ಯಪ್ರಿಯ ವಿರೂಪಾಕ್ಷ
ದೇವ ಹರಹರ ಮನ್ಮನೋಹರ ವಿರೂಪಾಕ್ಷ
ದೇವ ಶಿವಶಿವ ಸದಾಶಿವ ಶಿವ ವಿರೂಪಾಕ್ಷ

ಎಂದಿಂತು ಪೊಗಳ್ದು ತಣಿವೈಯ್ದದೇ ಬಾಯ್ಬಿಟ್ಟು
ನಿಂದೊಮ್ಮೆ ಹಾಡಿ ನೋಡುವೆನೆಂದು ಮನವಿಟ್ಟು
ಲಲಿತ ಬಂಗಾಳದಿಂದೊಲಿದು ನಿಮ್ಮಂ ಹಾಡಿ
ಮಲಹರಿ ವರಾಳಿಯಿಂದೊಲಿದು ನಿಮ್ಮಂ ಹಾಡಿ
ದೇಶಿ ಗುರ್ಜರಿಗಳಿಂದೀಶ ನಿಮ್ಮಂ ಹಾಡಿ
ದೇಶಾಕ್ಷಿ ಗೌಳದೆ ಮಹೇಶ ನಿಮ್ಮಂ ಹಾಡಿ
ಬತ್ತೀಸ ರಾಗದಿಂ ಕರ್ತೃ ನಿಮ್ಮಂ ಹಾಡಿ
ಚಿತ್ತದೊಡೆಯನೆ ಮತ್ತೆ ಮತ್ತೆ ನಿಮ್ಮಂ ಹಾಡಿ

ಚನ್ನಯ್ಯನಂ ಹಾಡಿ ಹೊನ್ನಯ್ಯನಂ ಹಾಡಿ
ಕಿನ್ನರಿಯ ಬೊಮ್ಮತಂದೆಯನೊಪ್ಪದಿಂ ಹಾಡಿ
ಕಕ್ಕಯ್ಯನಂ ಹಾಡಿ ಚಿಕ್ಕಯ್ಯನಂ ಹಾಡಿ
ಅಕ್ಕರಿಂ ನಿಜಲಿಂಗ ಚಿಕ್ಕಯ್ಯನಂ ಹಾಡಿ
ಒಂಕಯ್ಯನಂ ಹಾಡಿ ಬಂಕಯ್ಯನಂ ಹಾಡಿ
ಲೆಂಕಮಂಚಣ್ಣನಂ ಕಲಕೇತನಂ ಹಾಡಿ
ಬಸವರಾಜನ ಮಳೆಯರಾಜನೋಹಿಲಯ್ಯನಂ
ಮುಸುಟೆಯ ಚೌಡರಾಯನನುಪ್ಪಟಯ್ಯನಂ
ಕೇಶಿರಾಜನ ದುಗ್ಗಳವ್ವೆ ದಾಸಿಮಯ್ಯನಂ
ಭಾಷೆಗೀಶನ ತಂದ ಮಿಸುಪಾದಿಮಯ್ಯನಂ
ಸಿದ್ಧರಾಮನನಲ್ಲಮನ ಮಲುಹಣಯ್ಯನಂ

ರುದ್ರ ಪಶುಪತಿ ಹಲಾಯುಧ ಮಯೂರಯ್ಯನಂ
ಸಾಮವೇದಿಗಳಿಗೊಪ್ಪುವ ಶ್ವಪಚದೇವರಂ
ಕಾಮಿತವನೀವ ಸಿರಿಯಾಳಚೆಂಗಳೆಯರಂ
ನಂಬಿಯಣ್ಣನ ನಿಂಬಿಯಕ್ಕ ಸತ್ಯಕ್ಕನಂ
ಕೆಂಭಾವಿಯೊಳ್ಮೆರೆದ ಭಂಗಭೋಗಣ್ಣನಂ
ಕೊಂಡಗುಳಿಯ ಕೇಶಿರಾಜ ತೆಲುಗೇಶನಂ
ಪಂಡಿತಾರಾಧ್ಯನಿಂಡೆಯ ಶಾಂತಿಮಯ್ಯನಂ
ಚೋಳ ಚೇರಮ ಗೊಲ್ಲಳನ ಬಿಬ್ಬಿಬಾಚನಂ
ಕೋಳೂರು ಕೊಡಗೂಸು ಮಹದೇವಿಯಕ್ಕನಂ
ಕಾಳಿದಾಸನ ಕಣ್ಣಪ್ಪನ ಚೆನ್ನಬಸವನಂ
ಮೋಳಿಗೆಯ ಮಾರಿತಂದೆಯ ಮಾದಿರಾಜನಂ
ಅಮ್ಮವ್ವೆ ರೆಮ್ಮವ್ವೆ ಕದಿರ ರೆಬ್ಬವ್ವೆಯಂ
ನಿರ್ಮಳ ಜ್ಞಾನಿ ಕಮಳವ್ವೆ ಬಾಚವ್ವೆಯಂ
ಗುರುಭಕ್ತ ಜಗದೇವ ಮೊಲ್ಲೆ ಬೊಮ್ಮಣ್ಣನಂ
ಪರದೈವ ರಹಿತ ಶಂಕರದಾಸಿಮಯ್ಯನಂ
ನಚ್ಚಿನರುವತ್ತುಮೂವರನಸಂಖ್ಯಾತರಂ
ಅಚ್ಚರಿಯೊಳಿಸವ ಭಕ್ತ್ಯಾಂಗನೆಯರೆಲ್ಲರಂ
ಭಕ್ತಿಯಿಂ ಪಾಡಲ್ಮೊಸೆದು ಮೆಚ್ಚಾಗಿ
ಯುಕ್ತಿಯಿಂ ಮೀರಿನರಸಂ ನಿಮ್ಮ ನಚ್ಚಾಗಿ
ಹೊಸ ರೀತಿ ರಾಗದಿಂ ದೆಸೆದೆಸಗಳಂ ಬೀರಿ
ಪಸರಿಸುವ ತಾಳದಿಂ ಸುಗತಿ ನರ್ತನವೇರಿ

ಇಂತು ಮಹಲಿಂಗವಂ ಕಣ್ಗಳೊಳಗೊತ್ತುತಂ
ಮುಂತೆ ಹಾ ಹಾ ಯೆಂದು ವಿಷಯಕ್ಕೆಯಳ್ಕುತಂ
ಭೃಂಗಿಯ ಪದಂಗಳಂ ನೆನೆನೆನೆದು ನೆನೆನೆನೆದು
ಭೃಂಗಿಯಿಂ ಕೋಡಗಾಟವನಾಡಿ ತೊನೆತೊನೆದು
ಗತಿ ವಾದ್ಯ ಗತಿಗಳಿಂ ಕುಣಿಕುಣಿದು ಕುಣಿಕುಣಿದು
ಅತಿಶಯ ಸುಬೋಧೆಯಿಂ ಭಕ್ತಿಗೆ ಮನಂದಣಿದು
ಏನುವಂ ತಾನರಿಯದಾನಂದದಿಂ ನಿಂದು
ಮೌನವೇ ಗತಿ ಮತಿಯದಾಗಿ ನೆರೆ ಸಲೆಸಂದು



ಪೊಗಳ್ವಕ್ಕರಂ ನಲಿದು ನಾಲಿಗೆಯ ಮೇಲಿರಲ್
ಬಗೆಯ ಭಾವಂ ಬಲಿದು ಮನವನೆಡೆಗೊಂಡಿರಲ್
ಏನೆನ್ನ ಶಂಭುವೆ ಸದಾಶಿವ ಮಹಾದೇವ
ಏನೆನ್ನ ಕಾರುಣ್ಯಸಿಂಧುವೆ ಮಹಾದೇವ
ಏನೆನ್ನ ನಚ್ಚಿನಧಿದೈವವೆ ಮಹಾದೇವ
ಏನೆನ್ನ ಮಚ್ಚಿನ ಮಹಾಸುಧೆ ಮಹಾದೇವ
ಏನೆನ್ನನೊಲಿದು ಪೊರೆವಾಳ್ದನೆ ವಿರೂಪಾಕ್ಷ
ಏನೆನ್ನನೊಲಿವ ಕುಲದೈವವೆ ವಿರೂಪಾಕ್ಷ
ಎಂದೀ ತೆರದಿ ನಿಮ್ಮನಪ್ಪಿ ಸುಖವಡೆವುದಂ
ತಂದೆ ಕರುಣಿಪುದಯ್ಯ ಸದ್ಭಕ್ತನಪ್ಪುದಂ

ಆವ ಜಾತಿಗಳೊಳಗೆ ಹುಟ್ಟಿಸಿದಡೆಲೆ ದೇವ
ನೀವಲ್ಲದರಿಯದಂತಿರಿಸೆನ್ನನೆಲೆ ದೇವ
ಇಳಿಕೆಯ್ಯದೀ ಸುಖವನೆನಗೆ ಕರುಣಿಪುದಯ್ಯ
ಬಳಿವಳಿಯ ತೊಳ್ತಿಂದು ಬಡಿದು ಕಲಿಸುವುದಯ್ಯ
ಬೇರೊಂದನೊಲಿವನಲ್ಲೆಂಬುದನರಿವುದಯ್ಯ
ಸಾರಿ ಮೊರೆಯಿಟ್ಟೆನೆನ್ನಂ ದಯದಿ ನೋಡಯ್ಯ
ಆವ ತೆರದಿಂದಾದೊಡಂ ಗುರು ವಿರೂಪಾಕ್ಷ
ದೇವ ಕರುಣಿವುದಯ್ಯ ಹಂಪೆಯ ವಿರೂಪಾಕ್ಷ
ಆಳಿನಪಮಾನವಾಳ್ದಂಗಯ್ಯ ಕಾಯಯ್ಯ
ಜಾಳಿಸಿದ ಪಾಪಾತ್ಮವಿದನಿನ್ನು ನೀಗಯ್ಯ
ಮಾಡುವವನುಂ ನೀನೆ ನೋಡುವವನುಂ ನೀನೆ
ಬೇಡುವವನುಂ ನೀನೆ ನುಡಿಸುವವನುಂ ನೀನೆ
ಈಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರುಪಾಕ್ಷ
ರಕ್ಷಿಸು ವಿರೂಪಾಕ್ಷ ರಕ್ಷಿಸು ವಿರೂಪಾಕ್ಷ
ಭಯಹರ ವಿರೂಪಾಕ್ಷ ದಯೆಗೈ ವಿರೂಪಾಕ್ಷ
ಜಯಜಯ ವಿರೂಪಾಕ್ಷ ಜಯಜಯ ವಿರೂಪಾಕ್ಷ
ಜಯ ಜಯ ನಮಸ್ತು ತೇ ಜಯ ಜಯ ನಮಸ್ತು ತೇ
ಜಯ ಜಯ ನಮಸ್ತು ತೇ ಜಯ ಜಯ ನಮಸ್ತು ತೇ

ಕಂ॥ ಕೇಳಯ್ಯ ವಿರೂಪಾಕ್ಷ ಕೃ।
ಪಾಳುವೆ ನಿಮ್ಮಡಿಯ ತೊತ್ತು ತೊತ್ತಿನ ಭೃತ್ಯಂ
ಗಾಳನಾಳಾಳಿ ನಾಳಾ।
ಕೇಳುಂ ಭವದಲ್ಲಿ ಹಂಪೆಯ ವಿರೂಪಾಕ್ಷಂ ॥

---

## ಪ್ರಾರ್ಥನೆಯ ರಗಳೆ.

ಕಂ॥ ದೇವ ಹರ ದೇವ ಪುರಹರ।
ದೇವ ಸದಾ ವರದ ದೇವ ಚಂದ್ರಾಭರಣಾ॥
ದೇವ ಪತಿ ಎನಗೆ ಕರುಣಿಸು।
ದೇವ ಕೃಪಾ ಬಹುಳ ಹಂಪೆಯ ವಿರೂಪಾಕ್ಷಾ॥

### ಮಂದಾನಿಲ ರಗಳೆ.

ದೇವ ಶ್ರೀ ಪಂಪಾಪುರದಧಿಪತಿ
ದೇವ ಸದಾನತ ಸಂಕುಳ ಸದ್ಗತಿ
ದೇವಾ ಭಾಸುರ ಪಿಂಗ ಜಟಾಧರ
ದೇವ ತರಂಗ ಲಸದ್ಗಂಗಾಧರ
ದೇವ ಮಹೇಶ ಸುಧಾಕರಶೇಖರ
ದೇವ ಕಿರೀಟಾಲಂಕೃತ ಶುಭಕರ
ದೇವ ಮಧುವ್ರಜ ಸಮ ನೀಲಾಳಕ
ದೇವ ಭವಾನೀ ಸಮ ಸುಖ ಪಾಲಕ
ದೇವ ದಿವಾಕರ ಶಶಿ ಶಿಖಿ ಲೋಚನ
ದೇವ ನತ ವ್ರಜ ಮಾಯಾ ಮೋಚನ
ದೇವ ಭುಜಂಗಾರಾಜಿತ ಕುಂಡಲ
ದೇವ ಸಮುನ್ನತ ಘನ ಭುಜ ಮಂಡಲ
ದೇವ ಜಗತ್ಪಾವನ ಪಂಚಾನನ
ದೇವ ಹರಿಸ್ತುತ ನತ ಚತುರಾನನ
ದೇವ ಗಜಾಜಿನ ಮಂಡಿತ ವಿಗ್ರಹ
ದೇವ ಪ್ರಮಥ ನಿಕಾಯಾನುಗ್ರಹ
ದೇವಾ ನಿಶಿತಾಯುಧ ಸಂಚಯ ಧರ
ದೇವ ಸರೋಜೋದ್ಭವ ಶಿರಧರ ಕರ
ದೇವ ಸುರವ್ರಜ ಮಸ್ತಕ ಭೂಷಣ
ದೇವ ಶರಣ ಸಂಕುಳದಘ ಶೋಷಣ

ದೇವ ಫಣಾಧರ ವಳಯ ವಿಮಂಡಿತ
ದೇವಾನತ ಜನ ಸಂತತ ಸದ್ಗತಿ
ದೇವಾ ಹರಿ ಬೊಮ್ಮಾರ್ಚಿತ ಪದತಳ
ದೇವ ಯಶೋಧವಳಿತ ದಿಕ್‌ಸಂಕುಳ
ದೇವಾ ಪರಿವೃತ ಸುರಭೂರುಹ ಜಯ
ದೇವಾ ಅಪಾಯ ರಹಿತ ಜ್ಯೋತಿರ್ಮಯ
ದೇವಾ ಸಜ್ಜನ ಭವ ಭಯ ಭಂಜನ
ದೇವ ನಿರಂತರ ನಿತ್ಯ ನಿರಂಜನ
ದೇವ ಪುರತ್ರಯ ವನ ದಾವಾನಲ
ದೇವ ಜಲಂಧರ ಮೇಘ ಮಹಾಬಲ
ದೇವ ರತೀಶ ಮದಾಂಧ ದಿವಾಕರ
ದೇವ ಕೃತಾಂತ ಕಳೇವರ ಸಂಹರ
ದೇವ ಮೃಡಾಣೀ ದೇಹಾರ್ಧಪ್ರದ
ದೇವ ಸುಪರ್ಣಧ್ವಜ ಚಕ್ರಪ್ರದ
ದೇವ ವಿಶಾಲ ವೃಷೇಂದ್ರ ಸುಖಾಸನ
ದೇವಾ ದಕ್ಷ ವಿಯೋಗ ವಿನಾಶನ

ದೇವಾ ಅನೇಕ ಶೃತಿ ತತಿ ದುರ್ಲಭ
ದೇವ ಪುರಂದರ ಸಂಕುಳ ವಲ್ಲಭ
ದೇವ ಮಹಾ ಸಂಪತ್ ಪರಿಶೋಭಿತ
ದೇವ ವಿಶೇಷ ಜ್ಞಾನ ವಿಭೂಷಿತ
ದೇವಾ ಮುಕ್ತಿ ನಿಕಾಯ ವಿರಾಜಿತ
ದೇವಾ ಶಕ್ತಿತ್ರಯ ಸಂಸೇವಿತ
ದೇವ ವಿಶುದ್ಧ ಷಡಧ್ವ ನಿಕೇತನ
ದೇವ ಸದಾ ಶರ್ವಾಣೀ ಚೇತನ
ದೇವಾ ನಿರುಪಮ ನಿರ್ಮಳ ನಿಷ್ಕಳ
ದೇವ ಸದಾವರಣಪ್ರಭು ನಿಶ್ಚಳ
ದೇವಾ ತುಂಬುರ ವರ ನಾದಪ್ರಿಯ
ದೇವಾ ನಾರದ ವರ ವೀಣೋದಯ
ದೇವಾ ನಾದಪ್ರಿಯ ಸಂಭಾವನ



ದೇವಾ ಛತ್ರಪ್ರಕರ ಮಹಾ ಘನ
ದೇವ ವಿವಸ್ವತ ಕೋಟಿ ಸಮಪ್ರಭ
ದೇವಾ ಕೋಟ್ಯಾನಲ ತೇಜಪ್ರಭ
ದೇವ ಜರಾಮಯ ಪಾಶ ವಿವರ್ಜಿತ
ದೇವ ಪ್ರಳಯ ಸಮಯ ಘನ ಗರ್ಜಿತ
ದೇವ ಸುಹೃಜ್ಜನ ಹೃದಯ ಸದಾ ಗತಿ
ದೇವ ಧರಿತ್ರೀ ಧರ ಹರಿ ಸಂಗತಿ
ದೇವ ನಿರಂತರ ದೇವ ವಿಪೂತನ

ದೇವ ಮಹೇಶ್ವರ
ದೇವ ಮದೀಶ್ವರ
ದೇವ ಮಹಾಚಲ
ದೇವ ಮಹಾಬಲ
ದೇವ ಮಹಾನಭ
ದೇವ ಮಹಾಪ್ರಭ
ದೇವ ಮಹಾಶಶಿ
ದೇವ ಮಹಾರಸಿ
ದೇವ ಮಹಾಭವ
ದೇವ ಮಹಾಶಿವ
ದೇವ ಮಹಾಗುಣಿ
ದೇವ ಮಹಾಮಣಿ
ದೇವ ಮಹಾಜಪ
ದೇವ ಮಹಾತಪ

ಕಂ॥ ಶರಣು ಸುರತರುವೆ ಶರಣಾಂ ।
ಬುರುಹ ದಿವಾಕರನೆ ಶರಣು ಕರುಣಾಕರನೆ ॥
ಶರಣು ಶರಣೆನುತಲಿದ್ದೆನೆ ।
ಕರುಣಿಸು ಸದ್ಭಕ್ತಿ ಯೆನಗೆ ಶ್ರೀ ವಿರುಪಾಕ್ಷಾ ॥

# ಹಂಪೆಯ ರಗಳೆ

## ಸ್ರಗ್ಧರಾವೃತ್ತ

ನಿತ್ಯ ಶ್ರೀಕಂಠಾಭರಣ ಕಿರಣಸಂಘಾತ ಸಂಭೂತಸೂತ್ರಾ
ದಿವ್ಯ ಪ್ರಾತುಂಗ ಗಂಗಾಧರ ಪುರಹರ ಭಾಳಾಕ್ಷ ಚಂಚದ್ಭವಾನೀ
ಪ್ರತ್ಯಕ್ಷಸ್ವಾಮಿ ಕಾಮಾಂತಕ ನಿಖಿಳ ಮುಖಾಧಾರ ವಿಸ್ತಾರ ಭಕ್ತ
ಗರ್ತ್ಯಂತ ಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

### ಉತ್ಸಾಹ ರಗಳೆ.

ಸಕಲ ರತ್ನನಿಕರಖಚಿತ ಮಕುಟಧರನೆ ಹಂಪೆಯರಸ
ಪ್ರಕಟ ಮಕುಟ ಜಟಾಜೂಟಮಂಡಿತ ಮಹಿಮ ಹಂಪೆಯರಸ
ಸುಕರವೆನಿಪನರ್ಘಿಪಳಕ ಪಟಲ ನಿಟಲ ಹಂಪೆಯರಸ
ಸಕಲಲೋಕ ಭರಿತ ನಿರುತ ಸರ್ವಜೀವ ಹಂಪೆಯರಸ
ಮಂಡಿತ ಪ್ರಚಂಡ ಕಿರಣಗಂಡಯುಗಳ ಹಂಪೆಯರಸ
ತಂಡದಿಂದ ದೆಸೆಗೆ ಮಿಸುಪ ಸುಖದ ಮುಖವೆ ಹಂಪೆಯರಸ
ಪುರವಸುರುಪಿ ಧರೆಗೆ ಪರಮ ಹರುಷವಿತ್ತೆ ಹಂಪೆಯರಸ
ಶರಣಜನಕ್ಕೆ ಹರಣವಾಗಿ ಕರುಣಿಸಿರ್ಪೆ ಹಂಪೆಯರಸ
ಕೇಳ್ವುದೆನ್ನ ಚಿನ್ನ ಬಿನ್ನಪವನುಮಾಧಿನಾಥ
ತಾಳ್ವುದಿಪನು ಮುದ್ದುಮಾಡಿ ಭಾವಭರಿತ ಭಕ್ತಿಯೂಥ

ಸಕಲ ಕಾಮ ನಿಕರದಿಂದ ವಿಕಳನಾಗುತಿರ್ದೆನಯ್ಯ
ಸುಕರವೆನಿಪ ಭಕುತಿಯರಿಯದಖಿಳ ವಿಷಯಿಯಾದೆನಯ್ಯ
ಕೋಪ ತಾಪ ಲೇಪದಿಂದೆ ತಾಪಿಸುತ್ತಮಿರ್ದೆನಯ್ಯ
ಪಾಪ ಲಾಭ ಲೋಭದಿಂದೆ ಕೋಪಿಸುತ್ತಮಿರ್ದೆನಯ್ಯ
ಮೋಹ ಮದ ಸಮೂಹದಿಂದೆ ದಾಹಿಸುತ್ತಮಿರ್ದೆನಯ್ಯ
ದೇಹದಿಚ್ಛೆ ಮೆಚ್ಚಿ ಹೆಚ್ಚಿ ಮಚ್ಚರಕ್ಕೆ ಮೇಳೆಯಾದೆನಯ್ಯ
ನಾದಮೂರ್ತಿ ಪುಣ್ಯಕೀರ್ತಿ ಕಾಯ್ದುಕೊಳ್ಳೊ ಹಂಪೆಯರಸ
ವೇದಪಕ್ಷ ವಿಮಲವಕ್ಷ ರಕ್ಷಿಸೆನ್ನ ಹಂಪೆಯರಸ

ಆಸೆಯಲಗು ನಚ್ಚಿ ಮೆಚ್ಚಿ ಮನವ ನುಚ್ಚು ಮಾಡಿತಯ್ಯ
ಗಾಸಿಯಾಗಿ ನೊಂದು ಬೆಂದು ಬರಿದೆ ಬಳಲುತಿರ್ದೆನಯ್ಯ
ಮನ ಧನಂ ಸುತರ್ಕುಲಂ ಛಲಂ ಬಲಂಗಳೆಂಬಿವೆಲ್ಲ
ಜನನಿ ಜನಕರಬಲೆ ಯೌವ್ವನಂ ಶರೀರಮೆಂಬಿವೆಲ್ಲ
ಮಿಂಚು ಮಂಜು ಕನಸು ಕರಕವೆಂಬ ತೆರನನರಿವುದಿಲ್ಲ
ಸಂಚಲಂ ಮರೀಚಿಕಾಜಲಂಗಳೆಂದು ಕಂಡುದಿಲ್ಲ
ಗಗನ ಕುಸುಮವಂಬುಲಿಪಿಯನಿತ್ಯವೆಂದು ಬಗೆದುದಿಲ್ಲ
ಮುಗಿಲ ನೆಳಲುಮಿಂದ್ರಚಾಪವಚಿರವೆಂದು ಕಂಡುದಿಲ್ಲ
ನಿತ್ಯವೆಂದು ನಿರುತವೆಂದು ಹತ್ತೆ ಸಾರುತಿರ್ದೆನಯ್ಯ
ಸತ್ಯವರಿಯದತ್ತಲಿತ್ತ ಸುತ್ತಿ ಬಳಲುತಿರ್ದೆನಯ್ಯ
ಅರಿಯದರಿಸಿ ಮರೆದು ಮರುಗಿ ಕುರುಹುಗೆಟ್ಟೆನೆನ್ನ ಗುರುವೆ
ತೆರಹುಗಾಣದರುಹುಗುಂದಿ ಮರಹುಗೊಂಡೆನೆನ್ನ ಗುರುವೆ

ಮಾಯೆಯಂ ಸಡಿಲ್ಚಿ ಕಳೆದು ಕಾಯಿ ತಂದೆ ಹಂಪೆಯರಸ
ಜೀಯ ನಿತ್ಯ ಕಾಯಿ ದೇವರಾಯ ನೋಡು ಹಂಪೆಯರಸ
ವಿಷಯವೆಂಬ ಕೇಸರಿನೊಳ್ಬಿಳ್ದ ಪಶುವನೆನ್ನ ರಕ್ಷಿಸಯ್ಯ
ಪಶುಪತಿ ಶಿವಾ ಭವಾ ಭವಾನಿಯರಸ ಕರುಣಿಸಯ್ಯ
ಶೃತಿಗಳರಸಿ ಮತಿಗಳರಸಿ ಯತಿಗಳರಸಿ ಕಾಣದಭವ
ನತ ಜನಕ್ಕೆ ಮುಂದೆ ಬಂದು ನಿಂದು ತೋರ್ಪೆ ಕರುಣಿ ವಿಭವ
ಏಕೆ ತಂದೆ ಎನ್ನನೊಮ್ಮೆ ನೋಡಲೊಲ್ಲೆ ಹಂಪೆಯರಸ
ನಾಕಲೋಕಪತಿಗೆ ಪತಿ ಪಿನಾಕ ಪಾಣಿ ಹಂಪೆಯರಸ

ತಾಯ ಗರ್ಭದೊಳಗೆ ತಗ್ಗಿ ಕುಗ್ಗಿ ಮಗ್ಗುಲೊಳಗೆ ಮಗ್ಗಿ
ಹೇಯವೆನ್ನದುದರ ರಸಮನುಂಡು ಕರುಳ ಬಲೆಯೊಳೊಗ್ಗಿ
ಮಲದ ಮೂತ್ರ ಕುಲದ ನಡುವೆ ಕಲಸಿ ನೆಲಸಿ ತೊಲಗದಿರ್ದ
ಕೆಲ ಬಲಂಗಳರಿಯದಧಮ ಕೂಪದಲ್ಲಿ ತಾಪಿಸಿರ್ದ
ಸೆಡೆದೆ ನುಡಿವೆನಾರೆನೊಲ್ಲೆನಕ್ಕಿದೇಂ ಸಮರ್ಥ ಗುರುವೆ
ತಡೆಯದೆನ್ನನಚ್ಚ ಭಕುತಿ ಸುಖದೊಳಿರಿಸು ಪರಮ ಗುರುವೆ
ದೇವ ನತವಿತಾನ ವಿವರ ಜಲಧಿ ಚಂದ್ರ ಕರುಣಿಸಯ್ಯಾ

ದೇವ ಭಕ್ತ ನಿಕರ ವಿಕಸಿತ ಪ್ರಮೋದ ಕರುಣಿಸಯ್ಯ
ಕಮಲಜಾಂಡ ಫಲ ಸಮೂಹ ವಿಮಲ ವೃಕ್ಷ ಹಂಪೆಯರಸ
ಸಮುದಿತ ಪ್ರತಾನ ಭರಿತ ಚಿತ್ರಕಾಶ ಹಂಪೆಯರಸ
ಸುರಸಮಾಜರಾಜ ರಾಜರಾಜಮೌಲಿ ಹಂಪೆಯರಸ
ಗಿರಿಸುತಾ ಲತಾ ವಿತಾನ ಕಲ್ಪ ಭೂಜ ಹಂಪೆಯರಸ
ಈಶವಿಗತದೋಷ ಪುಣ್ಯ ವೇಷ ಕರುಣಿ ಕರುಣಿಸಯ್ಯ
ಪಾಶರಹಿತ ಮುಕ್ತಿನಿಹಿತ ಭಕ್ತಿಸಹಿತ ಕರುಣಿಸಯ್ಯ

ಕಳಿದು ಮುಳಿದು ಸುಳಿದು ಹೊಳೆದು ಕಾಡಲೇಕೆ ಹಂಪೆಯರಸ
ತಿಳಿದು ಬೆಳಪ ಭಕುತಿಯಿತ್ತು ಸುಖವನೀಯೊ ಹಂಪೆಯರಸ
ಬಾಲನೊರಲುತಿರ್ದೊಡೇಕೆ ಕೇಳಲೊಲ್ಲೆ ಹಂಪೆಯರಸ
ಕಾಲಕಾಲ ವಿಮಲಶೀಲ ಭಕುತಿಲೋಲ ಹಂಪೆಯರಸ
ಕಣ್ಗೆ ಕಣ್ಣೆ ಮನಕೆ ಮನವೆ ಗುಣಕೆ ಗುಣವೆ ಹಂಪೆಯರಸ
ಪಣ್ಗೆ ಪಣ್ಣೆ ರಸಕೆ ರಸವೆ ಸವಿಗೆ ಸವಿಯೆ ಹಂಪೆಯರಸ
ಕುಲಕೆ ಕುಲವೆ ಛಲಕೆ ಛಲವೆ ಬಲಕೆ ಬಲವೆ ಹಂಪೆಯರಸ
ನೆಲಕೆ ನೆಲವೆ ಜಲಕೆ ಜಲವೆ ಶಿಖಿಗೆ ಶಿಖಿಯೆ ಹಂಪೆಯರಸ
ಅಸುವಿಗಸುವೆ ಅಣುವಿಗಣುವೆ ಯಾತ್ಮಕಾತ್ಮ ಹಂಪೆಯರಸ
ಶಶಿಗೆ ಶಶಿಯೆ ರವಿಗೆ ರವಿಯೆ ನಭಕೆ ನಭವೆ ಹಂಪೆಯರಸ
ನುಡಿಯದಿರ್ದು ನೋಡದಿರ್ದೊಡೆಂತು ಬರ್ದುಂಕುವೆಂ ತ್ರಿಶೂಲಿ
ನುಡಿಸಿ ನೋಡಿ ಬದುಕಿಸೆನ್ನನಕ್ಕರಿಂ ಕಪಾಲ ಮಾಲಿ
ನೋಡಿ ನೋಡದಿರ್ಪರುಂಟೆ ಕೂಡಿ ಕೂಡದಿರ್ಪರುಂಟೆ
ಮಾಡಿ ಮಾಡದಿರ್ಪರುಂಟೆ ಬೇಡಿ ಬೇಡದಿರ್ಪರುಂಟೆ
ಭಕುತಿ ಸುಖವನೀಯದಿಹುದಿದಾವ ಹೆಂಪು ಹಂಪೆಯರಸ
ಯುಕುತಿ ಏಕೆ ಶಿಶುವಿನೊಡನೆ ಪಶುವಿನೊಡನೆ ಹಂಪೆಯರಸ

ಎನಗೆ ತಂದೆ ತಾಯಿ ಬಂಧುಬಳಗವಚಲ ಭಕ್ತಿ ನೀನೆ
ಎನಗೆ ಸುಗತಿ ಸುಮತಿ ಸೊಂಪು ಬಿಣ್ಪು ನುಣ್ಪು ತಣ್ಪು ನೀನೆ
ತನುವಿನೊಳಗೆ ತೆರಹುಗೊಡದೆ ತೀವಿ ನಿಲ್ಲು ಹಂಪೆಯರಸ
ಮನದ ಕಣ್ಗಳೊಳಗೆ ಸುಳಿದು ಸುಖವನೀಯೊ ಹಂಪೆಯರಸ



ಎನ್ನ ಚಿತ್ತದೊಳಗೆ ತಿಳಿದು ತೊಳಗಿ ಬೆಳಗು ಹಂಪೆಯರಸ
ಎನ್ನ ಭಾವದೊಳಗೆ ಕರುಣವೆರಸಿ ಬೆರಸು ಹಂಪೆಯರಸ
ಭವಭವಂಗಳೊಳಗೆ ತಿರುಗಿ ಬಂದು ಸವೆದೆ ಹಂಪೆಯರಸ
ಸಪನವಾದಿ ಜನನದಿಂದೆ ನವೆದು ನವೆಸೆ ಹಂಪೆಯರಸ
ಹುಟ್ಟಿ ನವೆದು ನಡುವೆ ಮತ್ತೆ ಹುಟ್ಟಿ ಸವೆದು ನವೆದೆನಯ್ಯ
ಹುಟ್ಟದಂತೆ ಭವವನೈದಿ ಮಾರುವೋದೆ ಕರುಣಿಸಯ್ಯ
ಪರಮಪುರುಷ ಲಸಿತ ಹರುಷ ಪುಣ್ಯ ಪುರುಷ ಹಂಪೆಯರಸ
ಗರಳಧರನೆ ದುರಿತಹರನೆ ಶರಣವರನೆ ಹಂಪೆಯರಸ

ಅಖಿಳ ಗುರುವೆ ಹಂಪೆಯರಸ
ನಿಖಿಳ ಗುರುವೆ ಹಂಪೆಯರಸ
ದಾನನಿಧಿಯೆ ಹಂಪೆಯರಸ
ಮಾನನಿಧಿಯೆ ಹಂಪೆಯರಸ
ವೇದದೂರ ಹಂಪೆಯರಸ
ನಾದಸಾರ ಹಂಪೆಯರಸ

ದೇವರಮ್ಯ ಭಾವಗಮ್ಯ
ಸಹಜ ನಿತ್ಯ ಬಹಳ ಸತ್ಯ
ಭೃತ್ಯ ಸುಲಭ ಸತ್ಯ ಶರಭ
ಪರಶುಧರನೆ ಕರುಣಿಹರನೆ
ನೋಡು ಶಿವನೆ ನೋಡು ಭವನೆ
ಬಾರ ದೇವ ಸಾರ ಹೃದಯ
ಮಂಗಳಾಬ್ಧಿ ತುಂಗಲಬ್ಧಿ
ವಿಷಮನೇತ್ರ ಲಸಿತಗಾತ್ರ
ಲಿಂಗಮೂರ್ತಿ ಜಂಗಮೂರ್ತಿ

ಎನ್ನ ಗುರುವೆ ತಂದೆ ಈಶ
ಲಾಲಿಸಯ್ಯ ಪಾಲಿಸಯ್ಯಾ
ಏವೆನೀಶ ಕಾವುದೀಶ
ಆಗಳಾಗ ಳೀಗಳೀಗ

ಳತುಳ ಕಾಯ ನತ ನಿಕಾಯ
ದೇವ ಗುರುವೆ ದೇವ ವರವೆ
ದೇವ ಗತಿಯೆ ದೇವ ಮತಿಯೆ
ದೇವ ಪತಿಯೆ ಹಂಪೆಯರಸ
ಜಯತು ಜಯತು ಹಂಪೆಯರಸ

---



# ಪಂಪಾಕ್ಷೇತ್ರದ ರಗಳೆ.

ಕಂ॥ ನೇತ್ರತ್ರಯನತ್ಯನುಪಮ
ಗಾತ್ರಂ ಪಡೆದೆಮಗೆ ಕುಡುಗೆ ಪಂಪಾನಾಥಂ ।
ಧಾತ್ರೀತಳದೊಳು ಪಂಪಾಕ್ಷೇತ್ರ
ಸ್ತೋತ್ರವನೆ ಮಾಳ್ಪ ಎನ್ನಯ ಮತಿಗುನ್ನತಿಯಂ ॥

## ರಗಳೆ.

ಎಂತೆನೆ ಸಮುದ್ರಮುದ್ರಿತ ಧರಾಮಧ್ಯದೊಳು
ಸಂತತಂ ಮೇರುವಿನ ದಕ್ಷಿಣ ವಿಭಾಗದೊಳು
ಮೆರೆವುದದು ಹೇಮಕೂಟವ್ರಾತ ಶಿವಪುರಂ
ಹರಿಸೂಡಿದಂ ನೆಲಿಸಿ ನಿಂದ ಪಂಪಾಪುರಂ
ಹರಿಯಜರು ಸೊಗಸಿನಿಂ ಸೊಗಳ್ವ ಪಂಪಾಪುರಂ
ಶರಣರೊಲವಿಂದನರಿದಿರ್ಪ ಪಂಪಾಪುರಂ

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಪಾಪಹರ ಸುತ್ತ ಯೋಜನ ಪ್ರಮಾಣಂ ಕೂಡೆ
ಅಲ್ಲಿ ಮೂಡಣ ಬಾಗಿಲೊಳಗಿರ್ಪನುನ್ನತಂ
ಸಲ್ಲಲಿತ ಗುಣಕಿನ್ನರೇಶ್ವರಂ ಶಾಶ್ವತಂ
ಅಲ್ಲಿ ತೆಂಕಣ ಬಾಗಿಲೊಳಗಿರ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
ಪಶ್ಚಿಮ ದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯ ದಿಟಂ ಸೋಮನಾಥನತಿಪ್ರೇಮದಿಂ
ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮ ಗುಣ ಸ್ಥಾಣು ವಾಣಿಭದ್ರೇಶ್ವರಂ
ಇಂತೆನಿಸಿ ಮೆರೆವ ನಾಲ್ಕುಬಾಗಿಲುಗಳೊಳಗೆ
ತಿಂಥಿಣಿಪ ಶಿವಲಿಂಗವಿಪ್ಪವಾ ಪುರದೊಳಗೆ

ಪಂಪಾವಿರೂಪಾಕ್ಷನಲ್ಲಿಂದನಂತರಂ
ಹೆಂಪಿಂದ ಹನುಮಂತೇಶ್ವರನಿಪ್ಪನುರುತರಂ

ರಂಭೇಶ್ವರಂ ನಳೇಶ್ವರರಿರ್ಪರಂತಲ್ಲಿ
ಶಂಭುಮುಕ್ತೇಶ್ವರಂ ಮಲ್ಲಿಕಾರ್ಜುನರಲ್ಲಿ
ಮಂಗಳಾಸ್ಪದ ರಾಮಲಕ್ಷ್ಮಣೇಶ್ವರರಲ್ಲಿ
ಹಿಂಗದೆ ಮಹಾಕಾಳದೇವರೊಪ್ಪುವರಲ್ಲಿ
ವರದ ಮಾರ್ಕಂಡೇಶ್ವರಂ ನಿಂದನೊಲವಿಂದೆ
ಸುರರಾಜನಪ್ಪಿಂದ್ರೇಶ್ವರಂ ಮುಂದೆ
ಗುರುಸೋಮನಾಥನಿಪ್ಪಂ ಪುರದೊಳಲವಿಂದೆ
ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ
ನಲವಿಂದೆಯೊಪ್ಪುತಿರೆ ನಿಂದನಜ್ಞೇಶ್ವರಂ
ನೆಲಸಿಹಂ ಮುಂದೆ ಪರಮಜ್ಞಾನಿ ಶಂಕರಂ
ತಾನಘೋರೇಶ್ವರಂ ದಾನಿ ನಾಗೇಶ್ವರಂ
ಶ್ರೀನಿಧಿಯುದಾರ ಕೇದಾರ ದೇವೇಶ್ವರಂ
ಕರಮೆಸೆವ ಲಿಂಗಛಾಯಾಮಲ್ಲಿಕಾರ್ಜುನಂ
ವರುಣೇಶ್ವರಂ ವಾಯುವೇಶ್ವರಂ ಪಾವನಂ
ತರದಿಂ ಕುಬೇರೇಶ್ವರಂ ರಂಜಿಸುವರಲ್ಲಿ
ಕರುಣಾದ್ರಿ ಈಶಾನ್ಯದೇವರೊಪ್ಪುವರಲ್ಲಿ
ಬ್ರಹ್ಮೇಶ್ವರಂ ದಯಾಪರನಗಸ್ತ್ಯೇಶ್ವರಂ
ಬ್ರಹ್ಮಂಗಭೇದ್ಯಕೋಣೆಯ ಶಂಕರೇಶ್ವರಂ

ಕ್ರಮದಿಂದೆ ಜಡೆಯ ಶಂಕರದೇವನೊಪ್ಪಿರಲು
ವಿಮಳ ಪಾತಾಳಗಂಗೆಯ ಸೋಮನೊಪ್ಪಿರಲು
ಲೋಕಪಾವನದೇವರುಂ ಕ್ಷೋಜಶಂಕರಂ
ಲೋಕಕ್ಕೆ ರಂಜಿಪೇಕಾಂತರಾಮೇಶ್ವರಂ
ಇನ್ನು ನಾನರಿಯದನೇಕಲಿಂಗಂ ಕೂಡೆ
ಸನ್ನಿಹಿತವಿಪ್ಪವಾ ಪುರದ ಸುತ್ತಂ ನೋಡೆ
ಎಣಿಸಲೆನ್ನಳವೆ ಪಂಪಾಪುರದ ಮಹಿಮೆಯಂ
ತ್ರಿಣಯನುಂ ಲಿಂಗಮಯವಾದ ನಿಸ್ಸೀಮೆಯಂ

ಇನ್ನಿದರ್ ತೀರ್ಥಸಂತಾನ × × × ಳ್ದಪೆಂ
ಸನ್ನುತದಿ ಶಿವನ ಕಾರುಣ್ಯದಿಂ ಪೊಗಳ್ದಪೆಂ



ಅರರೆ ಮನ್ಮಥತೀರ್ಥವಿಪ್ಪುದನುರಾಗದಿಂ
ವರಸೋಮತೀರ್ಥದಿಂ ಮಹಾಕಾಳತೀರ್ಥದಿಂ
ಎಸೆವ ತಾರಕ ತೀರ್ಥದಿಂ ಸೂರ್ಯತೀರ್ಥದಿಂ
ಪಸರಿಸುವ ವತ್ಸತೀರ್ಥಂ ರೈಭ್ಯತೀರ್ಥದಿಂ
ನಾಗಮಾರ್ಕಂಡೇಯ ಗಜಾಶ್ವತೀರ್ಥಂಗಳಿಂ
ಮೇಗೆ ಕಾದಂಬರೀ ಬ್ರಹ್ಮತೀರ್ಥಂಗಳಿಂ
ಇಂತೆನಿಸಿ ಮೆರೆವ ಹನ್ನೊಂದು ತೀರ್ಥಂಗಳವು
ಕಂಡುಮದಹರನಶ್ವದಾನಮೆಂದೆನಿಪವವು

ಮತ್ತಂ ಮಹಾನದೀಶ್ವರೀ ತುಂಗಭದ್ರೆಯೊಳು
ಉತ್ತಮ ವಶಿಷ್ಠನಾಶ್ರಮವಿಪ್ಪುದೊಲುಮೆಯೊಳು
ಅಲ್ಲಿ ಪಾಪವಿನಾಶಿ ಎಂಬ ನಾಮದ ತೀರ್ಥ
ಅಲ್ಲಿಂ ದಶಾಶ್ವಮೇಧಾ ವಿಧಾನದ ತೀರ್ಥ
ಅದರೊಳಗೆ ಬದರಿಕಾಶ್ರಮವುಂ ಕೋಟಿತೀರ್ಥ
ವದರೊಳಗೆ ಶಬರಿಕಾಶ್ರಮವುಂ ಕೋಟಿತೀರ್ಥ
ಮಿಗೆ ದೇವಪೂತ ಪಂಪಾಸರೋವರ ಮುಂದೆ
ಸೊಗಯಿಸುವ ಕಾಮದಹನದ ಭಸಿತವದು ಮುಂದೆ
ಅಲ್ಲಿಂದ ಮಾಲ್ಯವಂತಾಚಳಮದೊಪ್ಪುವುದು
ಸಲ್ಲಲಿತ ಋಣವಿಮೋಚನ ತೀರ್ಥ ಒಪ್ಪುವುದು
ಉರಿಯಕ್ಷತೀರ್ಥಂ ಗದಾತೀರ್ಥ ಧನುತೀರ್ಥ
ವರಶಂಖಚಕ್ರತೀರ್ಥಂ ಪದ್ಮದಳತೀರ್ಥ
ಹೇಮಕೂಟದ ಮೇಲೆ ವತ್ಸನಾಭಿಯ ತೀರ್ಥ
ಆ ಮಹಾಕ್ಷೇತ್ರದೊಳಗಗ್ನಿತೀರ್ಥಂ ಸ್ವಾರ್ಥ
ರಾಮತೀರ್ಥಂ ಸಂದ ಪಿತೃತೀರ್ಥವಂತಲ್ಲಿ
ಏಮಾತು ಮಾಂಗಲ್ಯತೀರ್ಥ ಒಪ್ಪುವುದಲ್ಲಿ
ಶ್ರೀರುದ್ರಪಾದವಿಪ್ಪುದು ಧರಾರಾಜನದು
ನಾರಾಯಣಾದಿ ದೇವರ್ಕಳಿಗಭೇದ್ಯವದು
ಇನ್ನುಳ್ಳ ತೀರ್ಥಮುಂ ಪೆಸರ್ಗೊಳಲೆನ್ನಳವೆ
ಪನ್ನಗರ್ ಗರುಡಗಂಧರ್ವ ಸಂಕುಳರಳವೆ
ಹರಿಯಲ್ಲಿಯವಗಾಹವಿರ್ದು ಹರಿಪದವಿಯಂ
ಸರಸಿಜಭವಂ ಹರುಷದಿಂದಲಜಪದವಿಯಂ

ಸುರರಾಜನನುರಾಗದಿಂದಿಂದ್ರಪದವಿಯುಂ
ಪರಮ ಕಾರಣಿಕರೆಲ್ಲರು ಪರಮ ಪದವಿಯುಂ
ಪಡೆದರೆನೆ ತೀರ್ಥಮಹಿಮೆಯನೇನನೆಂದಪೆಂ
ನೃಡನ ಘನತರ ಸಕಳ ಸಾಮರ್ಥ್ಯವೆಂದಪೆಂ

ಇಂತಪ್ಪ ಲಿಂಗ ತೀರ್ಥಂಗಳಿಂದಂ ತೀವಿ
ಸಂತತಂ ಶಿವಭಕ್ತಕುಲವನೊಲವಿಂದೋವಿ
ಇಪ್ಪುದೀ ಧರೆಗೆ ತೊಡವೆನಿಸಿ ಪಂಪಾಪುರಂ
ಸರ್ಪಭೂಷಣನ ಭಾವಭರಿತ ಪಂಪಾಪುರಂ
ಪೆಸರ್ಗೊಂಡರಘವನೊಣಗಿಸುವ ಪಂಪಾಪುರಂ
ಅಸಮಾಕ್ಷನಲ್ಲಿ ಕೂಡಿಸುವ ಪಂಪಾಪುರಂ
ಬಂದು ಮರೆಹೊಕ್ಕರಂ ಕಾವ ಪಂಪಾಪುರಂ
ಸಂದಣಿಸಿ ಬೇಡಿದುದನೀವ ಪಂಪಾಪುರಂ
ವಾರಣಾಸಿಗೆಯು ಮಿಗಿಲಾದ ಪಂಪಾಪುರಂ
ಮಾರಾರಿಗಂದು ಪುಗಲಾದ ಪಂಪಾಪುರಂ
ಭವದ ಭಯವಂ ನಿವಾರಿಸುವ ಪಂಪಾಪುರಂ
ತವೆ × ದುರಿತವಂ ನಿದಾರಿಸುವ ಪಂಪಾಪುರಂ
ಶಿವಪುರಗಳೊಳಗೆ ಮಿಗಿಲಾದ ಪಂಪಾಪುರಂ
ಶಿವನ ಮನದೊಳಗೆ ಸಲೆ ನಲಿವ ಪಂಪಾಪುರಂ
ಸಕಳ ಪುಣ್ಯಂಗಳೋಲಗಿಪ ಪಂಪಾಪುರಂ
ಸಕಳ ಮುಕ್ತಿಗಳಲಂಕರಿಪ ಪಂಪಾಪುರಂ
ಅಣಿಮಾದಿಗು × × ಣವಗಲದಿರ್ಪ ಪಂಪಾಪುರಂ
ತ್ರಿಣಯನಂಗ × × ಂತಪ್ಪ ಪಂಪಾಪುರಂ
ಪುರಹರಂ ಕಾಮನಂ ಸುಟ್ಟ ಪಂಪಾಪುರಂ
ಗಿರಿಜೆ ರತಿಗಭಯವಂ ಕೊಟ್ಟ ಪಂಪಾಪುರಂ
ಆ ಪುರದೊಳೊಪ್ಪುವಂ ಶಶಿಧರಂ ವಿಷಧರಂ
ಕಾಪಾಲಿ × ನದ್ಧರಹರಂ ಪುರಹರಂ
ದುರಿತ ತಿಮಿರ × × ದಿವಾಕರಂ ಭೀಕರಂ
ವರವೀವ ವಿತತ ಕರುಣಾಕರಂ ಶಂಕರಂ



ಸಕಳ ಚೈತನ್ಯ ವಿಸ್ತಾರಕಂ ಪ್ರೇರಕಂ
ಸುಕೃತ ಸುಕರೈಕ ನಿಸ್ಸಾರಕಂ ಪ್ರೇರಕಂ
ಕಾಲ ಮನ್ಮಥ ಗರ್ವ ಶೋಷಣಂ ಭೀಷಣಂ
ಬಾಲಚಂದ್ರನು ಕಳಾಪೋಷಣಂ ಭೂಷಣಂ
ಹರಿಸುರಪ ಕಮಳ ರಾಜಿತಂ ಭಾವಿತಂ
ಶರಣ ನಿಕರಸ್ತೋತ್ರ ಪೂಜಿತಂ ಯೋಜಿತಂ
ಅಖಿಳ ಲೋಕಾಗಮಂ ಖಂಡಿತಂ ಮಂಡಿತಂ
ನಿಖಿಳೈಕ ಶಾಶ್ವತ ಮಹೋನ್ನತಂ ಸ × × ನುತಂ
ನೆಲಸಿಪ್ಪನಖಿಳ ಗುರುಪಂಪಾ ವಿರೂಪಾಕ್ಷ
ಒಲವಿಂದ ಶಾಂತಗುರು ಪಂಪಾವಿರೂಪಾಕ್ಷ
ಅಸಮಗುರು ವಿಷಮಗುರು ಪಂಪಾವಿರೂಪಾಕ್ಷ
ಎಸೆವ ಗುರು ವಿಶ್ವಗುರು ಪಂಪಾವಿರೂಪಾಕ್ಷ
ಎನ್ನ ಗುರು ಚೆನ್ನಗುರು ಪಂಪಾವಿರೂಪಾಕ್ಷ
ಉನ್ನತ ಸದೈಕಗುರು ಪಂಪಾವಿರೂಪಾಕ್ಷ
ಇಂತು ಪಂಪಾವಿರೂಪಾಕ್ಷನಂ ಕೆಳೆಗೊಂಡು
ಸಂತತಂ ಶಿವಭಕ್ತಿ ನವರಸದ ಸವಿಗಂಡು
ಉರುತರಾವಳಿಯೊಳೊಪ್ಪಿತ್ತು ಪಂಪಾಪುರಂ
ಪರಮೇಶ್ವರನ ಸೆಜ್ಜೆ ಎನಿಪ ಪಂಪಾಪುರಂ

**ಕಂ||** ಪಂಪಾಕ್ಷೇತ್ರದ ಮಹಿಮೆಯ
ನಿಂಪಿಂದಿಂ ಪೇಳ್ವ ಕೇಳ್ವ ಭಕ್ತರ್ಗೆಲ್ಲಂ ।
ಸೊಂಪಿಂದ ಪರಮ ಸುಖಮನ
ಲಂಪಿಂದಂ ಕುಡುಗೆ ಹಂಪೆಯ ವಿರೂಪಾಕ್ಷಂ॥

# ಸಂಸಾರ ವ್ಯಾಮೋಹ ನಿರಸನ ರಗಳೆ.

## ರಗಳೆ.

ಶ್ರೀ ವಿರೂಪಾಕ್ಷಲಿಂಗಪ್ರಭುವೆ ನೀನಿಂತು
ಭಾವಿಸುತೆ ಕಟ್ಟಿದ ಮಹಾ ಕಲ್ಪನೆಯನಾಂತು
ತಿರುಗುತ್ತಿರ್ದಪೆನಖಿಳಘೋರ ಸಂಸಾರದೊಳು
ಪುರಹರನೆ ನಿನ್ನನರಿಯದೆ ಜನ್ಮ ಶರಧಿಯೊಳು
ಎಂತೆಂತು ನೀನೆ ಕಟ್ಟಿದ ಪಟ್ಟ ಕಲ್ಪನೆಗೆ
ಅಂತಂತೆ ಪ್ರೈಯ್ಯೊಡ್ಡಿಕೊಂಡೆನಾ ಯಾತನೆಗೆ
ಕಲ್ಲಾಗಿ ಮಣ್ಣಾಗಿ ಕುಳಿಯಾಗಿ ತೆವರಾಗಿ
ಹುಲ್ಲಾಗಿ ಲತೆಯಾಗಿ ಗಿಡುವಾಗಿ ಮರನಾಗಿ
ಪುಳುವಾಗಿ ಖಗವಾಗಿ ಕಪಿಯಾಗಿ ಮೃಗವಾಗಿ
ಬಳಸಿ ಬಂದಾವಾವ ಯೋನಿಗಂ ತನುವಾಗಿ
ಬೇಳಾಗಿ ಬೆಂಡಾಗಿ ಹಾಳಾಗಿ ಕಾಳಾಗಿ
ಗೋಳುಂಡೆಗೊಂಡು ಬಂದೆಂತಕ್ಕೆ ಪಶುವಾಗಿ
ಕುರುಡನೆಂತಕ್ಕೆ ಲಾವಗೆ ವಿಡಿದ ತೆರನಾಗೆ
ಧರೆಯೊಳಗೆ ಕಾತ ಕಾಳಿನ ನ್ಯಾಯದಂತಾಗೆ
ಎಂತಕ್ಕೆ ಮನುಜ ಜನ್ಮಕ್ಕೆ ಬರಲನುವಾಗೆ

ತಾಯಿ ತಂದೆಯ ಶುಕ್ಲ ಶೋಣಿತಂ ನೆನವಾಗೆ
ಆಯುವಿಂದವಯವಂ ಬಲಿವುತೊಂದಾಗೆ
ತಾಯ ಪೊಟ್ಟೆಯ ಕರುಳ್ಸುತ್ತೆ ಮಿಗೆ ಸೆಡೆಯುತಂ
ತಾಯೆತ್ತ ಮಗ್ಗುಲಾದತ್ತತ್ತ ಕೆಡೆಯುತಂ
ಉದರಗತ ಶಿಖಿಯ ಸೆಕೆ ತಾಗೆ ಮಿಗೆ ಕುಂದುತಂ
ಪುದಿದ ಮಾಸು ಮುಸುಂಕಲುಬ್ಬಸದೊಳೊಂದುತಂ
ಕ್ರಿಮಿ ಕೀಟಕ ಕ್ಷುದ್ರ ಜಂತುಪೋಲ್ಪಳಿವುತಂ
ಶ್ರಮದಿಂದ ತಾಯಿ ಬಳಲೊಡನೊಡನೆ ಬಳಲುತಂ
ಕೀವು ನೆತ್ತರ್ನೆಣಂದೊದಹು ಮಿದುಳಂ ಮುತ್ತೆ
ಆವಾವ ಹೇಯಮುಂಟವರವರೊಳುಂ ಸುತ್ತೆ



ಇಂತು ನರಕದ ಜೇರಮೆನಿಸಿದುದರದ ನಡುವೆ
ಸಂತವೊತ್ತು ಮಾಸಂ ಪೇಸಿಕೆಯ ನಡುವೆ
ಕತ್ತಲೆಯ ಕರುಳೊಳಗೆ ಮರುಳಂದದಿಂ ಬೆಳೆದು
ಒರ್ತಲೆಯ ಪುಳುವಿನಂತೆಂತಕ್ಕೆ ಬೆಳೆಬೆಳೆದು
ಅಲ್ಲಿ ಕಣ್ಬಲಿಯದಿರೆ ಕುರುಡನಾಗುತೆ ಬಂದು
ಅಲ್ಲಿ ಕಿವಿ ಬಲಿಯದಿರೆ ಕಿವುಡನಾಗುತೆ ಬಂದು
ಅಲ್ಲಿ ನಾಲಿಗೆ ಬೀಳೆ ಮೂಗನಾಗುತೆ ಬಂದು
ಅಲ್ಲಿ ಕೈ ಬಲಿಯದಿರೆ ಮುಡುಬನಾಗುತೆ ಬಂದು
ಅಲ್ಲಿ ಕಾಲ್ಬಲಿಯದಿರೆ ಹೆಳವನಾಗುತೆ ಬಂದು
ಅಲ್ಲಿ ತನು ಬಲಿಯದಿರೆ ಮುದುಡೆಯಾಗುತೆ ಬಂದು
ಜೀವಂ ಬಲಿಯದಿರಲ್ಪಸುರಿಳಿವುತಂ ಬಂದು
ಆವಾವ ಕಂಟಕಂಗಳ ನಡುವೆ ಸಲೆ ಬೆಂದು

ಬರುತ ಬರುತಡ್ಡವಾಯ್ದೊಡೆ ನೋವು ನೆರೆ ಮಿಕ್ಕು
ಉರವಣಿಸುತಲ್ಲಿ ಕತ್ತರಿ ಕಾರದೊಳು ಪೊಕ್ಕು
ಸರ್ವಾಂಗಮಂ ಕಡಿಯೆ ಮಿಡುಮಿಡನೆ ಮಿಡುಕುತ್ತ
ದುರ್ವಹಾವಸ್ತೆಯಿಂ ತಾಯಿ ನೊಂದು ಬಳಲುತ್ತ
ತಾಯದೇಹಕ್ಕಲ್ಲಿ ದುಡುದುಡುಕೆಯಾಗುತ್ತಿರೆ
ಬಾಯಳಿವುತೆನ್ನಸುಗೆ ಸಂದೇಹಮಾಗುತ್ತಿರೆ
ಇಂತು ನಾನಾ ವಿಧದ ಕಂಟಕಮುಮಂ ಕಳೆದು
ನುಂತಿರ್ದ ಮಲಮೂತ್ರ ಹೇಸಿಕಿಂದಲೆಯಿಳಿದು
ಸೂಲಗಿತ್ತಿಯ ಕೆಯ್ಯ ನೊರದೋಳ್ಮುದುಡಿ ಬೀಳ್ದು
ಮೇಲೆ ಮುಸುಕಿರ್ದ ಮಾಂಸಂ ಸುಲಿಯೆ ಹೊಲಸೇಳ್ದು
ನಡನಡನೆ ನಡುಗಿ ಬೆಚ್ಚಂಬಿಲಮುಮಂ ಪೊಯ್ದು
ಮಿಡಮಿಡನೆ ಮಿಡುಕೆ ಪೊಕ್ಕುಳ ಬಳ್ಳಿಯಂ ಕೊಯ್ದು
ಆರಾರಾರದೇನ ಮಾಳ್ಪರಂ ತದಕ್ಕೊಳಗಾಗಿ
ಬಾರದ ಭವಂ ಬರಿಸಲಂತವಕ್ಕೊಳಗಾಗಿ

ಏರಾದವುಣ್ಣೊಡಲ ನೊಲೆಯ ಕೀವಂ ಪೀರ್ದು
ಮಾರಾಗಿ ಮಾಯೆ ಇಚ್ಚೆಗೆ ಬೆಚ್ಚುತೊಳಸಾರ್ದು

ತೊಟ್ಟಿಲೊಳ್ಮಲಮೂತ್ರದೊಂದುಂಡೆಯಾಗುತಂ
ಪಟ್ಟಿರ್ದು ಮೊಲೆಗೆ ನಾಲಿಗೆ ಗೀಳ್ತು ನೋವುತಂ
ಅಂಬಳಿಕೆ ಉಚ್ಚಿಷ್ಟವಿಳಿಯೆ ನೆರೆ ಜಾರಿಸುತೆ
ಬೆಂಬಳಿಯೊಳಿಳಿವ ಮೂತ್ರವನಲ್ಲಿ ಜಾರಿಸುತೆ
ಕೆಂಪಕಾಗಿ ಕೆರೆಕೆರೆದು ಕಿವಿಯನೊಳಗೊಂದುತಂ
ಪರಿದೊಗವ ಸಿಂಬುಳಂ ಶ್ಲೇಷ್ಮದೊಳ್ಮುಳುಗುತಂ
ಮಲವೆಂದು ತಾನರಿಯದೆಲ್ಲವುಂ ತಿನುತಿರ್ದು
ಪುಳುವೆಂಬುದೇನರಿಯದೆಲ್ಲವುಂ ತಿನುತಿರ್ದು
ನಡುವೆ ಬಾಲಗ್ರಹಂ ಪೊಡೆಯೆ ವಿಕೃತಿಗೊಂಡು
ನಡುವೆ ರೋಗಗಳಾಗೆ ಬೆದಬೆದನೆ ಬೆಂದು
ಇಂತು ಬಾಲ್ಯದ ನರಕದೊಳಗಾಳುತಿರ್ಪಲ್ಲಿ
ಸಂತತಂ ಘೋರದೊಳ್ತಿರುಗಿ ಬರುತಿರ್ಪಲ್ಲಿ
ನಿನ್ನ ನಾಮಂದದಿಂ ನೆನೆಯಲುಂಟೇ ದೇವ
ನಿನ್ನನಿಂತೆಂದರಿಯಲುಂಟೇ ಮಹಾದೇವ

ಬಳಿಕ ಯೌವ್ವನವಾಗೆ ತಾಯ್ತಂದೆಗಳ್ಕಂಡು
ತಿಳಿದೊಂದು ಮದುವೆಯಂ ಮಾಡಲ್ಕನಂದಂದು
ಹಾಳೂರ ಕೋಳವಂ ಕೊರಲೊಳಿಕ್ಕುವ ತೆರದಿ
ಕೇಳ ಹೆಳವಂಗೆ ಸಂಕಲೆಯ ಬಂಧಿಪ ತೆರದಿ
ಪಶುವಿನ ಕೊರಲೊಳೊಂದು ಪಾಶವಂ ಬಿಗಿವಂತೆ
ಮಿಸುಕದಂತಲ್ಲೊಂದು ಎಳೆ ಮರವ ಬಿಗಿವಂತೆ
ದೈತೆಯಂ ತಂದೊರ್ಬಳಂ ಮದುವೆಯಂ ಮಾಡಿ
ಸೈತಿಕ್ಕಿ ಬಿಡಬಾರದಂತೆ ನೇಹಂಗೂಡಿ
ಆ ಯೌವ್ವನದ ಗರ್ವದಿಂ ಧನದ ಗರ್ವದಿಂ
ತಾಯುಳ್ಳ ಪಿತರುಳ್ಳ ರೂಪುಳ್ಳ ಗರ್ವದಿಂ
ದುರ್ವಿಕಾರಂ ಮನವನೆತ್ತಿಕ್ಕೆ ಪರಿಪರಿದು
ದುರ್ಬೋಧರಂ ಕೂಡಿಕೊಂಡು ಸುತ್ತಂ ಸುಳಿದು
ಮದ್ದುಕುಣಿಕೆಯ ಕಾಯನಾವಗಂ ನಲಿಯುತ್ತೆ
ಹೆಡ್ಡತನದಿಂ ಪರಿದು ನಾಯ್ನಾಲನುಂಬಂತೆ
ಒತ್ತರಿಸಿ ಪಿತ್ಥವದು ತಲೆಗೇರಿತೆಂಬಂತೆ
ಒತ್ತೀಬದಿಂ ಗ್ರಹ ವಿಕಾರವೆಡೆಗೊಂಡಂತೆ



ಲಲನೆಯರ ಸವಿನುಡಿಯು ಕರ್ಣಕಿನಿದಾಗುತಂ
ತಲೆ ಪುಳಿತ ನಾಯಂತೆ ಇರದೆ ಬೇಳಾಗುತಂ
ಕಿವಿಯು ಒಳಗಿರುತಿರ್ಪ ಗುಗ್ಗೆಯಂ ನೋಡದಲೆ
ಅವರ ಹಲ್ಲಿನೊಳಿರ್ಪ ಕಿನಿಚುವಂ ನೋಡದಲೆ
ನಾಸಿಕಂ ಸಿಂಬುಳದ ಹಿರಿನಾಳವೆಂದಿರದೆ
ಪೇಸಿಕೆಯ ಮುಖವು ಬಚ್ಚಲ ನಾಳವೆಂದಿರದೆ
ನಳಿ ತೋಳ್ಗಳಸ್ಥಿಗಳ ದಂಡೆಗಳು ಯೆಂದಿರದೆ
ಲಲಿತ ಕಕ್ಷಂ ಬೆವರ ದುರ್ಗಂಧವೆಂದಿರದೆ
ಬಟ್ಟ ಮೊಲೆಗಳ್ಮಾಂಸದೊಟ್ಟಿಲ್ಗಳೆಂದಿರದೆ
ಪೊಟ್ಟೆ ಎಂಬುದು ಕರುಳ ಮೊಟ್ಟೆ ತಾನೆಂದಿರದೆ
ನಡು ಜಿಗುಪ್ಸಾರಸದ ನಟ್ಟ ನಡುವೆಂದಿರದೆ
ಎಡಬಲದ ಬರಿಗಳೆಲ್ವಿನ ಕಟ್ಟೆಡೆಂದಿರದೆ
ಪೊರವಾರು ಮಲಮೂತ್ರದೊರತೆ ತಾನೆಂದಿರದೆ
ಎರಗಿದೇಂ ಪ್ರಾಯದೊಳು ಬೀಭತ್ಸವೆಂದಿರದೆ
ಒಂದು ಮೂತ್ರದ ಬಟ್ಟೆಯೊಂದಮೇಧ್ಯದ ಬಟ್ಟೆ
ಒಂದೆರಡರೊಳಗಲ್ಲಿ ಮತ್ತೆ ಕಪ್ಪದ ಬಟ್ಟೆ
ಪುಳುಗಳುಂ ರಸಿಕೆಯುಂ ಸುರಿತರ್ಪೊಡದು ಬಟ್ಟೆ
ಕಳೆದಿಂದ್ರಿಯಂ ಕೀವು ಸುರಿತರ್ಪೊಡದು ಬಟ್ಟೆ
ನರರ ನರಕದ ಬಟ್ಟೆಯೆಂದರಿಯದಾನಿದಂ
ಪರಿಕಿಸದೆ ಕೊಂಡಾಡುತಿರ್ದೆನರಿ ಮರುಳಿದಂ
ಪುಳಿತ ಪೆಣನಂ ಕಡಿದು ತಿನುತಿರ್ಪ ನಾಯಂತೆ
ಕಳಿತ ಮಾಂಸಕ್ಕಳುಪಿ ತಿಂಬ ಬಳ್ಳುವಿನಂತೆ
ಉಚ್ಚಿಷ್ಟದೊಳ್ಪ್ರಾಳ್ಸಿ ಹಂದಿಯು ತೆರನಂತೆ
ಅಚ್ಚರಿಯ ಪೇಸಿಕೆಯೊಳಗೆ ಮುಳುಗುತಾನಿಂತೆ

ಸವೆದೆನೆಲೆ ಶಂಕರಾ ಶಶಿಧರಾ ಕರುಣಿಸಾ
ಶಿವನೆ ಸದಾಶಿವನೆ ಕಾಮಾರಿ ಕರುಣಿಸಾ
ಇಂತಪ್ಪ ಹೇಯದೊಳ್ನಿನ್ನ ನೆನೆಯಲುಂಟೆ
ಇಂತಪ್ಪ ಘೋರದೊಳಗಿರ್ದೆನಗೆ ನೀನುಂಟೆ
ಇಂತು ಸತಿಯರ ಮೋಹದೊಳಗೆ ಸಿಕ್ಕಿರುತಿರಲು
ಸಂತತಂ ಯೌವ್ವನದ ನರಕದೊಳು ಮುಳುಗಿರಲು

ಜೆನ್ನಂ ಜೇತ್ರಿಯುಂ ಕನ್ನೆಯುಗರ್ಳಾಗಿ
ಹೊನ್ನಂ ವಿಳಾಸಮುಂ ವಿಷಯಕ್ಕೆ ಹಾಳಾಗಿ
ಸಂಗಮುಂ ಪ್ರಾಯಮುಂ ಹೇಯಕ್ಕೆ ಬರಿದಾಗಿ
ಅಂಗಂಗಳಧಟಿಲ್ಲವಂಗನೆಗೆ ಮಾರಾಗಿ
ಬಳಿಕ ವನಿತೆಯರಲ್ಲಿ ಕಸವ ಬಿಸುಡುವಂತೆ
ಹಳಿದಾದ ಹರಿಣೆಯಂ ಪೇಸಿ ಪೊರಮಡಿಪಂತೆ
ನಡೆವೆಣನೆ ನುಡಿವೆಣನೆ ಬಾಳ್ವೆಣನೆ ಪೋಗೆಂದು
ಬಡಿಯುದಿರ್ಬಾಲಮಂ ಸುಡು ನಾಯೆ ಛೀ ಎಂದು
ಇಂತು ಸತಿಯುರ್ಬಿಡಲು ಬಡತನವದಡಿಯಿಡಲು
ಸಂತತಂ ಕೆಳೆಯರ್ಪರಿದು ಪೋಗೆ ಮತಿಗೆಡಲು

ತಂದೆ ತಾಯುಂ ಸತ್ತು ಬಂಧು ಬಳಗಂ ಬಿಟ್ಟು
ಸಂದ ಪುರಜನವಕ್ಕಟಾ ಯೆನಲ್ಕಣ್ಗೆಟ್ಟು
ಮರುಳಂತೆ ಮರನಂತೆ ಬರಿ ಮನೆಗೆ ನಡೆತಂದು
ಎರವಾದರಂತೆ ಸುರ್ರನೆ ಸುಯ್ದು ಮಿಗೆ ನೊಂದು
ಅರುವೆಗಪ್ಪಡವುಟ್ಟು ಪೆಂಡತಿ ಯಿರಲ್ಕಂಡು
ಮರುಗಿ ಮುದವಳಿದು ಮನದಲ್ಲಿ ಧಾವತಿಗೊಂಡು
ಜೀವನೋಪಾಯವಂದಂದಿಗೇ ಸಾಲದಿರೆ
ಆವಾವ ತೆರದೊಳುಂ ಮನೆವಾಳ್ತೆಗಿಲ್ಲದಿರೆ
ಏನ ಹೇಳಲಿ ಬಹಳವಾದವು ಸುತರೆನುತೆ
ತನಗೆಯುಂ ಸತಿಸುತಾದಿಗಳಿಗಂ ಚಿಂತಿಸುತೆ
ಆರಂಬದೊಳ್ ನೋಡೆ ಅಲ್ಲಿಯಾಗದೆ ಮರುಗಿ
ದೂರಿಸುತೆ ವ್ಯವಹಾರದಿಂದೆ ತಿಟ್ಟನೆ ತಿರುಗಿ
ಸೇವಕಾ ವೃತ್ತಿಯಂ ಮಾಡಲ್ಕನಂದಂದು
ಆವಾವ ದುಃಸ್ಥಿತಿಗೆ ಲಜ್ಜಿಸದೆ ವೈಸಂದು
ಪತಿಯುಪ್ಪ ನಿನ್ನನರಿಯದೆ ನರರ್ಗಾಳಾಗಿ
ಮತಿಗೆಟ್ಟು ಧೃತಿಗುಂದಿ ಮರ್ತ್ಯರ್ಗೆ ಆಳಾಗಿ
ನಡುವಿರುಳ್ಪೋಗೆ ನಾಲ್ನಾಲ್ಗಾವುದಂ ಪೋಗಿ
ಎಡವುತಂ ತಾಗುತಂ ಲಘುವಾಗಿ ಮರುಳಾಗಿ
ಅಲ್ಲಿಯುಂ ಪಡೆಯದೆ ಮರುಗಿ ಕೊಕ್ಕಳ್ಕುದಿದು
ಬಲ್ಲಂತೆ ತಿರುಗಿ ನೋಡುವೆನೆಂದು ಬಸವಳಿದು



ಎಂಟು ಗೇಣಾದ್ದಮಂ ಗೇಣಃದ್ದದೋಕ್ಷಿಲಿಸಿ
ಎಂಟು ಮಡಿ ಕಾರ್ಪಣ್ಯಮಂ ಮುಖದೊಳಳವಡಿಸಿ
ನಿಂದವರ್ಗಳಂ ಬೇಡಿ ನೆರೆದವರ್ಗಳಂ ಬೇಡಿ
ಬಂದವರ್ಗಳಂ ಬೇಡಿ ಬಲ್ಲವರ್ಗಳಂ ಬೇಡಿ
ತಾನುಳಿಯಲುಳಿದರೆಲ್ಲರನಾವಗಂ ಬೇಡಿ
ಏನೆಂಬೆನೆಲ್ಲಿಯುಂ ಪಡೆಯದೆ ಮೊಗಂ ಬಾಡಿ
ಕಳವಿನೊಳ್ಪಳಿಸಂದು ತಿರುಗಿ ತಳವೆಳಗಾಗಿ
ಅಳವಳಿಯುತಲ್ಲಿಯುಂ ಪಡೆಯದಾತುರನಾಗಿ
ಇಂತು ಮನೆವಾಳ್ತೆಗಂ ಕುದಿವ ಹರಿಯದಿ ದೇವ
ಎಂತುವುಂ ನಿನ್ನಲೇಳ್ದಿರಗೆ ನಾಂ ಎಲೆ ದೇವ
ಎರಗದಂತಿರುತವಿರೆ ಮುಪ್ಪು ಬಂದಡಸಲ್ಕೆ

ತೆರೆ ಪರಿದು ಕಾಯಮಂ ಪರ್ಬಲನುವಾಗಲ್ಕೆ
ಅದನೇನನೆಂದಪೇಂ ಪೇಸಿಕೆಯ ಪಸರಮಂ
ಅದನೆಂತು ಬಣ್ಣಿಪೇಂ ದುರ್ಭಾವ ವಿಸರಮಂ
ತೆರೆ ನೆಗೆಯೆ ಯಮಪುರದ ಸೋಪಾನವೆಂಬಂತೆ
ನರ ಉಬ್ಬಿ ಮೆಯ್ಯೊಳಗೆ ಬೀಳಲ್ಪರಿಯುತಂತಂತೆ
ಬಾಗೆ ಬೆಂಪೋಗೆ ಪಲ್ತೊಲಗೆ ತಲೆಯಂತಲ್ಲಿ
ತೂಗೆ ...... ಕಿವಿ ನೀಗೆ ಕೇಳ್ವುದನಲ್ಲಿ
ತೋಳತೊವಲುಗಳೇಳ್ದು ನೀಳದಿಂ ಜೋಲುತಿರೆ
ಜಾಳಿಸುತೆ ಕಾಲುಡುಗಿ ಕೋಲೂರಿ ನಿಲ್ಲುತಿರೆ
ಕೆಮ್ಮಿ ಗುಹೆಗಟ್ಟಿ ಘಲ್ಲಿಸಿ ಕುಸುರಿ ಕುಕ್ಕುರಿಸಿ
ಕುಮ್ಮಿ ಕುಕ್ಕೆಯೊಳಳ್ದು ನೆರೆ ಮುದುಡಿ ಹೊಡಕರಿಸಿ
ಕಿವಿಯೊಳಂ ಕಣ್ಣೊಳಂ ಬಾಯೊಳಂ ಘ್ರಾಣದೊಳು
ತವೆ ಸುರಿವ ಶ್ಲೇಷ್ಮದಿಂ ನಾಂದು ನಿತ್ರಾಣದೊಳು
ಪಜ್ಜೆ ಪಜ್ಜೆಗೆ ಮುದುಡಿ ಬೀಳ್ದು ಮೂಗೂರುತಂ
ಲಜ್ಜೆ ನಾಚಿಕೆಯೆಂಬುದನೆಲ್ಲವ ನೀಗುತಂ
ಬೈಯ್ದೊಡಂ ಕೇಳದೆಡಹಿದೊಡಂ ಕಾಣದಿರೆ
ಐಯ್ದು ಸರ್ವೇಂದ್ರಿಯಂ ಚೇತರಿಸಲಾರದಿರೆ

ಇದ್ದಲ್ಲಿ ನಿಮ್ಮುಮಂ ನೆನೆಯೆ ತೆರಹಿಲ್ಲಿಲ್ಲ
ನಿದ್ರೆಯಿಂದರ್ಥಾಯು ತೀರುತ್ತಮಿರಲಲ್ಲಿ

ಪಿಡಿವ ಪುಲಿಫಣಿಗಳಿಂ ಅತ್ಯಂತ ಕಂಪಿಸುತೆ
ನಡುವೆ ರೋಗಂಗಳೊದಗಲು ಸತ್ತು ಪುಟ್ಟುತೆ
ಇರ್ಪಲ್ಲಿ ನಿಮ್ಮುವಂ ನೆನೆಯಲುಂಟೇ ದೇವ
ಸರ್ವಭೂಷಣ ನಿನ್ನನರಿಯಲುಂಟೇ ದೇವ
ನೀನೆತ್ತ ನಾನೆತ್ತ ಸಂಸಾರದಿರವೆತ್ತ
ನೀನೆಂದರಿವ ಶಿವಜ್ಞಾನಕ್ಕೆ ತೆರಪೆತ್ತ
ಮಾಯೆಯೊಳಗಿರ್ಪರಾರ್ನಿನ್ನನರ್ಚಿಸುವರಾ
ಕಾರ್ಯದಿಚ್ಚೆಗೆ ನಡೆದು ನರಕದೊಳು ಬೀಳ್ವರಾ
ಬೇಡದೆತ್ತಣ ಮಾತು ಕರುಣಿಸಾ ಶಂಕರಾ
ನೋಡಿ ಕೈವಿಡಿದು ನಿನ್ನವನೆನಿಸು ಶಂಕರಾ
ಆವ ತೆರದಿಂ ನಿನ್ನ ನೆನೆವ ಪೊತ್ತಂ ಕಾಣೆ
ನಾವುದುಂ ಗತಿಯಿಲ್ಲ ಪೊರ್ದಿವೇಂ ನಿನ್ನುವನೆ
ಕೇಳಯ್ಯ ಸಂಸಾರದಿರವು ಅತಿ ಭೀಕರಂ
ಕೇಳೈ ಮಹಾದೇವಾ ಮಾಯದೋಷಾಕರಂ

ಇಂತು ಮುಪ್ಪಿನೊಳಿರಲು ಯಮಕಿಂಕರರ್ಬರಲು
ಸಂತತಂ ಯಮನವರ ಭಯ.ದಿ ನಡುಗುತ್ತಿರಲು
ಮುಪ್ಪು ಮೀರುತ್ತಾಯು ತೀರುತ್ತಮಿರಲಲ್ಲಿ
ಒಪ್ಪವಳಿಯುತ್ತೆ ಧರಣಿಗೆ ಬೀಳ್ದು ಕೆಡುವಲ್ಲಿ
ಮೇಲೆ ಪೇರ್ಗೂರಿಕ್ಕಿ ನುಡಿವ ನಾಲಿಗೆ ಬೀಳೆ
ಮೇಲುಸುರ್ಸೇದುವಾಗಳ್ಪ್ರಾಣಮುಱೆಯಾಳೆ
ನೆಲದೊಳಿಕ್ಕಿದ ಬಳಿಕ ನೆಂಟರೆಲ್ಲರ್ನೆರೆದು
ಕೆಲ ಬಲದೊಳಿಪ್ಪರುಂ ಬಂಧುವರ್ಗಂ ನೆರೆದು
ಅಕ್ಕಟಾ ಗುಣಿ ಮಾನಿ ಬುದ್ಧಿವಂತಂ ನೋಡ
ಅಕ್ಕಟಾ ಈತಂಗೆ ಸಾವು ಬಂದಿತು ನೋಡ
ಎನುತಮಿರುತಿರಲಲ್ಲಿ ಮರಣ ಶೂಲಿಗಳೆತ್ತಿ
ತನತನಗೆ ಮರುಗಿ ಕಣ್ಗಳ ನೀರನುಣ್ಮುತ್ತೆ
ಇರೆ ಕಾಲ ಕೈಯ್ಯಜೀವಂಗಳುಂ ಪೋಗುತಿರೆ
ಇರೆ ಮೆಲ್ಲಮೆಲ್ಲನೆಲ್ಲಂ ತಣ್ಣಗಾಗುತಿರೆ
ಮೇಲುಸುರ್ಮಿಕ್ಕೇಳೆ ನುಡಿವ ನಾಲಿಗೆ ಬೀಳೆ
ಕಾಲನವರನುವಾಗೆ ಬಾಯೋಳ್ಸುಱಿಯೆ ಲೋಳೆ



ಮೊಗವೊಳ್ಗುಡಿಸಿ ಗೂರು ಪೆರ್ಗ್ಗೂರಿಡುತ್ತಮಿರೆ
ಬಗೆಗೆಟ್ಟು ಸತಿಪುತ್ರರೊಟ್ಟಲೊರಲುತ್ತಮಿರೆ
ಪೋದನಿಲ್ಲಿಲ್ಲ ಕಿರಿದುಸುರರಿದುಮಿರ್ದಪುದು
ಪೋದನೆಳ್ಳರೆಯಸಿತು ದಾನಮಿವಗಿರ್ದಪುದು
ಎಲೆಲೆಲೇ ಕರ್ಣಮಂತ್ರದ ಪೊಳ್ತು ತಪ್ಪದಿದು
ಎಲೆಲೆ ಸತ್ತಂ ಸತ್ತಮೆನುತಮಿರೆ ನೆರವಿಯುದು
ಅಲ್ಲಿಯುಂ ಕೆಲಬರುತ್ಕ್ರಾಂತಿಯುಂ ಕೊಂಬುವರು
ಅಲ್ಲಿ ಬಾಗೆಗೆ ಹೆಣನ ನೆರೆ ಜಗಳವಾಡುವರು
ಏನೆಂಬೆನೋ ಜಗದ ಮಾಯೆಯೊಂದಂದಮಂ
ನಾನಾ ವಿಧದ ಲಜ್ಜೆಗೆಟ್ಟ ಲಘು ವೃಂದಮಂ
ಇಂತಪ್ಪ ಸಮಯದೊಳ್ ಕಣ್ಮೇಲೆ ಮರಳುತಿರೆ
ಅಂತಲ್ಲಿ ಜೀವಮಂ ಯಮದೂತರೆಳೆಯುತಿರೆ
ನೆಂಟರುಂ ನೋಡುತ್ತಿರೆ ಬಂಟರುಂ ನೋಡುತ್ತಿರೆ
ಬಡವರುಂ ನೋಡುತ್ತಿರೆ ಬಲ್ಲಿದರ್ನೋಡುತ್ತಿರೆ
ಪುತ್ರರುಂ ಪೆತ್ತರುಂ ಪೆಂಡಿರುಂ ನೋಡುತ್ತಿರೆ
ಅಸುವತ್ತ ಪೋಗಿ ಪೆಣನಿತ್ತ ಬಿದ್ದುದು ಕೆಡೆದು
ಬಿಸುಸುಯ್ದು ಮಿಗೆ ನೆರವಿ ಬಡಿದಳಲ್ತೊಡಗಿದುದು

ಇಂತಾದ ಬಳಿಕ ನಾಂ ಮಾಳ್ಪುದಿನ್ನೊಂದುಂಟೆ
ಇಂತು ಬರಿದೊರೆವೋದ ಬಳಿಕ ಎಚ್ಚರು ಉಂಟೆ
ಬಳಿಕ ದೇವರ್ಗುಂಟೆ ಬಳಿಕ ಪಿರಿಯರ್ಗುಂಟೆ
ಬಳಿಕ ಪುಣ್ಯಕ್ಕುಂಟೆ ಬಳಿಕ ಧರ್ಮಕ್ಕುಂಟೆ
ಪುಟ್ಟಿದಂ ಸತ್ತನೆಡೆಯೋಳ್ದುಡಿದುದೇನಾಯ್ತು
ಮುಟ್ಟರೀಕ್ಷಿಸಲೊಲ್ಲರೀ ದೇಹವಿಂತಾಯ್ತು
ನಿಮಿಷವಿರಿಸದೆ ಕೊಂಡು ಪೋಗಿ ಸುಟ್ಟರ್ನೋಡ
ನಿಮಿಷಾರ್ಧದಿಂದಚಿರವೀ ದೇಹಮುಂ ನೋಡ
ಇಂತಪ್ಪ ಭವಮಾಲೆಯೊಳಗೆ ಬಂದೇಂ ದೇವ
ಇಂತಿಂತು ಸತ್ತು ಪುಟ್ಟುತ್ತಮಿರ್ದೇಂ ದೇವ
ಜನಿಯಿಸುವ ಕಷ್ಟವಿದು ಬರ್ದುಕುವ ನಿರೋಧವಿದು
ಅನುಗೆಟ್ಟು ಸಾವ ಸಂಕಟದೊಂದವಸೆ ಇದು

ದೇವಾ ಇದಕ್ಕೊಂದು ಸುಖ ಉಂಟೆ ಲೇಸುಂಟೆ
ದೇವಾ ಇದಕ್ಕೊಂದು ಗತಿಯುಂಟೆ ಮತಿಯುಂಟೆ
ಅನೇಕೆ ಸಂಸಾರವೇಕೆ ಕೇಳಲೆ ತಂದೆ
ನೀನು ಎನಗೊಡ್ಡಿದ ಮಹೇಂದ್ರಜಾಲಂ ಕಂಡೆ
ರಾಜಶೇಖರ ಶರ್ವ ಭವ ಭವಾನೀಧವ
ಈ ಜನ್ಮದೊಳಗೆನಗೆ ಕರುಣಿಸಭವಾ ಭವಾ
ಎಂಭತ್ತುನಾಲ್ಕು ಲಕ್ಷದ ಯೋನಿಯಂ ಕಳೆದು
ಶಂಭುವೇ ಎಂತಕ್ಕೆ ಬಂದೆನಾನಿದನರಿದು
ಮತ್ತೆಯುಂ ಕರುಣಿಸುವುದೆನಗೆ ಕರುಣಾಕರಾ
ಮತ್ತೆಯುಂ ಕೃಪೆ ಮಾಳ್ಪುದೆನಗೆ ಶಶಿಶೇಖರಾ
ಮುಂದುಗೆಟ್ಟಿಂ ಮೂರ್ಖನಾಗಿರ್ದೆನಿನ್ನೆಗಂ
ಇಂದುಧರ ನಿಮ್ಮನರಿಯದೆ ಕೆಟ್ಟೆನಿನ್ನೆಗಂ
ವ್ಯರ್ಥವಾಗುತ್ತಮಿರುತಿರ್ದೆ ನಾನೆಲೆ ದೇವ
ಸ್ವಾರ್ಥವಿದು ನಿನ್ನ ನೆನೆಯದೆ ಕೆಟ್ಟೆನೆಲೆ ದೇವ
ನಾಡಮಾತಂ ಬಳಸುತಿರೆ ಪೊಳ್ತು ಪೋಗುತಿದೆ
ಕೂಡೆ ತೊಳಲುತ್ತಮಿರೆ ಪೊಳ್ತು ಪೋಗುತ್ತಲಿದೆ
ಅಂಜುತ್ತ ಅಳಲುತ್ತಮಿರೆ ಪೊಳ್ತು ಪೋಗುತ್ತಿದೆ
ರಂಜಿಸುತ ಬೋಧಿಸುತಮಿರೆ ಪೊಳ್ತು ಪೋಗುತ್ತಿದೆ
ಕೋಪಿಸುತ ಕಾಮಿಸುತ ಮಿಗೆ ಪೊಳ್ತು ಪೋಗುತ್ತಿದೆ
ತಾಪಿಸುತ ತಲ್ಲಣಿಸುತಿರೆ ಪೊಳ್ತು ಪೋಗುತ್ತಿದೆ

ನಿತ್ಯ ಲಿಂಗಾರ್ಚನೆಯೊಳಿರಿಸೆನ್ನನೆಲೆ ದೇವ
ಸತ್ಯ ಶರಣರ ನಡುವೆ ಸಲಿಸೆನ್ನನೆಲೆ ದೇವ
ಊರ್ಧ್ವರೇತಂ ವಿರೂಪಾಕ್ಷನೆಂಬುದು ನಿನಗೆ
ಸದ್ಧರ್ಮವಯ್ಯ ಕರುಣಿಪುದು ಕುರುಣಿಪುದೆನಗೆ
ಪುಣ್ಯಪಾಪಂಗಳಿಲ್ಲದ ನಿರ್ಮಳಂ ನೀನೆ
ಗಣ್ಯರಹಿತಂ ಸಕಲದೇವ ಕುಲಗುರು ನೀನೆ
ಸಿರಿಬಡತನಗಳಿಲ್ಲದ ಸದರ್ಥನುಂ ನೀನೆ
ಹರಿಬೊಮ್ಮರೆಚ್ಚರದನಾದಿಲಿಂಗಂ ನೀನೆ

ದೇಹವುಳ್ಳಲ್ಲಿ ಕಾಮದೊಳಿರ್ಪುದರಿದಲ್ಲ
ದೇಹವುಳ್ಳಲ್ಲಿ ಕೋಪದೊಳಿರ್ಪುದರಿದಲ್ಲ



ಕಾಯವುಳ್ಳಲ್ಲಿ ನಿಃಕಾಮಿ ಯೆನಿಸುವುದರಿದು
ಕಾಯವುಳ್ಳಲ್ಲಿ ನಿರ್ಮಾಯನೆನಿಸುವುದರಿದು
ದೇಹವುಳ್ಳಲ್ಲಿ ಸದ್ಗುರುವ ಪಡೆಯುವುದರಿದು
ದೇಹವುಳ್ಳಲ್ಲಿ ನಿನ್ನಡಿಯನರ್ಚಿಸುದರಿದು
ಇಂತಿವೆಲ್ಲಂ ನೀನೇ ಕೊಟ್ಟಲ್ಲದಿಲ್ಲಯ್ಯ
ಎಂತಾದೊಡಂ ನಿನ್ನ ಕೃಪೆ ಇಲ್ಲದಿಲ್ಲಯ್ಯ
ನೆನೆವುತ್ತ ನೋಡುತ್ತ ಅರ್ಚಿಸುತ್ತಿರಿಸಯ್ಯ
ಅನುದಿನಂ ನಿಜಭಕ್ತಿ ವಿಕಳನಾಗಿರಿಸಯ್ಯ

ತನುವಿಂಗೆ ರೋಗವಂ ಮಾಡುವುದನಿಷ್ಟವದು
ತನುಪರಿತ್ಯಾಗದೊಳ್ಮರೆಯಿಸೆ ಕನಿಷ್ಟವದು
ದೇಹವಂ ಬಿಡುವಲ್ಲಿ ನೆನೆಯಿಪುದು ಮಧ್ಯಮಂ
ದೇಹಂಬೆರಸು ಕೊಂಡು ಪೋಪುದತ್ಯುತ್ತಮಂ
ಮಧ್ಯಮೋತ್ತಮಗಳೊಳುತ್ತಮವೆನೆಗೆ ಮಾಡಯ್ಯ
ಸಾಧ್ಯವಲ್ಲದುದಿಲ್ಲ ನೋಡಿ ಕುರಣಿಪುದೆನಗೆ
ದೇವ ಕರುಣಿಗಳರಸ ದೇವದಾನಿಗಳರಸ
ದೇವ ಮಾನಿಗಳರಸ ದೇವ ಬೋಳಿಯರರಸ

ಪಂಪಾಪುರದ ನಿಧಿಯೆ ಪಂಪಾಪುರದ ಸುಧೆಯೆ
ಪಂಪಾಪುರದ ಗತಿಯೆ ಪಂಪಾಪುರದ ಮತಿಯೆ
ಪಂಪಾಪುರಾಂಬುನಿಧಿವರ್ಧನ ವಿಮಲಚಂದ್ರ
ಪಂಪಾಪುರಾಬ್ಜವಿಕಸಿತವಿಮಲದಿವಸೇಂದ್ರ
ಕರುಣಿಪುದು ಕರುಣಿಪುದು ವಿರೂಪಾಕ್ಷ
ಕರುಣದಿಂದೀಕ್ಷಿಪುದು ಪಂಪಾ ವಿರೂಪಾಕ್ಷ
ಪ್ರತಿಪಾಲಿಪುದು ಗುರುವೆ ಪಂಪಾ ವಿರೂಪಾಕ್ಷ
ಶೃತಿಗಗೋಚರನಪ್ಪ ಪಂಪಾ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ನಮೋಸ್ತು ತೇ

# ಚಂಡೇಶ ಪಿಳ್ಳೆಯ ರಗಳೆ.

ಕಂದ॥ ಮಾತೆಪಿತರರಹಿತನುಗ್ರನ ।
ಜಾತಂ ಚಂಡೇಶ ಪಿಳ್ಳೆಯಂ ಮೆರೆದಂ ಧಾ ॥
ತ್ರೀತಳದೊಳ್ಖ್ಯಾತೇಶಂ ।
ಖ್ಯಾತಿ ಮಿಗಲ್ಕೆಮ್ಮ ಹಂಪೆಯ ವಿರೂಪಾಕ್ಷಂ ॥

## ರಗಳೆ.

ಚೋಳದೇಶದೊಳೊಂದು ನಲ್ಲೂರದೊಪ್ಪುವುದು
ಫಾಳಲೋಚನನ ಭಕ್ತಿಯ ಭರಮನೊಪ್ಪುವುದು
ಅಲ್ಲಿ ಅಚ್ಯುತಭಟ್ಟನೆಂಬ ವಿಪ್ರಂ ನೋಡ
ವಲ್ಲಭಂ ಸಕಲ ಶಾಸ್ತ್ರಕ್ಕೆ ತಾನೇ ನೋಡ
ಅವರ್ಗರಸಿ ಸಾವಿತ್ರಿ ಎಂಬ ನಾಮದ ವನಿತೆ
ಅವರ ಸಂಪದವೆ ಪುರಕೆಲ್ಲ ಸಂಪದವನಿತೆ
ಧನದೊಳಂ ಧಾನ್ಯದೊಳಗಾವನುಂ ಸರಿ ಇಲ್ಲ
ಮನದಂತಿರಿಪ್ಪ ಬಂಧುಗಳಿಂ ಕೊರತೆ ಇಲ್ಲ

ಪುತ್ರನೋರ್ವನು ಇಲ್ಲದುಮ್ಮಳಂ ಪಿರಿದಾಗೆ
ಚಿತ್ತದೊಳ್ತನಯನಂ ಬೇಡಲುದ್ಯುತನಾಗೆ
ಆವೂರೊಳೆಲ್ಲರ್ಗೆ ಬೇಡಿತಂ ಕೊಡುತಿರ್ಪ
ದೇವನಣುಗಂ ಚಂಡಪಿಳ್ಳೆ ಪೆಸರಿಂದಿರ್ಪ
ಭೂಚರರ್ಬಯಸಿ ಬರಲಿಷ್ಟ ಸಿದ್ಧಿಯನೀವ
ಖೇಚರರ್ಬಯಸಿ ಬರೆ ಬೇಡಿತಂ ಮುನ್ನೀವ
ಗರುಡರುಂ ಗಂಧರ್ವರುಂ ಪೂಜಿಸುತ್ತಿರ್ಪ
ಸುರರಸುರರಾಗಳು ಬಯಸಿ ಪೂಜಿಸುತ್ತಿರ್ಪ
ಕಿನ್ನರರ್ಖೇಚರರ್ನೆರೆದರ್ಚಿಸುತ್ತಿರ್ಪ
ಪನ್ನಗರ್ಸಿದ್ಧರಾತುರದೊಳರ್ಚಿಸುತಿರ್ಪ
ಚೆನ್ನ ಡೋಳುಂಗೆಜ್ಜೆಗಾಲಿಂದಲೊಪ್ಪಿರ್ಪ
ಪನ್ನಗರ್ನೆರೆ ಸುತ್ತಿ ಮುತ್ತಿ ರಾಜಿಸುತಿರ್ಪ



ಆನೆಮೊಗದಿಂ ಕೆಯ್ಯಕೋಡಿಂದಮೊಪ್ಪಿರ್ಪ
ನಾನಾ ವಿಳಾಸದಿಂ ಮಿಗೆ ರಂಜಿಸುತ್ತಿರ್ಪ
ಹರಪುತ್ರನಲ್ಲಿಗೆಯ್ತಂದು ಹರುಷಂಬಟ್ಟು
ವರ ಪುತ್ರನಂ ಬೇಡಿ ಮಿಗೆ ಸಂತಸಂಬಟ್ಟು
ಇರೆ ವಿನಾಯಕನಲ್ಲಿ ಕರುಣದಿಂದಂ ಬಂದು
ವರ ವಿಪ್ರ ಕೊಟ್ಟೆನೀಳೋರ್ವ ಪುತ್ರನನೆಂದು
ಬೆಸಸೆ ಕಣ್ಬೆತ್ತಂತೆ ನಿಳಯಕ್ಕೆ ನಡೆತಂದು
ಶಶಿಮುಖಿಗೆ ಪೇಳುತಂ ಹಿಗ್ಗಿ ನಲಿಯುತ್ತಂದು
ಬಸಿರೊಳಗೆ ಮೂಡಿತ್ತು ಗರ್ಭ ವಿಪ್ರನ ಸತಿಗೆ
ಮುಸುಡೊಳಗೆ ಮೂಡಿತ್ತು ಕಾಂತಿಯಾ ಕಾಮಿನಿಗೆ
ಯೊಂದೆರಡು ಮಾಸಕ್ಕೆ ನವಮಾಸವಾಗುತಿರೆ
ಕಂದನಂ ಪಡೆದಳಾ ತಂದೆಯುತ್ಸವಿಸುತಿರೆ

ಪಡೆಯೆ ಸಂತಸದಿಂದೆ ಜಾತಕರ್ಮಂ ಮಾಡಿ
ಮೃಡನೆ ಶರಣೆಂದೆನುತೆ ನಾಮಕರಣಂ ಮಾಡಿ
ಚಂಡೇಶಪಿಳ್ಳೆಯೆಂಬಿಭಮುಖನ ಪೆಸರಿಟ್ಟು
ತಂಡತಂಡದ ಸುಖನಿಕಾಯಮಂ ಮುಂತಿಟ್ಟು
ಇರೆ ಬೆಳೆದನೋರ್ವ ಹರುಷೋತ್ಸವಂ ನೆಲೆಗೊಳಿಸಿ
ಹರನೇಕ ನಿಷ್ಠೆ ಬಳೆವಂದದಿಂ ಘುಳುಘುಳಿಸಿ

ಬಳೆಯೆ ಬಳೆದುದು ದರಿದ್ರಂ ಬಾಲನೊಡನೊಡನೆ
ಹೊಳೆವ ಮಾಯೆಗೆ ಭಕ್ತಿ ಸೊಗಸದೆಂಬಂತೊಡನೆ
ಇಂದ್ರಿಯಕ್ಕಂ ಶಿವಂಗಂ ಸೇರದೆಂಬಂತೆ
ಚಂದ್ರಮಂಗಂ ತಮಕ್ಕಂ ಸೇರದೆಂಬಂತೆ
ಕೆಲಸಾರುತೆಲ್ಲ ಸಂಪತ್ತು ತೊಲಗುತ್ತಮಿರೆ
ಹೊಲದಲೆಲ್ಲಂ ಹೊಲದೊಳಲ್ಲಿ ಪೋಗುತ್ತಮಿರೆ
ಮನೆಯೊಳೆಲ್ಲಂ ಮನೆಯೊಳುಂ ಮಾಯವಾಗುತಿರೆ
ನೆನೆದುದೆಲ್ಲಂ ನೆನಹಿನೊಳ್ಬಚ್ಚಿಯಾಗುತಿರೆ

ಇಂತಾಗೆ ಪುರಜನಂ ಕಂಡೆಲೆಲೆ ವಿಪ್ರರೇ
ಎಂತಪ್ಪ ಕಂದನಂ ಪಡೆದಿರೆಲೆ ಭಟ್ಟರೇ
ಆವುದು ಮುಹೂರ್ತವೀತಂ ಪುಟ್ಟಲಿಂತಾಯ್ತು

ಏವೇಳ್ವೆನೀತನಂ ನೋಡುವರ್ಗರಿದಾಯ್ತು
ಸಾಕಿಪರ್ಗೀತನಂ ಕೊಟ್ಟು ಕಳೆವುದೆ ಲೇಸು
ಬೇಗವಿನ್ನಿಂತು ಮಾಡಲ್ಕೆ ನಿಮಗಂ ಲೇಸು

ಎನಲೆನಗೆ ಹೊನ್ನುವುಂ ಚಿನ್ನವುಂ ಕಂದನೇ
ಎನಗೆನ್ನ ಬಂಧುವುಂ ಬಳಗವುಂ ಕಂದನೇ
ಎನಗೆನ್ನ ಸಂಪದಂ ಸುಖಕರಂ ಕಂದನೇ
ಎನಗೆನ್ನ ಜೀವಮುಂ ಭಾವಮುಂ ಕಂದನೇ
ಮಗನಂ ಪೆರರ್ಗಿತ್ತು ಬಾಳ್ವ ಸಂಪದವೇಕೆ
ಮಗನುಳ್ಳ ಬಡತನಂ ಸಂಪದಕೆ ಸರಿ ಏಕೆ
ಎಂದೆನುತೆ ಮಗನುಮುಂ ಬಡತನಮುಮಂ ಬಿಡದೆ
ಅಂದಂದು ಜೀವಿಪ್ಪುದರಿದಾಗೆ ಧೃತಿಗೆಡದೆ
ಇರೆ ಪನ್ನಿರೇಳ್ಪರಿಸವಾದುದಾ ಪುತ್ರಂಗೆ
ಪುರಹರನ ಪರಮ ಭಕ್ತ್ಯನ್ವಿತ ಚರಿತ್ರಂಗೆ

ಆಗ ಪುರಜನವೆಲ್ಲ ಕಂಡೆಲೇ ವಿಪ್ರರೇ
ಈಗಳೊಂದನುಮಾನಮಂ ಪೇಳ್ವೆವಪ್ಪರೇ
ನೆರೆವನೀಗಳ್ನಿಮ್ಮ ಮಗನೀತನಿಂದೆಮ್ಮ
ಕರುಗಳಂ ಕಾಯಲ್ಕೆ ಬಕುತಿ ತಪ್ಪದು ನಿಮ್ಮ
ಒಂದು ಕರುವಿಂಗೊರ್ಬಳಂ ಧಾನ್ಯಂಗೊಂಡು
ಬಂದು ಜೀವಿಪ್ಪುದೆನಲಂತದಂ ಕೈಕೊಂಡು

ಕಂದ ನೀಂ ಕರುಗಾಯ್ವ ಚೆಂದವಾಯ್ತೆನುತೋವಿ
ಕಂದನಂ ನೋಡುತಂ ಕಣ್ಣ ನೀರಂ ತೀವಿ
ಕರುಗಾವುದಕ್ಕೆ ಪಡೆದೆನೆ ನಿನ್ನನೆಲೆ ಮಗನೆ
ಹೆರೆಸೂಡಿದನ ಕರುಣವಿಂತು ಬಡತನ ಮಗನೆ
ಎಂದಿಂತು ಶೋಕಿಸುತೆ ಕರುಮರಿಗಳಂ ಕೂಡಿ
ಹಿಂದೆ ಕಿರಿದಂತರಂ ಬಂದು ಮಗನಂ ನೋಡಿ
ಮಗನೆ ಕರುಗಳನೊಯ್ದು ಸುಯಿಧಾನನಾಗಯ್ಯ
ಮಗನೆ ಎನಗಂ ಪುಟ್ಟಿ ಈ ವಿಧಿಯನುಂಡಯ್ಯ
ಬಡತನಂ ಬೇರೆ ಕರುಗೆಟ್ಟೊಡಂತದು ಬೇರೆ
ಕಡು ದೂರಮಂ ಪೋಗದಿರು ಕಂದ ನೀನಾರೆ



ಪುಲಿ ಕರಡಿಯುಂಟು ಪದುಳಂ ಪೋಗೆಲೆ ಕಂದ
ಅಲಸದಿರು ನಿನಗೆ ಇದಿರಾಗಿ ಬರ್ಪೆಂ ಕಂದ
ಪೋಗೆನುತೆ ತಿರುಗಿ ನೋಡುತ್ತೆ ಬಂದಂ ಮನೆಗೆ
ಏಗೆಯ್ವೆನಿಂತು ವಿಧಿ ಮಾಡಿತೆನುತುಂ ತನಗೆ
ಉಮ್ಮಳಂ ಪಿರಿದಾಗೆ ಸುಯ್ದು ಪಿಗ್ಗಾಗುತುಂ
ದುಮ್ಮಾನವೆಯ್ದೆ ಬಡತನವನಂದೆಣಿಸುತುಂ
ಇರೆ ಪಡುವ ಜಾವದೊಳ್ಕರುಗಳನಿತಂ ಕೊಂಡು
ಬರೆ ಪುತ್ರನಂ ನೋಡಿ ಪಿರಿದು ಹರುಷಂಗೊಂಡು
ಲೇಸಾಯ್ತು ಮಗನಿಂತು ಬುದ್ಧಿಗಲ್ತಂ ನೋಡ
ಲೇಸಿನ್ನು ಬಡತನಕ್ಕಂಜೆನಂಜೇಂ ನೋಡ

ಎಂದಿಂತು ನಾಲ್ಕೆರಡು ದಿವಸಂಗಳಂ ಕಳೆದು
ಸಂದ ಗೋವೃಂದದಾಡುಂಬೊಲನುಮಂ ತಿಳಿದು
ಕಲಿಚಂಡಪಿಳ್ಳೆ ನುಡಿದಂ ತಂದೆಗಂದಿರದೆ
ಎಲೆಯಯ್ಯ ಕರುಗಳಂ ಕಾವುದೇನೊಂದರಿದೆ
ಹಸುಗಳಂ ತಂದುಕೊಡು ಕಾದಿಪ್ಪೆನೆಂದೆನಲ್
ಒಸೆದು ಪುತ್ರನನಪ್ಪಿ ನಡೆತಂದು ಭೋಂಕೆನಲ್
ಅಲ್ಲಲ್ಲಿ ಹಸುಗಳಂ ಕೂಡಿಸುತ್ತಂ ಹೊಡೆದು
ಮೆಲ್ಲಮೆಲ್ಲನೆ ನೂರು ಜೀವದನವಂ ಪಡೆದು
ಹಸುವಿಂಗೆ ಒಂದೊಂದು ಕೊಳಗ ಧಾನ್ಯಂ ಬಂದು
ಹಸಿವೋಡಿತೆನ್ನ ಮಗನಿಂದೆನ್ನ ಮನೆಗೆಂದು
ತಂದು ಹಸುವಂ ಕೂಡಿಕೊಟ್ಟು ಮಗನಂ ಕಳುಪೆ
ಬಂದು ಹುಲ್ಲುಳ್ಳ ಹೊಲದೊಳ್ ಗೋವುಗಳ ಕಳುಪೆ

ಇರ್ದಿರ್ದು ಚಂಡಪಿಳ್ಳೆಯ ಬಲದ ಕಣ್ಣೆತ್ತೆ
ಇರ್ದಿರ್ದು ಗಗನದೊಳ್ ಬೆಳಗು ತನ್ನಂ ಮುತ್ತೆ
ಇಳಿತಂದನೋರ್ವಂ ಮಹೇಶ್ವರಂ ಭೂತಳಕೆ
ಬೆಳಬೆಳಗುತಂ ಚಂಡಪಿಳ್ಳೆಯಿರ್ದಾ ಹೊಲಕೆ
ಬಂದು ಹಸುಳೆಯ ಶಿರದ ಮೇಲೆ ಹಸ್ತವನಿಟ್ಟು
ಸಂದ ಪಂಚಾಕ್ಷರಿಯನುಪದೇಶಮಂ ಕೊಟ್ಟು
ಮಗನೆ ಇದನಾರ್ಗೆಯುಂ ತೋರದಿರು ಬೀರದಿರು

ಮಗನೆ ಶಿವನಿಂದೆಯಂ ಕಾಣದಿರ್ಕೆಳದಿರು
ಎನೆ ದೇವ ಪಿತೃಮಾತೃವೊಳಗಾಗಿಯುಂ ಪೇಳೆ
ಎನಗೆ ಕಣ್ಣುಂ ಗತಿಯು ನಿಮ್ಮಾಜ್ಞೆಯಂ ಪೇಳೆ
ನೆಂದೊಡಂತಲ್ಲಿ ಮಳಲೊಳ್ ಲಿಂಗಮಂ ತೋರಿ
ಇಂದು ಈ ಪರಿಯರ್ಚಿಸೆಂದು ಸುಖಮಂ ಸಾರಿ
ಮಾಯವಾದಂ ಮಹೇಶ್ವರನಲ್ಲಿ ಹೊಲದೊಳಗೆ

ಮಾಯೆ ಕಳಲುತ್ತಿರಲ್ಕಿತ್ತ ಬಾಲಕನೊಳಗೆ
ಜಾತಿಸೂತಕವಳಿದು ಜನನವಿರಹಿತನಾಗಿ
ನೂತನ ಶರೀರದಿಂ ಕೃತಕೃತ್ಯ ಮನನಾಗಿ
ಮುನ್ನಿನಂತಲ್ಲದಡಿಗಡಿಗೆ ಕಳೆಯೇರುತುಂ
ತನ್ನ ಮನದೊಳ್ ತಾನೆ ಹಿಗ್ಗಿ ಹೊರೆಯೇರುತುಂ

ಇರೆ ಜೀವದನವೆಲ್ಲ ಪುಲ್ಮೇಯೆ ಹರುಷದಿಂ
ಬರಲವಂ ಕೊಂಡು ಪುರದೊಳಯಿಂಕೆ ರಾಗದಿಂ
ಬಂದು ಸುಖದಿಂದಿರಲ್ ಹಸುಗಳೆಲ್ಲಂ ಮೆರೆಯೆ
ಎಂದಿನಂತಲ್ಲದಿರ್ಮಡಿ ಪಾಲ್ಗಳಂ ಕರೆಯೆ
ಕಂಡು ಪುರಜನವೆಲ್ಲ ಪರಸಿ ಹರುಷಂದಳೆದು
ಚಂಡಪಿಳ್ಳೆಯಗುರ್ಡುಗೊರೆಯನಿತ್ತರ್ನಲಿದು
ಕೊಟ್ಟು ಸಂತೋಷದಿಂದಿರುತಿರಲನಂತರಂ

ಪುಟ್ಟಿದಂ ಪೂರ್ವಾಚಲಾಗ್ರದೋಳ್ ರವಿಕರಂ
ಬೆಳಗಾಗೆ ಗೋ ನಿಕರಮಂ ಕೊಂಡು ಪೊರಮಟ್ಟು
ಕಳೆದು ಪುರದಿಂ ಬಂದು ಹರುಷಮಂ ಮುಂದಿಟ್ಟು
ಗೋವುಗಳನಲ್ಲಲ್ಲಿ ಮೇಯಲ್ಕೆ ಬಿಸನಿತ್ತು
ದೇವಂ ತನಗೆ ಕೊಟ್ಟ ಶಿವಮಂತ್ರಮಂ ಪೊತ್ತು

ಆಹಾ ಎನಗೆ ನೀನೆ ಕರುಣಿಸಿದ ತಾಣವಿದು
ಆಹಾ ಮಹೇಶ್ವರಂ ನಿಂದಿರ್ದ ತಾಣವಿದು
ಎನುತಲ್ಲಿ ಪೊರಳುತುಂ ಕುಂಬಿಕ್ಕಿ ಕುಣಿವುತುಂ
ಮನದೊಳಗೆ ಗುರುಪದವನಜ್ಯೋತ್ತಿ ತಣಿವುತುಂ
ಜನನಮರಣಂಗಳಂ ರೂಹುಗೆಡಿಸಿದ ಗುರುವೆ



ಮನದೊಳಗೆ ಕಣ್ಣೊಳಗೆ ತೀವಿ ನೆಲಸಿದ ಗುರುವೆ
ಕರ್ಮವಂ ಕೆಡಿಸಿದ ಸದ್ಧರ್ಮ ನೀನೆಲೆ ಗುರುವೆ
ನಿರ್ಮಳ ಜ್ಞಾನದೊಳ್ ನೆಲಿಸಿದುತ್ತಮ ಗುರುವೆ
ಭವಭವಂಗಳ ಬಳಲ್ಕೆಯನಾರಿಸಿದ ಗುರುವೆ
ನವನವ ಪ್ರೇಮದಿಂದೊಳಕೊಂಡ ಘನ ಗುರುವೆ
ವರಗುರುವೆ ಸದ್ಗುರುವೆ ಸತ್ಯ ಸಂಪದ್ಗುರುವೆ
ಹರಿಬೊಮ್ಮರಾದ್ಯಂತವರಿಯದ ಮಹಾ ಗುರುವೆ

ಎಂದು ಸವಿನುಡಿಗಳಿಂ ಹೊಗಳುತ್ತೆ ಹೊಂಗುತ್ತೆ
ಮಂದೈಸಿ ಪಲ್ಲೈಸಿ ಪುಳುಕದಿಂ ಪೊಣ್ಮುತ್ತೆ
ಬಾಲಚೂತದ ನೆಳಲ ಪುಳಿನ ಸ್ಥಳದೊಳಂದು
ಬೋಳೈಸಿ ಕರೆದು ತಣಿಯದೆ ನೆನೆಯುತುಂ ಬಂದು
ಮಳಲಿಂದೆ ಶಿವಲಿಂಗಮಂ ಸಿಂಗರಂ ಮಾಡಿ
ಇಳಿವಶ್ರುಜಲದಿಂದೆ ಹಾರೈಸುತುಂ ನೋಡಿ
ಮುಂಡಾಡಿ ಮೋಹಿಸುತೆ ಮುದ್ದಿಸುತೆ ಬಿಗಿದಪ್ಪಿ
ಕೊಂಡಾಡಿ ಕೊನರುತ್ತೆ ಕೊರ್ಬುತ್ತೆ ಕವಿದಪ್ಪಿ
ಕುಣಿಯುತ್ತೆ ಕಕ್ಕೆಯಕ್ಕೆಗಳ ಪೂವಂ ತಂದು
ತಣಿವಿಲ್ಲದರ್ಚಿಸುತೆ ನಡೆ ನೋಡುತುಂ ನಿಂದು
ಪೂಜಿಸುತೆ ಪೂಜಿಸುತೆ ಕಣ್ಮುಚ್ಚಿ ಕರಗುತುಂ
ಸೋಜಿಗದ ನೇಹದಿಂ ನೆರೆ ಮುಟ್ಟಿ ಮರುಗುತುಂ।
ಎಳ್ದೆಳ್ದು ಕುಳ್ಳಿರ್ದು ಕುಣಿಕುಣಿದು ನೋಡುತುಂ
ಬಿಳ್ದು ಭರವಿಡಿದು ಸುಖಜಲದೊಳಗೆ ಮೂಡುತುಂ
ಕೈಯೆತ್ತಿ ಕೂಗಿಟ್ಟು ಕರೆಕರೆದು ಹಿಗ್ಗುತುಂ
ವೈಯಿಕ್ಕಿ ಮುಡುಹಿಕ್ಕಿ ಕಡು ಹಿಗ್ಗಿ ಹೆಚ್ಚುತುಂ
ಶಶಿಧರಾ ಶಂಕರಾ ಬದುರ್ಕಿದೆಂ ಬದುರ್ಕಿದೆಂ
ಪಶುಪತಿಯೆ ಪುರಹರನೆ ಬದುರ್ಕಿದೆಂ ಬದುರ್ಕಿದೆಂ
ತರುಗಿರಿ ವನಂಗಳಿರ ಕಂಡಿರೇ ಪುಣ್ಯಮಂ
ಹರನೆನ್ನ ಕಯ್ಯೊಳರ್ಚಿಸಿಕೊಳ್ವ ಗಣ್ಯಮಂ
ಗಿಳಿಹಂಸೆ ಕೋಕಿಳಮೆ ನೋಡಿರೇ ಸಂಪದವ
ನಳಿಕುಳಂಗಳಿರ ಕಂಡಿರೇ ಎನ್ನ ಸಂಪದವ

ಆಹಾ ಮಹೇಶ್ವರಾ ಆಹಾ ಮದೀಶ್ವರಾ
ಆಹಾ ಕೃಪಾವಾರಿನಿಧಿ ಶಂಭು ಶಂಕರಾ

ಎಂದು ಪಶುಪತಿಗಿಂತು ಹಲುಬಿ ಸುಖಮಂ ನೆನೆದು
ಬಂದು ಕೊಳಲೂದಿ ಕರೆದು ಗೋಕುಲಮನಂದು
ಕರೆಯೆ ಮೇವಂ ಮರೆದು ಭೋಂಕನಾಲಿಸಿ ಕೇಳ್ದು
ನೊರೆವಾಯ್ಗಳಲರ್ದ ಕಿವಿ ನಟ್ಟ ದಿಟ್ಟಿಯ ತಾಳ್ದು
ಬಾಲಮಂ ಮೇಲ್ಕೆತ್ತಿಕೊಂಡು ಭೋಂಕನೆ ಬರಲ್
ಹಾಲಕಾಯ್ಗಳಿರ ಬನ್ನಿರೆ ಎಂದೆನುತ್ತಿರಲ್
ತಂಡತಂಡದಿ ಬಂದು ನಿಂದಲ್ಲಿ ಸೇರುತ್ತೆ
ಚಂಡಪಿಳ್ಳೆಯ ಮೆಯ್ಯನಳ್ಕರಿಂ ನಕ್ಕುತ್ತೆ
ಹೂಂಕರಿಸುತೆಡೆಗಲಿಸಿಕೊಂಡು ಶಿವಲಿಂಗಮಂ
ಲೋಕಕ್ಕೆ ಪೊಸತಿದೆಂಬಂತೆ ಸರ್ವಾಂಗಮಂ
ಸಡಲಿಸುತ್ತಂ ಕರೆದವಲ್ಲಿ ಲಿಂಗದ ಮೇಲೆ
ಮೃಡಭಕ್ತಿರಸಧಾರೆ ಎಂಬಂದದಿಂ ಮೇಲೆ
ಕಂಡೀಶ್ವರನ ಮುಂದೆ ಮೂಡಿರ್ದ ಲಿಂಗಕ್ಕೆ
ತಂಡದಿಂ ಸುರಭಿವಿಂಡೆಯ್ತಂದು ನೇಹಕ್ಕೆ
ಧರ್ಮಾರ್ಥಕಾಮಮೋಕ್ಷಂಗಳಂ ಕರೆವಂತೆ
ನಿರ್ಮಳದ ನಾಲ್ಕು ಮೊಲೆ ತೊರೆದು ಕರೆವುತ್ತಿಂತೆ
ಬಾಲಚಂದ್ರಂ ಮುಳುಗಿ ತೇಂಕಾಡುತಿರೆ ಕರೆದು
ನೀಲಗಳಮಲ್ಲಿ ಮಧುರತೆಯಾಗುತಿರೆ ಕರೆದು
ಶಿವಲಿಂಗಮಂ ಪುಣ್ಯ ಓಲೈಸೆ ಬಂದಂತೆ
ಶಿವನ ಜೂಟದ ಶಶಿಯ ಬೆಳ್ದಿಂಗಳಿಳಿವಂತೆ
ಕರೆಗೊರಲ ಮೃಡನು ನೆರೆ ಗೋನಿಕರ ಪಾಲ್ಗೊಂಡು
ಅರಕೆವಟ್ಟಾನಂದಮಯನಂತದಂ ಕಂಡು
ಗೋವುಗಳನೊರ್ಮೆ ಶಿವಲಿಂಗಮುಮನೊರ್ಮೊರ್ಮೆ
ಭಾವಿಸುತ್ತಪ್ಪಿಕೊಳುತಾರುತ್ತ ಪೊರ್ಮೊರ್ಮೆ
ಗುಡಿಗಟ್ಟಿ ಕುಣಿವುತುಂ ಮಡುಗಟ್ಟಿ ಕರಗುತುಂ
ಗಡಿಗಟ್ಟಿ ಪುಳಕಂಗಳಿಂದೆ ಪುದಿದೇಳುತುಂ



ಇಂತು ಶಿವಲಿಂಗಪೂಜಾರತಿಯೊಳಾಡುತುಂ
ಸಂತತಂ ಶಿವಭಕ್ತಿರಸದೊಳೋಲಾಡುತುಂ

ಇರಲಸ್ತಮಯವಾಗೆ ಗೋನಿಕರಮಂ ಕೊಂಡು
ಚರಿತದಿಂದಂ ಬಂದು ಪುರದತ್ತ ನಡೆಗೊಂಡು
ಬಂದವರವರ ಮನೆಗೆ ಪಶುಗಳಂ ಕಳಿಪುತ್ತೆ
ನಿಂದು ಮೆಲ್ಲನೆ ಮನೆಯ ಪುಗುತಂದು ಬಾಳುತ್ತೆ
ಈ ತೆರದೊಳುಂ ಪಲವು ದಿವಸಂಗಳಾಗುತಿರೆ
ಈ ತೆರದೊಳವರವರ ಮನೆಯ ಪಶು ಕರೆಯದಿರೆ
ಜೀವದನದೊಡೆಯರೆಲ್ಲಂ ಮನೆಗೆ ನಡೆತಂದು

ಓವೊ ಅಚ್ಯುತಭಟ್ಟರೇ ಪರಿ ಇದೇನೆಂದು
ಕರೆಯರೊಂದಿನಿಸಿಲ್ಲ ಪಾಲ ಪಾತಿನ್ನೇಕೆ
ಅರಿದಾಯ್ತು ಚಂಡಪಿಳ್ಳೆಯ ಕಾಹು ತಾನೇಕೆ
ಯೊಂದೆರಡು ದಿನಮಡಕ್ಕೇನೆಂದೆನುತ್ತಿರಲ್
ಸಂದಿಸುತ್ತಿಂತು ಪಾಲ್ಬಚ್ಚೆಯಾಗುತ್ತಿರಲ್
ಮರುಗದುರೆ ಮಾಣ್ಬವೆಮ್ಮಕ್ಕಳ್ಗೆ ಯರೆದಿಲ್ಲ ಯರೆದಿಲ್ಲ
ಕರುವಿಂಗೆ ಮೊದಲಾಗಿಯೊಂದು ಹನಿ ಹಾಲಿಲ್ಲ
ಪಶುವೆಮಗೆ ಪಾಲ್ನಿಮಗಿದೇನೆಂಬ ಪರಿಯಯ್ಯ
ಪೊಸತೆಮಗೆ ಚಂಡಪಿಳ್ಳೆಯ ಕಾಹು ಬೇಡಯ್ಯ

ಎನೆ ಕೇಳ್ದು ಪುತ್ರನಂ ಕರೆದು ಸಿಡಿಮಿಡಿಗೊಂಡು
ನಿನಗಿದೇಂ ಮಗನೆ ನಾವೆಂತಕ್ಕೆ ಕೂಳ್ಗಂಡು
ಬರ್ದುಕಿದೆವೆನುತ್ತಿರಲಿದೇನನುದ್ಯೋಗಿಸಿದೆ
ಮುದದಿಂದೆ ಪೇಳಯ್ಯ ಪಶುವನೆಂತಾಡಿಸಿದೆ
ಹುಲ್ಲುಂಟು ನೀರುಂಟು ಹಾಲಿಲ್ಲದೇಂ ಮಗನೆ
ಎಲ್ಲಿರ್ದೆ ಎಲ್ಲಿ ಕಾವುತ್ತಿರ್ದೆ ಪೇಳ್ಮಗನೆ
ಎಂದೊಡೀ ಭವಿಗಳ್ಗೆ ಪೇಳಲೇಕೆಂಬಂತೆ
ಇಂದುಧರಪೂಜೆಯಂ ಬೀರೆ ನಾನೆಂಬಂತೆ
ಪಶುವಾರು ನೀವಾರಿದೇಕೆಂದು ಮುನಿವಂತೆ
ಪಶುಪತಿಯನರಿಯದವರೇನರಿವರೆಂಬಂತೆ

ಭಕ್ತಿಯಭಿಮಾನಿ ಪೂಜಾಮೌನಿ ಸುಮ್ಮನಿರೆ
ಯುಕ್ತಿಗೆಟ್ಟವರೆಲ್ಲ ಪೊಲ್ದಂತೆ ನುಡಿವುತಿರೆ
ಅಂದು ಅಚ್ಚುತಭಟ್ಟರೆಲ್ಲರ್ಗೆ ಕೈಮುಗಿದು
ಇಂದು ನಿಮ್ಮಯ ಮೇಲೆ ತಪ್ಪಿಲ್ಲೆನುತ್ತಗಿದು
ಕೇಳಿರೇ ನೀವಿಂದುವೆನ್ನ ಮಾತಂ ಸಲಿಸಿ
ನಾಳೆ ಕರೆಯದೊಡೆ ಬಳಿಕಿವನ ಕಾಹಂ ಬಿಡಿಸಿ
ಎಂದವರ್ಗಳಂ ಕಳುಪಿ ಚಿಂತೆಯಂ ಪಟ್ಟಿರಲ್
ಕಂದನಂ ನುಡಿಯಲಾರದೆ ಮೂಗುವಟ್ಟಿರಲ್

ಬೆಳಗಾದುದೀಶಂ ಪ್ರಸನ್ನನೆಂದೆಂಬಂತೆ
ಬೆಳಗಾಯ್ತು ಚಂಡಸಿಳ್ಕೆಗೆ ಶುಭೋದಯದಂತೆ
ಆಗಳೆಳ್ದಿಂದಿನಂದದೆ ಪಶುಗಳಂ ಕೂಡಿ
ಪೋಗಲೆಂದಿರ್ದ ಮಗನಂ ಹರುಷದಿಂ ನೋಡಿ
ಏನೆಂದೊಡಂ ನುಡಿಯೆ ಸುಮ್ಮನಿರ್ದಪೆ ಮಗನೆ
ನೀನೇವೆ ಎಮ್ಮ ವಿಧಿ ಮಾಡುತ್ತಲಿರೆ ಮಗನೆ
ಎಲೆ ಮಗನೆ ಸುಯಿಧಾನದಿಂದೆ ಕಾವುದು ಕಂದ
ಎಲೆ ಎಮ್ಮ ಬಾಯಕುಟುಕಂ ಕಳೆಯದಿರ್ ಕಂದ
ಎಂದಾತನಂ ಕಳುಪಿ ಕಾಣದಂದದಿ ಪಿಂದೆ
ಹಿಂದುಗೊಂಡೊಯ್ಯನೊಯ್ಯನೆ ಪೋಗುತವ ಮುಂದೆ
ಒಂದು ಮರನೇರಿ ನೋಡುವೆನಿವಂ ಮಾಳ್ಪುದಂ
ಅಂದಂದು ಪಾಲ್ಬಚ್ಚಿಯಾಗಿ ಬರಿದಪ್ಪುದಂ
ಎಂದೆನುತೊಂದು ಮರದೊಳಗವಿತುಕೊಂಡಿರಲ್
ಬಂದನೆಂದಿನ ತೆರದೆ ಗೋವುಗಳ್ಬರುತಿರಲ್

ಹೊಡೆದನೈ ಹುಲ್ಲುಳ್ಳ ಹೊಲದೊಳಗೆ ಪಶುಗಳಂ
ನಡೆದನೈ ಪೂಜಿಸುವ ಠಾವಿಂಗೆ ನಿಶ್ಚಳಂ
ಪಾಡುತುಂ ಪೊಗಳುತುಂ ಮಳಲಲ್ಲಿ ಲಿಂಗವಂ
ಮಾಡುತುಂ ಮನಮುಬ್ಬುತುಂ ಭಕ್ತಪುಂಗವಂ
ಸಿಂಗರಿಸಿ ಕಾಡಪೂಗಳನೈದೆ ತಿರಿತಂದು
ಹಿಂಗದೊಲವಿಂ ಪೂಜೆಯಂ ಮಾಡಿ ನಡೆತಂದು
ಎನ್ನ ಶಶಿಮೌಳಿಯಭಿಷೇಕದರಸಿಯರಿರಾ



ಎನ್ನ ಶಂಕರನ ಪಂಚಾಮೃತಪ್ರಿಯರಿರಾ
ಅಮೃತರಸಪೂರ್ಣಸ್ತನಾಧಿಕನಿಧಿಗಳಿರಾ
ಅಮೃತಕರಧರವಾಹನಪ್ರಿಯಾವಳಿಗಳಿರಾ
ಬನ್ನಿರೇ ಎಂದು ಕರೆವಾ ಕೊಳಲದನಿವಿಡಿದು
ಮುನ್ನವೇ ಮೊಗವೆತ್ತಿಕೊಂಡು ಸಂದಣಿವಡೆದು
ಭೋರೆಂದು ಬರೆ ಕಾಣುತೊಂದೊಂದನುಂ ಕರೆಯೆ
ಹಾರಯಿಸಿ ಶಿವಲಿಂಗದ ಮೇಲೆ ನೆರೆ ಕರೆಯೆ
ಕರೆಯ ನೊರೆ ಶೀವೃತ್ತೆ ಹಾಲಹಳ್ಳಂ ಹರಿಯೆ
ನೆರೆ ಮನದ ಭಕ್ತಂಗೆ ಸುಖರಸಂಗಳ್ಸುರಿಯೆ

ಇತ್ತಲಾ ಮರದಿಂದಲಿಳಿದನಾ ಪಾತಕಂ
ಚಿತ್ತದೊಳ್ಭಕ್ತಿವೇಧಿಸದಾತ್ಮಘಾತಕಂ
ಈ ಪರಿಯಲೇ ಮಾಳ್ಪೆ ಲೇಸು ಲೇಸೆಲೆ ಮಗನೆ
ಈ ಪರಿಯಲೆನ್ನ ಗಂಟಲನರಿವರೇ ಮಗನೆ
ಎನುತೆನುತೆ ಶಿವಶಿವನೆ ಹರಹರ ಮಹಾದೇವ
ಮನದೊಳೆಳ್ಳನಿತು ಭಕ್ತಿಯು ಇರದ ದುರ್ಭಾವ
ನೆಯ್ತಂದು ಶಿವಲಿಂಗಮಂ ಮುಟ್ಟುತಿರೆ ಕಂಡು

ಸಯ್ತಿರದೆ ಚಂಡೇಶನುರಿದೆಳ್ದು ಕೋಲ್ಗೊಂಡು
ಎತ್ತಿದೊಡೆ ಪಿಡಿದಿರ್ದ ಕೋಲ್ಗೊಡಲಿಯಂತಿರಲ್
ಚಿತ್ತದೊಳ್ಮೆಚ್ಚಿ ಕರಿವದನನಿತ್ತಂತಿರಲ್
ಕೆಡೆಕೆಡೆ ಶಿವದ್ರೋಹಿ ಲಿಂಗವಂ ಮುಟ್ಟುವರೆ
ಫಡ ಕುನ್ನಿ ಭವಿನಾಯಿಯೊಡೆಯನಂ ಮುಟ್ಟುವರೆ
ಎನುತೆ ಹೊಡೆದಂ ಹೊಡೆದನಮ್ಮಮ್ಮ ಚಂಡೇಶ
ಮನವಾರಲಿತ್ತಲವತರಿಸುತ್ತ ಸರ್ವೇಶ
ನಾಗಲಿರದೆಯ್ತಂದು ವೈನೊಂದುದೇ ತಂದೆ
ಪೂಗೆ ಮೃದುತರವಪ್ಪ ತನುಗುಂದಿತೇ ತಂದೆ
ಪಾಪಕರ್ಮಂ ಮುಟ್ಟಿದಂ ಮುಟ್ಟಿದನೆ ದೇವ

ತಾಪತ್ರಯದ ಮರುಳ್ಕೈಮುಟ್ಟಿದನೆ ದೇವ
ಎಂದಲ್ಲಿ ಮೆಲ್ಲಮೆಲ್ಲನೆ ಮುಟ್ಟಿ ನೋಡುತಿರೆ
ಇಂದುಶೇಖರನೆ ನೊಂದೈ ತಂದೆ ಯೆನುತಮಿರೆ
ಇತ್ತಲೀರ್ವಡೆದ ಪಾರ್ವಂ ಮೆಲ್ಲನೆಚ್ಚತ್ತು
ಒತ್ತರಿಸಿದೇರಿಂದವೆಂತಸ್ಕೆ ಎಚ್ಚತ್ತು
ಕಂದಯ್ಯ ನೀನೆನ್ನನಿರಿವರೇ ಎನುತುಮಿರೆ
ನೊಂದು ಬಾಯಾರಿ ತಣ್ಣೀರ್ತಣಿ ಎನ್ನುತ್ತುಮಿರೆ
ಶಿವಶಿವ ಶಿವದ್ರೋಹಿ ಇನ್ನುಮಿರ್ದಪನೆನುತೆ
ಭವಿಪಾಪಿ ಪಾಪಿ ಪಾತಕ ಬೀಳು ಬೀಳೆನುತೆ
ತಲೆತೊಟ್ಟನುಡಿದುರುಳೆ ಹೊಯ್ದನಾ ತಂದೆಯಂ
ನಲನರಿಯೆ ಪರಿಹರಿಸಿ ಕಳೆದನಾ ತಂದೆಯಂ

ಹೊಯ್ದು ತಿರುಗಲ್ಕೆ ಪೊರಮಟ್ಟನಾ ಲಿಂಗದೊಳ್
ಅಯ್ದು ಮುಖವೀರೈದು ಭುಜಮೆಸೆಯೆ ಲಿಂಗದೊಳ್
ಕೆಯ್ಯ ತಲೆ ಮೆಯ್ಯ ತಲೆ ಕಾಲಕಣ್ಣಿಂದೊಪ್ಪೆ
ಅಯ್ಯಯ್ಯ ನಿಂದಂ ವಿರೂಪಾಕ್ಷನಿಂತೊಪ್ಪೆ
ಇರಲು ಹೂಮಳೆ ಯೆರಗಿ ಸುರಿದುವಾ ಹೊಲದೊಳಗೆ
ತರತರದಿ ತನತನಗೆ ದುಂದುಭಿಕುಳಂ ಮೊಳಗೆ
ಕಹಳೆಗಳ್ಕರೆಯೆ ಶಂಖದ ನಾದಮುಣ್ಮುತಿರೆ
ಬಹು ವಿಧದ ರೂಪಿಂದೆ ಗಣಸಮಿತಿ ನೆರೆವುತಿರೆ
ನೋಡಯ್ಯ ನಂದೀಶ ನೋಡೇಕನಿಷ್ಠನಂ
ನೋಡುವಡೆ ಹರಿ ವಿರಿಂಚಿಗಳಿಂದ ಶ್ರೇಷ್ಠನಂ
ಕಡು ನಿಷ್ಠೆಯಿಂ ಹೊಲದೊಳಿಂತರ್ಚಿಸಿದರುಂಟೆ
ಪೊಡವಿಯೊಳ್ತಂದೆಯಂ ಕೊಂದು ತೋರ್ದವರುಂಟೆ
ಎನ್ನ ಭಕ್ತರ್ಗೆ ತಾಯ್ತಂದೆಗಳ್ಬೇರುಂಟೆ
ಎನ್ನ ಭಕ್ತರ್ಗೆ ಗತಿಮತಿಯಾಸೆ ಬೇರುಂಟೆ
ಎನಗೆ ಬಂಧುಂ ಬಳಗವೆನ್ನ ಭಕ್ತರ್ನೋಡ
ಎನಗೆ ಸತಿಯುಂ ಸುತರುಮೆನ್ನ ಭಕ್ತರ್ನೋಡ



ಎಂದು ನಂದೀಶಂಗೆ ಪೇಳುತುಂ ಹಿಗ್ಗುತುಂ
ಬಂದ ಗಣ ವೃಂದಕ್ಕೆ ತೋರುತುಂ ತೊಳಗುತುಂ
ಆನೆ ನಿನಗೆ ತಾಯಿ ತಂದೆ ಚಂಡೇಶ ಕೇಳೆಂದು
ಆನುಂಡ ಶೇಷ ಪ್ರಸಾದವದು ನಿನಗೆಂದು
ಚಂಡೇಶಪಿಳ್ಳೆಯುಗೊರ್ಲಲ್ಪು ಬೀಳುಡೆ ಇತ್ತು
ಕೊಂಡಾಡಿ ಮುಂಡಾಡಿ ಬಾಯುತಂಬುಲವಿತ್ತು
ನಿನ್ನ ನೀಕ್ಷಿಸಿದವರ್ಗಿನ್ನೊಂದು ಭಯವುಂಟೆ
ನಿನ್ನ ಕೈಮುಟ್ಟಿದಂಗಿನ್ನೊಂದು ಸಾವುಂಟೆ
ಎತ್ತವಸನೆತ್ತೆಂದು ಕರುಣದಿಂದೆತ್ತಿಸುತೆ
ಚಿತ್ತಜಹರಂ ಕೃಪಾವೃಷ್ಟಿಯಿಂದೀಕ್ಷಿಸುತೆ
ಆಡಿದ ಹೊಲಂಬೆರಸಿ ನೆಗೆದನಾಕಾಶಕ್ಕೆ
ನೋಡಿದ ಮೃಗಂಬೆರಸಿ ನೆಗೆದನಾಕಾಶಕ್ಕೆ
ಕರೆವ ಹಸುಗಳ್ವೆರಸಿ ನೆಗೆದನಾಕಾಶಕ್ಕೆ
ಕರೆ ಗೊರಲನಿರಲೊಲವಿಂದೆ ಕೈಲಾಸಕ್ಕೆ
ಬಂದು ಚಂಡೇಶಂಗೆ ಗಣಪದವಿಯಂ ಕೊಟ್ಟು
ನಿಂದ ಗಣಸಂತತಿಯು ನಡುವೆ ನೇಹಂಬಟ್ಟು
ಕೈಲಾಸದೊಳಗೆಲ್ಲ ಗುಡಿಗಳಂ ಕಟ್ಟಿಸುತೆ
ಶೈಲಜೆಗೆ ತೋರುತುಂ ಮೋಹದಿಂ ಮುದ್ದಿಸುತೆ
ತಾರಾದ್ರಿಯರಮನೆಯೊಳಪ್ರತಿಮನೊಪ್ಪಿದಂ
ಮಾರಮದಮಥನನಾನಂದಮಯನೊಪ್ಪಿದಂ
ಹರಿವಿರಿಂಚಾದ್ಯಮರಮುಕುಟಪದನೊಪ್ಪಿದಂ
ಶರಣಜನಹೃದಯಸರಸಿಜಭಾನುವೊಪ್ಪಿದಂ
ಭಕ್ತಸಂತಾನಜಲನಿಧಿಚಂದ್ರನೊಪ್ಪಿದಂ
ಭಕ್ತಕುಲಕಲ್ಪಕುಜವನಚೈತ್ರನೊಪ್ಪಿದಂ
ಭಾಳಾಕ್ಷನೊಪ್ಪಿದಂ ಭೂತೇಶನೊಪ್ಪಿದಂ
ಶೂಲಧರನೊಪ್ಪಿದಂ ಶಶಿಮೌಳಿಯೊಪ್ಪಿದಂ
ಶಿವನೊಪ್ಪಿದಂ ಸದಾಶಿವ ಶಂಭುವೊಪ್ಪಿದಂ
ಭವನೊಪ್ಪಿದಂ ಭರ್ಗನೊಪ್ಪಿರ್ದನೊಪ್ಪಿದಂ
ಎನ್ನ ನಿಧಿ ಎನ್ನ ಸುಧೆ ಎನ್ನ ಗುರುವೊಪ್ಪಿದಂ

ಎನ್ನರಸ ಹಂಪೆಯ ವಿರೂಪಾಕ್ಷನೊಪ್ಪಿದಂ ॥

ಕಂದ॥ ಈಶಂ ಪಿತನೆಂದರಿದು ನಿ ।
ಜೇಶನ ಬೆಸನಿಂದೆ ತನ್ನ ಪಿತನನರಿದ ಚಂ ॥
ಡೇಶನ ಸುತನೆಂದೆನಗೆ ಮ ।
ಹೇಶಂ ಕರುಣಿಸುಗೆ ಹಂಪೆಯ ವಿರೂಪಾಕ್ಷಾ ॥

---



# ಅಮರನೀತಿಯ ರಗಳೆ.

ಕಂದ। ಧರೆ ಪೊಗಳಲೊರೆದು ಕೂಗಿದ ।
ಮರನೀತಿಗಳೆಂಬ ಪರಮ ಭಕ್ತನ ಕಥೆಯಂ ॥
ವಿರಚಿಸುವೆಂ ಭರದಿಂ ಸಾ ।
ದರದಿಂ ಕೇಳಯ್ಯ ಹಂಪೆಯ ವಿರೂಪಾಕ್ಷಾ ॥

## ರಗಳೆ.

ಶ್ರೀಸಕಲ ದೇಶದೊಳಗಧಿಕವೆನಿಸುವ ಚೋಳ
ದೇಶದೊಳಗೆಸೆದಿರ್ಪನೋರ್ವ ಭಕ್ತಂ ಕೇಳ
ಎಸೆವ ತಿರುನಲ್ಲೂರೊಳಿರ್ಪನಾನಂದದಿಂ
ಶಶಿಧರನ ಭಕ್ತನಿಕರದ ಭಾಗ್ಯದಂದದಿಂ
ತನ್ನ ಪೆಸರಮರನೀತಿಗಳೆಂಬುದೀ ಜಗಕ್ಕೆ
ತನ್ನ ಸಂಪದವು ಮಿಗಿಲೆನಿಪುದೀ ಕಲಿಯುಗಕ್ಕೆ

ಇಂತಿರ್ದು ಶಿವನನರ್ಚಿಸಲೆಂದು ಮನದಂದು
ಚಿಂತಿಸಿದನೊಂದು ತೆರನಂ ಚಿತ್ತದೊಳಗಂದು
ವಸ್ತ್ರಕ್ಕೆ ಸುಲಭಮಪ್ಪುದು ಭಕ್ತಿ ದಾಸನಿಂ
ವಸ್ತ್ರವಿತ್ತೊಡೆ ಭಕ್ತಿಬರ್ಪುದು ಮಹೇಶನಿಂ
ಎಂದು ತತ್ಸುತನನಾ ವ್ಯವಹಾರದೊಳಗಿರಿಸಿ
ಬಂದನೀಶ್ವರನಾಲಯಕ್ಕೆ ತಾನುರವಣಿಸಿ
ಬಂದು ಭಸಿತೋದ್ಧೂಳನಂ ಮಾಡಿ ನಲವಿಂದೆ
ನಿಂದು ಪ್ರದಕ್ಷಿಣಂ ಮಾಡಿ ಸಂತಸದಿಂದೆ
ರಂಗಮಂಟಪದೊಳ್ ನಮಸ್ಕಾರಮಂ ಮಾಡಿ
ಲಿಂಗಕ್ಕೆ ಪರಿಪರಿಯ ಪೂಜೆಗೆಂದನುಮಾಡಿ

ತರಿಸಿದ ಮಹಾ ಚೀನಿ ಎನಿಪ ವಸ್ತ್ರಾವಳಿಯ
ಹರುಷದಿಂದಂ ಲತಾವಳಿಯ ಪುಷ್ಪಾವಳಿಯ
ನೇತ್ರಾವಳಿಯ ಗಜಾವಳಿಯ ಸಿಂಹಾವಳಿಯ

ಚಿತ್ರಾವಳಿಯ ಸುರಾವಳಿಯ ಹಂಸಾವಳಿಯ
ಬಂದ ದಿಂಡುಗಳನೊಯ್ಯಾರದಿಂದಿರಿಸುತುಂ
ನಿಂದವಂ ನೋಡಿ ಮನದಿಂದಲಂಕರಿಸುತುಂ
ಅವರೊಳಗೆ ಮಿಗಿಲೆನಿಪ ವಸ್ತ್ರಂಗಳಂ ಕೊಂಡು
ನವ ಪುಷ್ಪನಿಕರದಿಂ ಪೊದೆದು ಪರಿಮಳವುಂಡು
ಮಘಮಘಿಪ ವಸ್ತ್ರಂಗಳಂ ತಂದು ತರದಿಂದೆ
ಬಗೆವೆರ್ಚೆ ಪೂಜೆಯಂ ಮಾಡುತುಂ ನಲವಿಂದೆ
ಬಿಳಿಯ ಪಟ್ಟಾವಳಿಯ ಪೊಸ ಸಪುರವಂ ಪೊದಿಸಿ
ತೊಳಗುವ ದುಕೂಲಂಗಳಂ ತೆಗೆದು ಬಿಗಿದುಡಿಸಿ
ಚಂದನದ ಪರಿಮಳವನೊಯ್ಯನೊಯ್ಯನೆ ಪೂಸಿ
ಅಂದು ಕರಣಾಂಗಳಂ ಹರನತ್ತ ಕೈವೀಸಿ
ಇಂಡೆಯಂ ದಂಡೆಯಂ ವಸ್ತ್ರಂಗಳಿಂ ಕಟ್ಟಿ
ತಂಡತಂಡದ ಪೂಜೆಗಳ್ಚಿತ್ತವಂ ಮುಟ್ಟೆ
ಮನದೊಳಗೆ ತರ್ಕೈಸಿ ಮುಂಡಾಡಿ ಕೊಂಡಾಡಿ
ಮುನಿವುತುಂ ಜಿನುಗುತುಂ ಜೀವಿಸುತೆ ನಡೆ ನೋಡಿ
ಹಾರೈಸಿ ಕುಸುಮತತಿಯಾಗೆನಯ್ಯೋ ಎನುತೆ
ಸೀರೆಗಳ ರೂಪಾರವಾಗೆನಯ್ಯೋ ಎನುತೆ
ರಸವೊಸರ್ವ ಗುಗ್ಗುಳದ ಹೊಸ ಕಂಪಿನಿಂ ಸುತ್ತಿ
ಮಿಸುಗುತಿರ್ಪಾ ಬೆಳಗಿನೊಸೆದಾರತಿಯನೆತ್ತಿ
ಸೊಗಯಿಸುವ ದೇವಾನ್ನ ದಿವ್ಯಾನ್ನದೊಳಗಿರ್ಪ
ಮಿಗಿಲೆನಿಸುವಮೃತಾನ್ನ ಷಡ್ರಸಂಗಳೊಳಿರ್ಪ
ಸವಿಗಳಂ ತಂದು ತಂದಾರಯ್ದಲಿಕ್ಕುತುಂ
ನವ ಪರಿಮಳಂಗಳಂ ಕೈಘಟ್ಟಿಗೀವುತುಂ
ಒಂದೆರಡು ಬಣ್ಣದೊರೆ ಬರ್ಪ ಬಿಳಿಯೆಲೆಗಳಂ
ತಂದು ಪೋಳಿಸಿದ ಪರಿಪರಿಯ ಭೋಗಂಗಳಂ
ಪಚ್ಚ ಕರ್ಪೂರದ ಪರಿಮಳದ ಹಳುಕಂಬೆರಸಿ
ಮೆಚ್ಚುತ್ತೆ ಶಿವಗಿತ್ತು ಮನದ ನೇಹಂಬೆರಸಿ
ಇಂತು ಶಂಕರನನರ್ಚಿಸುತಮರನೀತಿಗಳ್
ಸಂತಸದೊಳಿರಲಿತ್ತ ಶಿವಭಕ್ತವಿತತಿಗಳ್



ಬಂದು ತೀವಿತ್ತಲ್ಲಿ ರಂಗಮಂಟಪದೊಳಗೆ
ನಿಂದು ನೆರೆದಿತ್ತು ತೆರಹಿಲ್ಲೆನಿಸಿ ಪುರದೊಳಗೆ
ಉಗ್ರರುಂ ಶಾಂತರುಂ ಮೃದುಗಳುಂ ಮಧುರರುಂ
ವ್ಯಗ್ರರುಂ ನ್ಯಾಯನಿಷ್ಠುರರುಂ ಸಮರ್ಥರುಂ
ನೆರದಮರನೀತಿಯಂ ಪರಸುತಿರ್ಪರ್ ಕೆಲರ್
ಪರಸಲೇಕೆಮಗೋಸುಗೀಯನೆಂಬರ್ಕೆಲರ್
ಆದಡೇನಿಂತಪ್ಪರುಂಟೇ ಎಂಬರ್ಕೆಲರ್
ಮಾದೇವನಿತ್ತೊಡರಿದಾವುದೆಂಬರ್ ಕೆಲರ್
ಇಂತು ನುಡಿವುತ್ತಿರ್ಪ ಗಣನಿಕರಮಂ ಕಂಡು
ಸಂತಸದೆ ಮೆಯ್ಯಿಕ್ಕಿ ನಿಲುತುಂ ಭಯಂಗೊಂಡು

ಆಹ ಎನ್ನಾಳ್ದರಪ್ರತಿಮಃ ಶರಣರ್ಬಂದ
ರಾಹ ಎನ್ನಾನೆಗಳ್ ಎನ್ನ ನಿಧಿಗಳ್ಬಂದ
ರೆಮ್ಮ ಶಂಕರನ ನೆನಹಂಗಳೊಲವಿಂ ಬಂದ
ರೆಮ್ಮ ಶಶಿಧರನ ಸದ್ಭಕ್ತರೆಲ್ಲರ್ಬಂದ
ರೆನುತೆ ಪುಳಕಿಸುತೆ ನಯನಾಶ್ರುವಂ ಸುರಿಸುತ್ತೆ
ಮನವಾರೆ ಇದಿರ್ಗೊಂಡು ಕೈಗಳಂ ಮುಗಿವುತ್ತೆ
ಕೂಡೆ ಘನ ಸಿಂಹಾಸನವನಿಕ್ಕಿಯುರ್ಬುತ್ತೆ
ನೋಡಿ ದಳವೇರುತ್ತೆ ಕೊಂಡಾಡಿ ಕರಗುತ್ತೆ
ನೆವದಿಂದೆ ಸೋಂಕುತುಂ ನುಡಿಸಿ ಮೈವೆರ್ಚುತುಂ
ಪವಣಿಲ್ಲದುತ್ಸಾಹದಿಂದುರ್ಕಿ ಸೊರ್ಕುತುಂ
ಬಂದ ಗಣಮಧ್ಯದೊಳ್ನಿಂದು ದಿಂಡಂಬಿಡಿಸಿ
ಸಂದಣಿಪ ಪಟ್ಟಾವಳಿಯನೊಪ್ಪದಿಂದಿರಿಸಿ

ಏನೇನನೆಳಸಿದರ್ಗಿಮ್ಮಡಿಯನೀವುತುಂ
ಮೌನದಿಂದಿರ್ದರ್ಗೆ ನಾಲ್ಮಡಿಯನೀವುತುಂ
ಆನಂದವಿಮ್ಮಡಿಸಿ ನೂರ್ಮಡಿಯನೀವುತುಂ
ನಾನಾ ಮುಖಂಗಳಿಂ ಪೆರ್ಚಿ ಪಿರಿದೀವುತುಂ
ಪುಳಕಿಸುತ್ತೀವುತುಂ ಪುಟವೇಳುತೀವುತುಂ
ದಳವೇರುತೀವುತುಂ ತೊಳತೊಳಗುತೀವುತುಂ

ಕೊಂಡವರ್ತಲೆದೂಗಿ ಬೆರಗಾಗಲೀವುತುಂ
ಕಂಡವರಿದದ್ಭುತದ ದಾನವೆನಲೀವುತುಂ
ಕುಣಿದಾಡುತೀವುತುಂ ಮಣಿದಾಡುತೀವುತುಂ
ಎಣಿಕೆಗೆಟ್ಟೀವುತುಂ ಗಣಕುಲಕ್ಕೀವುತುಂ
ದೇವಾಂಗ ವಸ್ತ್ರಮಂ ದೇವರ್ಗೆ ಈವುತುಂ
ಆವುದಾನೊಳ್ಳಿತಂ ಕೋವಣಕ್ಕೀವುತುಂ
ಅನ್ನಂ ಸುವರ್ಣಂ ಸುವಸ್ತ್ರಮುಮನೀವುತುಂ
ಎನ್ನನೀವೆಂ ಬೇಳ್ಪರಿಲ್ಲೆಂದು ಸುಯ್ವುತುಂ
ಮನೆಯ ಮಕ್ಕಳ್ಗೆ ಸತಿಯರ್ಗೆಯುಡಲೀವುತುಂ
ನೆನೆದರ್ಗೆ ನುಡಿದರ್ಗೆ ಬೇಡಿದರ್ಗೀವುತುಂ
ಕೊಡಕಲಸಿಯುಂ ಕೊಡಿಸಿಯುಂ ಕೊಟ್ಟುವುಂ ದಣಿಯ
ಉಡಕಲಿಸಿಯುಂ ಉಡಿಸಿಯುಂ ತೊಡಿಸಿಯುಂ ದಣಿಯ

ಇಂತಿಂತು ಪಲಕೆಲವು ವತ್ಸರಂ ಮಾಡುತಿರೆ
ಅಂತಂತು ದಿನದಿನಕೆ ಮಿಗಿಲೆನಿಸಲೀವುತಿರೆ
ಇಲ್ಲಿ ಭಕ್ತರ್ಗೆ ಮಾಡಿತ್ತು ಕೈಲಾಸಕ್ಕೆ
ಪಲ್ಲವಿಸಿ ಪರ್ವಿ ಹರನಡಿಗಯ್ದುವನಿತಕ್ಕೆ
ಪೊದೆದ ಗಜಚರ್ಮವುಂ ಪಟ್ಟಾವಳಿಯದಾಗೆ
ಪುದಿದುಟ್ಟ ಪುಲಿದೊವಲ್ ದೇವಾಂಗ ತಾನಾಗೆ
ಹರನರಸಿಯುಟ್ಟುದುಂ ಪಟ್ಟಾವಳಿಯದಾಗೆ
ಹರನ ಗಣ ಉಟ್ಟು ಪೊದೆದಿರ್ದುವುಂ ತಾವಾಗೆ
ಕಾಣುತೆ ವಿರೂಪಾಕ್ಷನತಿ ಕೌತುಕಂಬಟ್ಟು
ಕ್ಷೋಣಿಯೊಳಗಿದು ಪೊಸತೆನುತ್ತೆ ಹರುಷಂಬಟ್ಟು

ಪೋಗಿ ನೋಡುವೆನಮರನೀತಿಗಳ ಭಕ್ತಿಯಂ
ರಾಗದಿಂದೆನ್ನವರ್ಗೀವ ನವ ಯುಕುತಿಯಂ
ಕಂಡೊರೆದು ತೂಗಿ ನೋಡುವೆನವನ ಭಕ್ತಿಯಂ
ಕೊಂಡು ಬರ್ಪೆಂ ಕರುಣದಿಂದಮರನೀತಿಯಂ

ಎಂದು ಶಂಕರನೊಂದು ವೇಷಮಂ ಕೆಯ್ಕೊಂಡು
ಅಂತು ಶತವೃದ್ಧಭಾವವನೊಪ್ಪಿ ಕೆಯ್ಕೊಂಡು



ಎಳಲ್ವಕಿವಿ ತೆರೆಮೊಗಂ ಜೋಲ್ವ ಪುರ್ವಿಂದೆಸೆಯೆ
ನಳಿತ ಬೆನ್ ಊತಗೋಲ್ತುದಿಯ ಕೋವಣವೆಸೆಯೆ
ನಡೆತಂದನಂದೊಲ್ದು ನೊಸಲಭಸಿತದಿನೊಪ್ಪೆ
ನಡೆತಂದನುರವಣಿಸಿ ಚೋಳದೇಶದೊಳೊಪ್ಪೆ

ಬಂದಮರನೀತಿಗಳ ಪುರವನೊಲವಿಂ ಪೊಕ್ಕು
ಸಂದ ಹೊಸವೀಥಿ ವೀಥಿಗಳೊಳ್ಮನಂ ಮಿಕ್ಕು
ಬರುತೆ ಮುಂದಣ ಶಿವಾಲಯದೊಳೆಸೆದಿರ್ದನಂ
ನೆರೆದ ಗಣತಿಂಥಿಣಿಯ ನಡುವೆ ಕುಳ್ಳಿರ್ದನಂ
ಬೆಳಪ ಚಂದ್ರಿಕೆಗಳೊಳಗಿರ್ಪ ಚಂದ್ರಮನಂತೆ
ತಳತಳಿಪ ದೀಪ್ತಿಗಳ ನಡುವಿರ್ಪ ರವಿಯಂತೆ
ಶಿವಭಕ್ತನಿವಹದೊಳಗಿರ್ಪಮರನೀತಿಯಂ
ಭವನ ಸದ್ಭಕ್ತಿವರ್ಧನಕರ ಖ್ಯಾತಿಯಂ
ಕಂಡು ಶಿವಭಕ್ತಸಂತತಿ ಇರಲ್ಕೈಗರೆದು
ತಂಡತಂಡದ ಸಂತಸಂ ಮಿಗಲ್ನಡೆತಂದು
ಮೆಲ್ಲಮೆಲ್ಲನೆ ಶಿವಾಲಯದೊಳಗಮೆಯ್ತಂದು
ಅಲ್ಲಿ ಸಂಭ್ರಮಿಪ ಶರಣರನೀಕ್ಷಿಸುತ್ತಂದು
ಗೋಂಟನೊಳ್ಕುಳ್ಳಿರ್ದು ನೋಡಿ ಮಿಗೆ ಮೆಚ್ಚುತುಂ
ನಾಂಟಿ ಶಿವಭಕ್ತಿ ಪಲ್ಲವಿಸಿ ಮೈವೆಚ್ಚುತುಂ

ಇರಲಮರನೀತಿ ಎಂದಿನ ಪರಿಯೊಳೀವುತುಂ
ಹರನ ಭಕ್ತರ್ಗೆ ಪಟ್ಟಾವಳಿಯನುಡಿಸುತುಂ
ಬೇಡಿದುದನಿತ್ತು ಸದ್ಭಕ್ತರಂ ತಣಿಸುತುಂ
ಕೂಡೆ ಗಣಸಂತತಿಗೆ ಇತ್ತಿತ್ತು ತಣಿಸುತುಂ
ಇಂತು ಮೂರುಂ ಜಾವ ಪರಿಯಂತ ಒಲಿದಿತ್ತು
ಸಂತತಂ ಶಿವನ ಭಕ್ತರ ಕರುಣಮಂ ಪೊತ್ತು
ಎಲ್ಲರಂ ತಣಿಸಿ ಕೆಲಬಲನುಮಂ ನೋಡುತುಂ
ಅಲ್ಲಿ ಗೊಂಟನೊಳಿರ್ದ ಭಕ್ತನಂ ಕಾಣುತುಂ
ಇತ್ತ ಬನ್ನಿರೆ ದೇವ ಎನುತೆ ಹತ್ತಿರೆ ಕರೆದು
ಹೊತ್ತು ಹೋದುದು ಸುಮ್ಮನೇಕಿರ್ದಪಿರಿ ಎಂದು

ಇತ್ತಲಾ ಕೋವಣವನೊಂದು ದಿಂಡಿನೊಳಿರಿಸಿ
ಚಿತ್ತದೊಳ್ಕೌತುಕಂಬಡುತುಂ ನಮಸ್ಕರಿಸಿ
ಅಮರನೀತಿಗಳಾಗಳರಮನೆಗೆ ನಡೆತಂದು
ನಮಗಿಂದು ಕಟಕಿಯಾಡಿಸಿದನೀಶ್ವರನೆಂದು
ಚಿತ್ತಕ್ಕೆ ಹೊಲೆಯಿಲ್ಲದದ್ಭುತವಿದೇನೆಂದು
ಚಿತ್ತದೊಳ್ ಬಂದ ಭಕ್ತನ ಭಾವವೇನೆಂದು
ಭಕ್ತನಾಡಿದ ಮಾತು ಮನದೊಳಗೆ ನಟ್ಟಿರಲ್
ಯುಕ್ತಿ ಹೊಪ್ಪವ ಭಕ್ತನಂದಿರುಳ್ಪಟ್ಟಿರಲ್

ಶಿವನುದಯಮಂ ಸೂಚಿಸುವ ತೆರದೊಳೆಯ್ತಂದು
ರವಿಯುದಯಮಾಗಲೆಲ್ಲಮರನೀತಿಗಳಂದು
ದೇವಾಲಯಕ್ಕಂದಿನಂದದಿಂ ನಡೆತಂದು
ದೇವರ್ಗೆ ಸಕಲ ವಸ್ತ್ರವ ಪೂಜೆಗೈತಂದು
ಪೊಡೆವಟ್ಟು ರಂಗಮಂಟಪದೊಳಗೆ ಕುಳ್ಳಿರ್ದು
ಮೃಡನ ಶರಣರ್ನೆರೆದು ಸಂತಸಂಬಡುತಿರ್ದು
ನಾಲ್ಕೆರಡು ಸಾವಿರಂ ಮುಂಗುಡಿಯ ಬರಲಲ್ಲಿ
ನಾಲ್ಕು ಭುಜವಾಗುತ್ತಲಮರನೀತಿಗಳಲ್ಲಿ
ಘುಳುಘುಳಿಪ ಗಣಸಂಕುಳದ ನಡುವೆ ಕುಳ್ಳಿರಲ್
ಗಳಗಳನೆ ಕಚ್ಚುಟದ ಭ್ರಾಂತ್ಯೈತರುತಿರಲ್
ಅನಿಮಿತ್ತವಮರನೀತಿಯ ಬಲದ ಕಣ್ಕೆತ್ತೆ
ತನು ಹರುಷವೇರಿ ಸಾಲ್ಗೊಂಡು ಪುಳುಕವನೆತ್ತೆ
ಕುಳ್ಳಿರ್ದ ಶಿವನ ಸದ್ಭಕ್ತರಂ ದಾಂಟುತುಂ
ತಳ್ಳಂಕದಿಂದುರವಣಿಸಿ ಬಂದು ತೇಂಕುತುಂ

ಕೊಡು ಕೋವಣವನೆಮ್ಮ ನೆರವು ಪೋದಪುದತ್ತ
ತಡೆಯಬಾರದು ಎಮ್ಮ ಭಕ್ತರಿರ್ದಪರತ್ತ
ತಾ ತಾರೊ ಹೂಂ ತಾರೊ ತಡವೇಕಿದೇಕೆಂದೆನುತೆ
ಆತುರದ ಭಕ್ತನಂ ನೋಡಿ ಬೆರಗಾಗುತ್ತೆ
ಕಚ್ಚುಟಕೆ ತಕ್ಕುದಲ್ಲೈ ಇನಿತು ಸಂಭ್ರಮಂ
ಒಚ್ಚೈಸೈರಿಸು ದೇವ ಕೊಡುವೆನಾ ಕೌಪುಮಂ



ಎಂದು ಬಯ್ತಿಟ್ಟ ದಿಂಡಂ ತೆಗೆದು ನೋಡುತುಂ
ಅಂದಲ್ಲಿ ಕಾಣದೆ ಮನಂಗುಂದಿ ಬಾಡುತುಂ
ಎಲ್ಲ ದಿಂಡುಗಳೊಳಗೆ ಲೇಸಾಗಿ ನೋಡುತಿರೆ
ಎಲ್ಲಿಯುಂ ಶಿವನ ಕೌಪಿನ ಸುದ್ದಿ ಇಲ್ಲದಿರೆ
ಕಂಡು ಶಿವಭಕ್ತನುರಿದೆಳ್ದು ಬಸಿರಂ ಪೊಸೆದು
ಕಂಡಿರೇ ಯಮರನೀತಿಗಳ ಪರಿಕರಮರಿದು
ನಿನ್ನೆ ಕಚ್ಚುಟವ ಬಯ್ತಿಟ್ಟ ಕೊಡು ನೀನೆಂದು
ತನ್ನ ಕೈಯ್ಯೊಳ್ಕೊಡಲ್ಕೊಂಡು ಕೆಟ್ಟತ್ತೆಂದು
ನುಡಿವ ಪರಿಯಂ ಕೇಳ್ವರೇ ಭಕ್ತಜನವೆಲ್ಲ
ಕಡೆಯಲೆನ್ನಂ ಹೊಲ್ಲಮೆನಲಾಗದಿನ್ನೆಲ್ಲಿ
ಎನಲಮರನೀತಿಗಳೆ ದೇವ ನಾಂ ಕೊಂಡೆನೇ
ತನಗೆ ತಾನೇ ಕೆಟ್ಟು ಪೋದುದಂ ಬಲ್ಲೆನೇ
ಇದಕೆ ನೀಮಿನಿತಾಸುರಂ ಮಾಡವೇಳ್ಕುಮೇ
ಇದೆ ಕೊಳ್ಳಿ ನಾಲ್ಕೈಯ್ದು ಸಮಕಟ್ಟು ಸಾಲ್ಗುಮೇ

ಎಂದು ಪಟ್ಟಾವಳಿಯ ಸಮಕಟ್ಟನೀವುತಿರೆ
ನಿಂದೊದೆದು ಬಿದ್ದಿರ್ದ ನೆರೆದ ಸಭೆ ನಡುಗುತಿರೆ
ಎಲವೊ ಪಟ್ಟಾವಳಿಯ ಗಿಟ್ಟಾವಳಿಯ ಪವಣೆ
ಎಲವೊ ನೇತ್ರಾವಳಿಯ ಗೀತ್ರಾವಳಿಯ ಪವಣೆ
ಎನಗೆನ್ನ ಕೌಪು ಸಾಲ್ವುದು ಕುಡುಕುಡೆಂದೆನುತೆ
ನಿನಗದರ ಮಹಿಮೆಯರಿಯದು ಸುರ್ದಪೆನೆಂದೆನುತೆ
ಇರಲರಿಯೆ ನೀನದರ ಕಚ್ಚುಟದ ಮಹಿಮೆಯಂ
ಇರಿಸುವಲ್ಲಿಂ ಮುನ್ನ ಕಚ್ಚುಟದ ಮಹಿಮೆಯಂ
ಮಹಿಮೆಯಲ್ಲಿದು ಬರಿಯ ಕಚ್ಚುಟಂ ಕೊಡು ತಂದೆ
ಕುಹಕವೇಕೈ ಭಕ್ತರೊಡವೆಯಂ ಕುಡು ತಂದೆ
ಕುಡುವುದುಂ ಕೊಂಬುದುಂ ಸಿರಿವಂತ ಭಕ್ತರೊಳ್
ನುಡಿವುದೈ ನುಣ್ಣನೆಯ ಮಾತನಾ ಭಕ್ತರೊಳ್
ಎಮಗಿನಿತು ವೇಳ್ವುದೇ ಸಿರಿಯ ಗರ್ವದ ನೆರವು
ನಿಮಗೆ ಗುಣವೇ ಕೊಂಡು ಕುಡಲಿಲ್ಲದಿರ್ಪಿರವು
ಏನೆಂದೊಡಂ ಸುಮ್ಮನಿರ್ದನಮರರನೀತಿ
ಏನೀಯೆಯೊರಲುತ್ತಲಿರ್ಕೆಂಬುದೇ ನೀತಿ

ಇನ್ನೊರ್ವ ಬೇಡುವೆಂ ಕಾಡದೆ ನಿಂದೊಡೆ ಬಳಿಕ
ಎನ್ನಸುವನೊಪ್ಪಿಸುವೆ ನಿನಗೆ ಸಂತಸ ಬಳಿಕ
ಮೆನ್ನನೆಮ್ಮಯ ಭಕ್ತರರಸಿಕೊಳ್ವವರುಂಟು
ನಿನ್ನ ಪವಣಲ್ಲ ಕೇಳ್ನನಗೆ ಬಲ್ಲಿದರುಂಟು
ಎನುತಲಟ್ಟಾಸುರಂ ಮಾಡುತಿರೆ ಬೆರಗಾಗಿ
ತನತನಗೆ ಭಕ್ತರೆಲ್ಲರ್ಸುಯ್ದು ಸಿಗ್ಗಾಗಿ

ಎನೆ ಶರಣರೆಲ್ಲಂದು ಕೂಡೆ ಮುಮ್ಮಳಿಗೊಂಡು
ತನತನಗೆ ನಲಿದು ಉಲಿವ ಭಕ್ತನ ಕಂಡು
ಭಕ್ತರ್ಗೆ ಮಾಡುವದನಿಂದು ಮಾಣಿಸಿದನೇ
ಭಕ್ತರೆಲ್ಲರ ಪಾಪವಂ ಕಟ್ಟಿಕೊಂಡನೇ
ಕಚ್ಚುಟಕೆ ಪಡಿಯು ದಿಂಡುಗಳನಿತ್ತೊಡೆಯೊಲ್ಲ
ನಚ್ಚರಿಯಿದೇನೆಂಬ ಪರಿಯನೀಶ್ವರ ಬಲ್ಲ
ನೆಂದೆಲ್ಲರೊಂದನಾಳೋಚಿಸಿದರಂದಿಂಗೆ
ಇಂದಮರನೀತಿ ಬರ್ದುಕಿದೊಡೆ ಸಾಲ್ಗಿಂದೆಮಗೆ
ಭಕ್ತನೇಕಗ್ರಾಹಿ ಕೌಪನಲ್ಲದೆಯೊಲ್ಲ
ಯುಕ್ತಿ ಕೊಳ್ಳದು ಹಿಡಿದ ಮುಷ್ಟಿಯಂ ಬಿಡಲೊಲ್ಲ
ನಿದಕೆ ಸಾವಿರ ಹೊನ್ನದೊಂದು ಹೊಸ ಕೌಪುವಂ
ಮುದದಿಂದಲಿತ್ತು ಭಕ್ತನ ಮನದ ಚಲಮುಮಂ
ಬಿಡಿಸುವೆವೆನುತ್ತೆಲ್ಲರೆಂದರಾ ಭಕ್ತಂಗೆ
ಮೃಡನ ಭಕ್ತರ್ನುಡಿದರಾ ಕಪಟ ಭಕ್ತಂಗೆ
ಎಮ್ಮ ಮಾತಂ ಸಲಿಸವೇಳ್ಕುಮಿಂದಲೆ ದೇವ
ಎಮ್ಮೆಲ್ಲರಂ ನೊಡವೇಳ್ಕುಮಿಂದೆಲೆ ದೇವ
ನಿನ್ನ ಕಚ್ಚುಟಕೆ ಪವಣಪ್ಪೊಂದು ಸಾವಿರದ
ಹೊನ್ನ ಕೌಪಂ ಕೊಂಡು ನಯದಿಂದಲೀ ನೆರೆದ
ಭಕ್ತರ್ಗೆ ಸಂತಸಂ ಮಾಡಬೇಕೆನುತಮಿರೆ
ಭಕ್ತನಳ್ಳಿರಿದೇಳೆ ನಿಂದ ಸಭೆ ನಡುಗುತಿರೆ

ಕೋಪಿಸುತೆ ಕಂಪಿಸುತೆ ಮಾಮಸಕದಿಂ ಮಸಗಿ
ಶಾಪಿಸುತೆ ತಾಪಿಸುತೆ ಮಿಗೆ ಮುಮ್ಮಲಂ ಮರುಗಿ



ಅಯ್ಯ ಭಕ್ತರಿರ ಮಿಗೆ ಲೋಗರಿಂಗೆ ಮುಗ್ಧರೇ
ಅಯ್ಯ ನಿಮ್ಮತ್ತಲಾಗಲು ನೆರೆ ವಿದಗ್ಧರೇ
ಕುಡುವವನಪೇಕ್ಷೆಯುಪ್ಪುದನೇಕೆ ಮಾಣ್ಬಿರೇ
ಬಡವನುಮನಾಥನೇಕೆನ್ನತ್ತಲಪ್ಪಿರೇ
ಅದು ನೋಟಕದ ಕಚ್ಚುಟವೆಯೆಂದು ಬಗೆದಿರೇ
ಅದು ಪರುಷವೆನಗೆ ಚಿಂತಾಮಣಿವ್ರಜವೆನಗೆ
ಅದು ಕೋವಣವೆ ಸುರಭಿಗಳ್ಗೆ ದಾವಣಿ ಯೆನಗೆ
ಅದು ಕೋವಣವೆ ಕಲ್ಪಲತೆಯ ಕೋವಣವೆನಗೆ
ಕೋವಣವೆಯಭಿಮಾನಗೆಕ್ಕಲಾವಣಿಯೆನಗೆ
ಪೊ ಪೋ ಪೋ ಅಂತದಕೆ ಹೊನ್ನ ಕಚ್ಚುಟವೆನಗೆ
ಕೊಡಲೆಂದು ಬರ್ಪಿರೇ ಹೈಕ್ಕೊಳ್ಳದಿರ್ಪೆನೇ
ನಡುವೆ ಮಧ್ಯಸ್ಥರಾಗಿರ್ಪಿರೇನರಿಯೆನೇ
ಇವರನೇ ಕೈತೋರುತಿರ್ಪೆಯಮರನೀತಿ
ಇವರ ಕೈಯ್ಯೊಳು ಕೊಟ್ಟೆನೇ ಪೇಳಮರನೀತಿ
ಎನುತಲಟ್ಟಾಸುರಂ ಮಾಡುತಿರೆ ಬೆರಗಾಗಿ
ತನತನಗೆ ಭಕ್ತರೆಲ್ಲಂ ಸುಯ್ದು ಸಿಗ್ಗಾಗಿ
ಇವರೇಕೆ ನೀನೇಕೆ ಕೌಪೇಕಮರನೀತಿ
ಇವರನಿನ್ನೇನೆಂದೊಡಂ ನಮಗಪಖ್ಯಾತಿ
ಎಂಬ ನುಡಿಗೇಳ್ದಮರನಿತಿಗಳ್ಮಿಗೆ ನೊಂದು
ಇಂಬಿಲ್ಲ ನುಡಿಗೆಯನ್ಯಾಯವೆನ್ನದೆ ಯೆಂದು
ಕೊಟ್ಟರಿವರೊಂದು ಕೌಪಂ ಕೊಂಡೆನಾನದಂ
ಕೆಟ್ಟುದಪರಾಧಿಯಾನಿಂತಿದಕೆ ತಕ್ಕುದಂ
ಮಾಡುವರಿವರ್ಮಾಡಿಸಿಯೆ ಕೊಳ್ವೆ ನಾನೆಂದು
ಕಾಡುವರಿವರ್ಕಾಡಿಸಿಯೆ ಕೊಳ್ವೆ ನಾನೆಂದು
ನೀವೆಲ್ಲರುಂ ಬಳಲ್ದಿರಿ ಪಸಿದಿರೆಂದೆನುತೆ
ಆನವರ್ಮಾಡಿದಂತಾದಪ್ಪೆನೆಂದೆನುತೆ
ನುಡಿಯೆ ಭಕ್ತರ್ ಮರುಗಿಯೆಮ್ಮ ವಶವಲ್ಲಮಿದು
ಮೃಡನೆ ಬಲ್ಲಂ ಮಿಕ್ಕವರ್ಗರಿಯಬಾರದಿದು

ಎನುತೆಲ್ಲರೇಳಲುದ್ಯುತರಾಗೆ ಶಂಕರಂ
ನೆನೆದನಿಂತಿವರೇಳಲಾಗದೆನುತೀಶ್ವರಂ

ಪೋಗದಿರಿ ನೀವೆಲ್ಲ ನಾನೊಂದನೆಂದಪೆಂ
ರಾಗದಿಂ ನೀವೆಂದ ಮಾಳ್ಕೆಯಿಂ ಬಂದಪೆಂ
ಕೋವಣವನೀತನಾವರ್ತದಿಂದಂ ಕೊಡಂ
ನೀವೆಲ್ಲರುಂ ನೋಡಲೇಸುವನೊಡಂಬಡಂ
ಆತಂಗೆ ಛಲವಾದೊಡೆನಗೆ ಛಲವೊಪ್ಪುವುದೆ
ಆತನೊಳ್ಮಗುವಿನೊಳ್ಗುಣದೋಷವರಸುವುನೆ
ಬೇಡಿನ್ನದೇಕೆ ಭಕ್ತರ ನಿರೋಧವವೆನಗೆ
ಕಾಡಲೇಕೀತನಂ ನೀವೆಲ್ಲರುಮನೆನಗೆ
ನಿಮ್ಮಯ ನಿರೋಧಮಂ ಮಾಣಿಸುವೆನಿನ್ನೊಂದು
ಎಮ್ಮ ಮಾರುಡೆ ಕೌಪು ಬೇರೆಯಿದೆ ಮತ್ತೊಂದು
ಇದರ ತೂಕಕ್ಕೆ ಸರಿ ತೂಕವಿತ್ತೊಡೆ ಸಾಲ್ಗು
ಮವರ ಹಂಬಲು ಬೇಡ ಭಕ್ತಂಗೆ ನೆರೆ ಸೋಲ್ಗು

ಮನೆ ಶರಣರೆಲ್ಲರು ಕೂಡೆ ಹರುಷಂದಳೆದು
ಮನದೊಳಗೆ ಗುಡಿಗಟ್ಟೆ ಸಂತೋಷಮಂ ತಳೆದು
ಅಮರನೀತಿಗಳನಾಲಿಂಗಿಸಿ ಸುಖಂ ಬಡೆದು
ನಿಮಗೆ ದೇವರ ಕರುಣಮುಂಟೆಂದು ನಲಿನಲಿದು
ತೀರಿತೆಂದೇ ಬಗೆದು ನೆಗೆದು ನಲಿದಾಡುತುಂ
ಮಾರಾರಿ ಮಾಡುವುದನರಿಯದೊಲೆದಾಡುತುಂ
ತರಿಸು ತರಿಸು ತ್ರಾಸನೆನುತೆ ಸಂಭ್ರಮಿಸುತ್ತೆ
ಹರನಿಂತು ಕರುಣಿಸಿದನೇ ಎಂದು ಹಿಗ್ಗುತ್ತೆ
ಇರೆ ಬಂದುದೊಂದು ಕಿರಿಯ ತ್ರಾಸುಮಂ ಪಿಡಿದು
ಇರಿಸಿ ಕೋವಣದ ಭಾರಕ್ಕೆ ಹಲ್ಲೆಗಳೊಡೆದು
ಶತಚೂರ್ಣಮಾಗೆ ಮತ್ತೊಂದು ಪಿರಿದಪ್ಪುದಂ
ಅತಿ ಭರದೆ ತಂದಿರಿಸೆ ಮಿಗೆ ಬಲ್ಲಿತಪ್ಪುದಂ
ಅದರೊಳಗೆ ಕಚ್ಚುಟವನಿರಿಸಲನುರಾಗದೊಳ್
ಅದು ನುಚ್ಚುನೂರಾಗೆ ಕಂಡಮರನೀತಿಗಳ್
ಬರಿಯ ಕಚ್ಚುಟಮಲ್ಲ ಕಂಡೆನಿದರಂದಮಂ
ಪೊರಗೆ ನಡೆಯಿರಿ ತೋರ್ಪೆನಾ ಮಾಡುವಂದಮಂ
ಎಂದು ಶಿವರಾಜಾಂಗಣದ ಮುಂದೆ ಪೊರಮಟ್ಟು



ತಂದೆರಡು ಮುಗಿಲ ಮುಟ್ಟುವ ಕಂಬಮಂ ನೆಟ್ಟು
ಶಿವಶಾಸನಸ್ತಂಭಮಂ ತಂದು ನೆಡುವಂತೆ
ಭವನ ಭಕ್ತಿಯ ನೀಳ್ದ ನಿಷ್ಠೆಯಂ ನೆಡುವಂತೆ
ನಟ್ಟನಡುವೊಂದಸಿಯ ತೊಲೆಯನಡ್ಡಂ ನಿಲಿಸಿ
ಕಟ್ಟಿದಂ ಕಾರ್ಬೊನ್ನಸಂಕಲೆಗಳಂ ತರಿಸಿ
ಅದರ ತುದಿಯೊಳಗೆರಡು ಕೊಪ್ಪರಿಗೆಯಂದದಿಂ
ಹವಣಿಸುವ ಹಲ್ಲೆಯಂ ಲಂಬಿಸಲ್ಕೆಂದದಿಂ
ಇಂತು ಭಕ್ತಿಯನೆ ತೂಗುವ ತೊಲೆಯನಳವಡಿಸಿ
ಮುಂತೆ ನಿಚ್ಚಣಿಗೆಗಳನೊಂದೆರಡನಳವಡಿಸಿ
ಯಯ್ಯ ಬಾರೈ ಇರಿಸು ನಿನ್ನ ಕೋವಣಮುಮಂ
ಅಯ್ಯಯ್ಯ ನೋಡಲಿಕ್ಕೇನದರ ತೂಕಮಂ
ಎಂದು ನುಡಿಯಲ್ಕೆ ಮಿಗೆ ಮನದೊಳಗೆ ನಸುನಗುತೆ
ತಂಡಿಕ್ಕಿದಂ ತ್ರಾಸಿನೊಳಗೆ ಕೌಪಂ ನಗುತೆ
ಇಕ್ಕೆ ನೆಲನಂ ಹತ್ತಿತೊಂದೆಸೆಯ ಹಲ್ಲೆಯದು
ಮಿಕ್ಕು ನೆಗೆಯಿತ್ತು ತಾರಾಪಥವ ಮತ್ತೊಂದು
ನೆಗೆಯೆ ನಿಚ್ಚಣಿಕೆಗಳನಿಟ್ಟು ನಲವಿಂದೇರೆ
ಜಗವೆಲ್ಲ ಮಿಗೆ ಪೊಸತು ಪೊಸತೆನುತಿರಲ್ಕೇರಿ

ಪಳಿಯ ಪಟ್ಟಾವಳಿಯ ದಿಂಡುಗಳನೊಟ್ಟುತಿರೆ
ತೊಳತೊಳಪ ದಿವ್ಯ ವಸ್ತ್ರಾವಳಿಯನೊಟ್ಟುತಿರೆ
ಹಲ್ಲೆ ಚಲಿಸದೆ ತೊಲಗದಲುಗದಲ್ಲಾಡದಿರೆ
ಅಲ್ಲಲ್ಲಿ ಪುರಜನಂ ಕಂಡು ಬೆರಗಾಗುತಿರೆ
ನೆರೆಯ ವ್ಯವಹಾರಿಗಳ ವಸ್ತ್ರಮಂ ತಂದಿರಿಸಿ
ಪುರದೊಳಗೆವುಳ್ಳ ವಸ್ತ್ರವನೆಲ್ಲ ತಂದಿರಿಸಿ
ಅಳವಡಿಸಿ ಮೇಲೆ ಮೇಲನುವಾಗಲೊಟ್ಟುತಿರೆ
ತೊಲಗದತ್ತಿತ್ತ ಚಲಿಸದೆ ಹಲ್ಲೆ ಮಿಡುಕದಿರೆ
ಕಂಡಮರನೀತಿಗಳ ಮನೆಯೊಳುಳ್ಳರ್ಘಮಂ
ತಂಡತಂಡದ ರತ್ನಖಚಿತದಾಭರಣಮಂ
ಪೊತ್ತಡಕಿ ತಂದು ಬೆಟ್ಟದ ತೆರದೊಳೊಟ್ಟುತಿರೆ
ಮತ್ತೆ ನೆಲದೊಳಗೆ ನೆಟ್ಟ ತೆರನಂತೆ ಚಲಿಸದಿರೆ

ಬೇಳಾಗಿ ಬೆಂಡಾಗಿ ಯಮರನೀತಿಗಳೆಂದು
ಹಾಳಾದ ಕಚ್ಚುಟವಿದೆಂತು ಸಾರಿತ್ತೆಂದು
ನೋಡಿ ಮನದೊಳಗೆ ತಲೆದೂಗಿ ಬೆರಗಾಗುತಿರೆ
ನೋಡುವ ಜನಂ ಕೌತುಕಂಬಟ್ಟು ಸುಯ್ಗರೆವುತಿರೆ

ಪುರಜನವ ಪರಿಜನವ ಸುಡಬಂದುದೀ ಕೌಪು
ನೆರೆದವರ ನಿಂದವರನಂಜಿಸಿತ್ತೀ ಕೌಪು
ಏನೇಳ್ವೆನಿದು ಮಾಯೆ ಯೆಂದು ನುಡಿವರ್ಕೆಲರ್
ದೇವನೊಲವಿಂ ಕಾಡಬಂದನೆಂಬರ್ಕೆಲರ್
ಆವುದರಿದಮರನೀತಿಗಳ್ಗೆ ಯೆಂಬರ್ಕೆಲರ್
ಈವನಂ ಕೆಡಿಸಿದಂ ಪಾಪಿ ಎಂಬರ್ಕೆಲರ್
ಇಂತು ಭಕ್ತರ್ಗಿತ್ತ ಫಲವಿದೆಂಬರ್ಕೆಲರ್
ಎಂತಪ್ಪುದಕಟ ಎನ್ನುತವಿರ್ಪವರ್ಕೆಲರ್
ಇಂತು ಜನವೆನುತವಿರಲಮರನೀತಿಗಳೆಂದು
ಚಿಂತಿಸಿದನೊಂದ ಶಿವನೊಲ್ವ ತೆರನಂ ನಿಂದು
ಅರಿದೆನರಿದೆಂ ಇದಕೆ ಸರಿತೂಕವಂ ಕಂಡೆ
ನರಿದೆನಿಂತಿದಕೆ ತಕ್ಕುಪಮಾನವಂ ಕಂಡೆ
ನೀ ಭಕ್ತನೆಡೆಕೆಡೆಯ ಭಕ್ತನಲ್ಲಂ ನೋಡ
ಈ ಭಕ್ತನಂ ಮೆಚ್ಚಿಸುವೆನೀಗಳುಂ ನೋಡ

ಎಂದು ತನ್ನಯ ಸತಿಯುಮಂ ಪುತ್ರನಂ ಕರಿಸಿ
ಬಂದ ಮಗನಂ ನೋಡಿ ಬಿಗಿಯಪ್ಪಿ ಮಿಗೆ ಹರಿಸಿ
ಮಗನೆ ನೀ ಮಾಳ್ಪ ಬೆವಹಾರವದು ಸಾಲ್ಗಯ್ಯ
ಮಗನೆ ಕುಡುವುದು ಕೊಂಬುದುಂ ಪೂರ್ಣವಿಂದಯ್ಯ
ಕೇಳಯ್ಯ ಮಗನೆ ಭಕ್ತರ್ಗೆ ಬೆಸಕೆಯ್ವುದುಂ
ಶೂಲಿ ತಾನೇ ಕೊಂಡನೇನೆಂಬೆನಿಂತಿದಂ
ಕಚ್ಚುಟಕ್ಕಾಳಾದೆವಾವೆಲ್ಲರುಂ ಮಗನೆ
ಯೊಚ್ಚತಂಗೊಂಡ ಭಕ್ತಂ ನಮ್ಮನೆಲೆ ಮಗನೆ
ಅರ್ಥಿಯುಮನೊಪ್ಪಮುಂ ಕೆಡಿಸಿತ್ತು ಕೋವಣಂ
ಅರ್ಥಮುಮನೆಮ್ಮುಮಂ ಕೊಂಡುದೀ ಕೋವಣಂ
ಇನ್ನಂಜಲಾಗದೆಲೆ ಕಂದ ಕಲಿಯಾಗೆನುತೆ



ತನ್ನ ಕೆಯ್ಮುಟ್ಟಿ ಭಸಿತಮನೆಯುದ್ಧೂಳಿಸುತೆ
ರುದ್ರಾಕ್ಷಿಗಳನಿಕ್ಕಿ ಪೊಸ ದುಕೂಲಮನುಡಿಸಿ
ರುದ್ರನೇ ಬಲ್ಲನೆಂದೆನುತೆ ಮಗನಂ ನಡಿಸಿ
ಮಗನ ಕೈವಿಡಿದು ನಿಚ್ಚಣಿಕೆಗೇರಿಸುತವಿರೆ
ಮಗನೇಕೆ ಯಾಸಿದ್ದೆನೆಂದು ಸತಿ ನುಡಿವುತಿರೆ
ಮಗನೊಳಂ ನಿನ್ನೊಳುಂ ತೀರ್ಪುದೇ ಯಿದು ನೋಡ
ಜಗಕೆ ವೈಚಿತ್ರ್ಯವಾಗದೆ ಪೋಗದಿದು ನೋಡ
ಎನುತೆ ತನ್ನಯ ಕುಮಾರನನೇರಿಸುತ್ತಿರಲ್
ಜನವರಿದದೆಲ್ಲವಂ ಮನದಿ ಮರುಗುತ್ತಿರಲ್

ಇರ್ದಿರ್ದು ಕಚ್ಚುಟವನೇಕೆ ತಂದಂ ಭಕ್ತ
ನಿರ್ದಿರ್ದು ಈ ಪುರಕೆ ವ್ಯತ್ಯವಾದಂ ಭಕ್ತ
ನಿಂತಪ್ಪ ಕಂದನಂ ಕಚ್ಚುಟಕೆ ಮಾರಿದಂ
ಎಂತಪ್ಪುದೋ ಅಮರನೀತಿ ಕಲಿಯೇರಿಸಿದ
ನೆನುತಿರಲ್ಪುತ್ರನಂ ಹಲ್ಲೆಯೊಳಗಿರಿಸಲ್ಕೆ
ತೊನೆದು ಹತ್ತಿದ ಹಲ್ಲೆ ಮೇಲೆನಸು ನೆಗೆಯಲ್ಕೆ
ಕಂಡಮರನೀತಿಯು ಬು ಬು ಬೂ ಯೆಂದು ಬೊಬ್ಬಿರಿದು
ಕೊಂಡೆನಿನ್ನೇನು ಸತ್ಯದ ಕೋಂಟೆಯುಂ ಕವರ್ದು
ಎನುತೆ ಬಾಹಸ್ಪಳಿಸಿ ಕುಣಿವುತ್ತಲಿಂತೆಂದು
ನಿನಗೆ ಸಂತೋಷವೇ ಭಕ್ತಯ್ಯ ಪೇಳೆಂದು
ನುಡಿಯೆ ಭಕ್ತ ಕೇಳದೇಕೆ ಇಷ್ಟಾಸುರಂ
ಬಡವರ್ಗೆ ತಕ್ಕುದಲ್ಲಯ್ಯ ನಿನ್ನಾಸುರಂ
ಕೊಂಡುದಂ ಕುಡುವುದಕ್ಕಿನಿತು ಸಂಕಟಮದಕೆ
ಕೊಂಡುದೇ ಇಲ್ಲೆಂದು ನುಡಿಯೆ ಸಾಕಾಯ್ತುಮಗೆ
ಮಗನನೇರಿಸು ಯೆಂದು ಪೇಳ್ದವೇ ನೀನರಿಯೆ
ಮಗುವುತನದಾಟವಲ್ಲವೆ ಪೇಳ್ವುದೆಲ್ಲರಿಯೆ
ಮಗನುವುಂ ವನಿತೆಯುಂ ನೀನುಮೇರಿದೊಡೇನು
ಜಗವುಮೀ ನೆರೆವ ಜನರೆಲ್ಲರೇರಿದೊಡೇನು
ಎಮಗೆಮ್ಮ ಕೌಪಿಂಗೆ ಸರಿಯಾಗೆ ಸಾಲ್ಗೆನಲ್
ಎಮಗೆ ನಿಮ್ಮೊಡನೆ ತರ್ಕವದೇತಕೆಂದೆನಲ್

ಇವರ ನುಡಿ ಪೊಸತೆಮಗೆನುತ್ತೆ ತಮ್ಮರಸಿಯಂ
ಶಿವನೊಲ್ದು ಮೆಚ್ಚಿಕೊಂಡರೆನಿಚ್ಚಣಿಗೆಯಂ
ಏರಲರಿಯದೊಡೆ ತಾನೆತ್ತಿಕೊಂಡೇರುತುಂ
ಮೀರಿ ಶಂಕರನ ಸದ್ಭಕ್ತಿಯಂ ತೋರುತುಂ
ವನಜವಂ ಕಚ್ಚುಟಕೆ ತೂಗಲಿಡುವಂದದಿಂ
ಕನಕಲತೆಯಂ ಕಚ್ಚುಟಕೆ ತೂಗುವಂದದಿಂ
ತ್ರಾಸಿನೊಳಗಿರಿಸಿದಂ ಚನ್ನ ಸುಕುಮಾರಿಯಂ
ಲೇಸೆನುತೆ ಜಗವೆಲ್ಲ ಕೊಂಡಾಡೆ ಧೀರೆಯಂ
ಈಸೆ ಮುನ್ನಿಂದ ಪುನ್ನತವಾದುದಾ ಹಲ್ಲೆ
ಹರಿಸದಿಂದಮರನೀತಿಗಳ್ ಮನದೊಳು ಗೆಲ್ಲೆ
ಅರುತಂ ಬೊಬ್ಬಿಡುತ್ತೀತಂದು ನೋಡುತುಂ
ತೋರನಾಗುತೆ ಚತುರ್ಭುಜನಾಗಲಾಡುತುಂ
ಹೊಸದಿ ವಿಭೂತಿಯಂ ಉದ್ಧೂಳನಂ ಮಾಡಿ
ಸಿರವುರಂ ಹಸ್ತದೊಳ್ ರುದ್ರಾಕ್ಷಿಯಂ ಸೂಡಿ
ಚಂದದ ದುಕೂಲವಂ ತಿಗದುಟ್ಟು ಬಿಗಿದುಟ್ಟು
ನಿಂದ ಜೋಳಾದಿಗಳ್ ಕೈಮುಗಿಯೆ ಪೊರಮಟ್ಟು
ನಡೆತಂದು ರಂಗಮಂಟಪದ ನಡುವುಂ ನಿಂದು
ವೃಷನೆ ಯವಧಾರೆನ್ನ ತಂದೆ ಕೈಕೊಳ್ಳೆಂದು
ಪಟ್ಟಾವಳಿಯ ಪೂಜೆ ಪೂರ್ಣವೆ ಯಿಂದೆನಲ್
ಕಟ್ಟುಗಟ್ಟೆತೆ ಭಕ್ತಕುಲದ ಬರವಿಂದೆನಲ್
ಅಮರನೀತಿಯ ಭಕ್ತಿ ಕೆಯ್ಗಿಂದಿತೇ ದೇವ
ಅಮರನೀತಿಯ ಭಕ್ತಿ ಕಹಿಯಾದುಪೆಲೆ ದೇವ
ಶಿವನನರ್ಚಿಸಿದಕ್ಕೆ ಫಲವಾಯ್ತೆ ಯೆಲೆ ತಂದೆ
ಇವರ ಕೋವಣವಿಂದು ಪೊಳ್ತುಮಾಡಿತೆ ತಂದೆ
ಎಂದೆನುತೆ ಬೀಳ್ಕೊಂಡು ತಿರುಗಿ ಬಂದಂ ಬಂದ
ನಂದಾಹ ಭಕ್ತರ್ಗೆ ಭಾಷೆಗೊಡುತುಂ ನಿಂದ

ಎಲೆ ಗಣಂಗಳಿರ ಬಿನ್ನಪವನವಧರಿಸುವುದು
ಸಲೆ ನಿಮ್ಮ ಡಿಂಗರಿಗನೆಂಬುದಂ ಸಲಿಸುವುದು
ಸಲಹಿದಿರಿ ನೀವೆನ್ನನಿನಿತು ದಿನವಳ್ಕರಿಂ



ಸಲೆ ಭಕ್ತಿವಂತನಾದೇಂ ನಿಮ್ಮ ದೂಸರಿಂ
ನಿಮ್ಮ ಪದರಜವೆ ಬಾಯ್ಪಣ್ಣೆಯಾದುದ ಕೇಳಿ
ನಿಮ್ಮ ಪಾದವೆ ತೊಟ್ಟಿಲಾಗಿ ಬೆಳೆದೇಂ ಕೇಳಿ
ನಿಮ್ಮ ಒರವೇ ಬೆಸನವಾಗಿರ್ಪೆ ನಾನಯ್ಯ
ನಿಮ್ಮ ಬರವೇ ಹರಣವಾಗಿರ್ಪುದೆನಗಯ್ಯ
ನಿಮ್ಮ ಗೋಷ್ಠಿಯ ಸುಖವನಾರ್ಪಡೆವರೆಲೆ ದೇವ
ಬೊಮ್ಮಾದಿಗಳ್ ಬಯಸಿ ಬಾಯೊರೆವರೆಲೆ ದೇವ
ಇಂತಪ್ಪ ಭಾಗ್ಯಮಂ ತಪ್ಪಿಸಿದನೀ ಭಕ್ತ
ನಿಂತಪ್ಪ ಸಮಸುಖವನಡಗಿಸಿದನೀ ಭಕ್ತ
ಅಧಿಕನಾಯಿತ್ತು ಭಕ್ತನ ಕೌಪಿನೊಳಗಂ
ಪದಮಲಂ ಸದ್ಭಕ್ತ ಸತ್ಯನಿಧಿಯೊಳಗಂ
ಸಲ್ವೆನಿವರೊಡನೊಕ್ಕಲಪ್ಪೆ ನಿನ್ನಿರಲಿಲ್ಲ
ಒಲ್ವರೆನ್ನಂ ಪರಸಿ ಕಳಿಪುವುದು ನೀವೆಲ್ಲ
ನಿನ್ನೊಂದನವಧರಿಪುದೆಲೆಲೆಯಪ್ರತಿಮರಿರ
ಎನ್ನ ಶಿಶುವಿನ ನುಡಿ ತೊದಳ್ನುಡಿಯನೆಲೆ ಧೀರರಿರ
ಇನಿತು ದಿನವಾಸಿತ್ತೆನೆಂಬುದೆನಗುಳ್ಳೊಡಂ
ಎನಗೆ ಸತಿಯರ್ಗೆಂದು ಮನದೊಳಗೆ ಬಗೆದೊಡಂ
ಆನೊರ್ಬನೆನ್ನ ಸಿರಿ ಎಂದು ಬಗೆದಿರ್ದೊಡಂ
ಆನೊಂದು ರೂಹೆಂದು ಮನದೊಳಗೆ ಹೊಳೆದೊಡಂ
ಶ್ರೀಗುರುವಿನಾಜ್ಞೆಯಿಂದಲ್ಲದಾಂ ನಡೆದೊಡಂ
ನಾಗಭೂಷಣನ ಭಕ್ತರನೆಳಸದಿರ್ದೊಡಂ
ಮುಂದೆ ಬಂದೊಡ್ಡಿರ್ದುದಿಂತೆನಗಿದೇ ದಿಬ್ಯ
ಇಂದುಧರ ಮೂರ್ತಿಗಳು ನೋಳ್ಪುದಿದೇ ದಿಬ್ಯ

ಎನುತೆ ಬರ್ಪಮರನೀತಿಗಳ ಬರವಂ ಕಂಡು
ಅನುವಾಗಿ ಕಚ್ಚುಟದ ಭಕ್ತಂ ಮನಂಗೊಂಡು
ತರತರದ ಪುಳಕಮಂ ಮೆಯ್ಗರೆದು ನಿಲಿಸುತುಂ
ಇರಲಾರದೇಳ್ವ ಜಡೆಗಳನೊತ್ತಿ ನಿಲಿಸುತುಂ
ಸೊರಮಡುವ ಬಿಸಿಗಣ್ಣನಳವಡಿಸಿ ಮುಚ್ಚುತುಂ
ನರೆ ನೆಗೆವ ತಿಸುಳಮುಮನಲ್ಲಿ ತಗ್ಗೊತ್ತುತುಂ

ಒತ್ತರಿಪ ಮೂರ್ತಿಯಂ ಚಿತ್ತದೊಳ್ ನಿಲಿಸುತುಂ
ಬಿತ್ತರಿಪ ಚೋಹದೊಡನುರೆ ಜಗಳವಾಡುತುಂ
ಬಸವನಂ ಹತ್ತೊತ್ತಿ ತೊಡೆಯೊಳಗಡಂಗಿಸುತೆ
ಬಸವಲ್ಲದೊತ್ತರಿಪ ಕರುಣಮಂ ತಳ್ಗಿಸುತೆ
ಇರಲಮರನೀತಿಗಳ್ನಲಿವುತಲ್ಲಿಗೆ ಬಂದು
ಹರಭಕ್ತ ಕೇಳಯ್ಯ ಎನ್ನ ಬಿನ್ನಪವೆಂದು
ಅಯ್ಯ ನಿನ್ನಯ ಕಚ್ಚುಟಕ್ಕೆ ಸರಿತೂಕಮಂ
ಕೆಯ್ಯ ಮೇಲೆ ತೋರ್ಪೆನವಧರಿಸು ಸತ್ಯಮಂ
ನೋಡು ನೋಡೆಂದು ಭಕ್ತಿಯನಡರುವಂದದಿಂ
ನೋಡು ನೋಡೆಂದು ನಿಷ್ಠೆಯನೇರುವಂದದಿಂ
ಆಡರ್ದೇರಿ ನಿಚ್ಚಣಿಗೆಯಂ ಮೇಲೆಯವತರಿಸಿ
ಮೃಡನ ಶರಣರ್ಗೆ ಕೆಯ್ಮುಗಿದು ಹರನಂ ಸ್ಮರಿಸಿ
ಶಿವನ ಭಕ್ತಿಯ ತೋಲಾಪುರುಷಮುಮನಡರ್ವಂತೆ
ಶಿವಮುಹೂರ್ತದ ಘಳಿಗೆವಟ್ಟಲೊಳ್ಪುಗುವಂತೆ
ಹತ್ತೆ ಸಾರುತ್ತಮರನೀತಿಗಳ್ಮೋಹಿಸಲ್
ಇತ್ತಲೀಶ್ವರನ ಚೋಹಂ ಸಡಿಲಿ ರೂಹಿಸಲ್

ಒಂದು ದೆಸೆಯ ತ್ರಾಸನಮರನೀತಿಗಳೇರೆ
ಯೊಂದು ದೆಸೆಯಾ ತ್ರಾಸನೆಮ್ಮ ಶಂಕರನೇರೆ
ಸಮತೂಕವಾಯಿತ್ತು ಶಂಕರನ ಭಕ್ತಿಯ ತ್ರಾಸು
ಸಮವಾಯ್ತು ದೇವಭಕ್ತರ ತೂಕದಾ ತ್ರಾಸು
ಅಲ್ಲಿ ವೃಷಭಧ್ವಜಮುಮಿಲ್ಲಿ ಭಕ್ತಿಧ್ವಜಂ
ಅಲ್ಲಿ ವರ ದಶಭುಜಮಿಲ್ಲಿ ವರಷಡ್ಭುಜಂ
ಅಲ್ಲಿ ಶಿವಶಂಕರಮುಮಿಲ್ಲಿ ವರ ಕಿಂಕರಂ
ಅಲ್ಲಿ ಕರುಣಾಕರಮುಮಿಲ್ಲಿ ಭಕ್ತ್ಯಾತುರಂ
ಅಲ್ಲಿ ಶಶಿಶೇಖರಮುಮಿಲ್ಲಿ ಸುಖಶೇಖರಂ
ಅಲ್ಲಿ ಗಿರಿಜಾವರಮುಮಿಲ್ಲಿ ಸುಕೃತಾಕರಂ
ಇಂತೊಪ್ಪುತಿರ್ದವಿರ್ದೆಸೆಗಳಾ ತ್ರಾಸುಗಳ್
ಸಂತತಂ ಧರೆ ಪೊಗಳಲೀಶ್ವರನ ಲೇಸುಗಳ್



ಸುರಿದವಿರ್ಬರ ಮೇಲೆ ಪೂಮಳೆಗಳೊಪ್ಪದಿಂ
ಪರಿದವೇಣ್ದೆಸೆಗೆ ಭೇರೀರವಂ ಕೊರ್ವಿನಿಂ
ಮಂಗಳ ಮೃದಂಗ ತೂರ್ಯತ್ರಯಂಗಳ್ಮಿಗಳೆ
ಸಂಗಡಿಸಿ ಚಂಡ ಕೀರ್ತಿಗಳಳ್ಕರಿಂ ಪೊಗಳೆ
ಭಕ್ತಜನಸುರಧೇನು ಭಕ್ತವತ್ಸಳನೆಂದು
ಭಕ್ತಜನಕಲ್ಪತರು ಭಕ್ತಬಾಂಧವನೆಂದು
ಬಿರಿದೆತ್ತಿ ಕರೆವ ಕಹಳೆಗಳ ಘನ ರವದೊಳಗೆ
ಅರರೆ ಕೋಟಾಕೋಟಿ ರವಿಕಿರಣದಿಂ ತೊಳಗೆ

ಆ ಸಮಯದೊಳ್ ದೇವಗಣವೃಂದವೈತಂದು
ಭಾಸುರದ ಪೊಸ ವಿಮಾನಂಗಳಿಂದೈತಂದು
ಅಲ್ಲಿ ನಂದೀಶನಂ ನೋಡಿ ಸರ್ವೇಶ್ವರಂ
ಸಲ್ಲೀಲೆವೆತ್ತೆಂದನಂದು ಸಕಲೇಶ್ವರಂ
ಕೇಳಯ್ಯ ನಂದೀಶ ಧಾರಿಣಿಗೆ ಕೌತುಕಂ
ಹೇಳಲಳವಲ್ಲ ಎಮಗೊಳಗಾಗಿ ಕೌತುಕಂ
ಎನಗೆ ಸಮತೂಕಮಂ ತೂಗಿ ನಿಂದವರುಂಟೆ
ಎನಗೆ ಧನಸತಿಸುತರನಿಕ್ಕಿ ತೂಗಿದರುಂಟೆ
ಎನ್ನ ಘಾಸಿಗೆ ನಿಲುವಡಮರನೀತಿಯೆ ನಿಲುವ
ಎನ್ನ ವೇಷವನೊಲಿವಡಮರನೀತಿಯೆ ಒಲಿವ
ಇಳೆಗೆ ಪಟ್ಟಾವಳಿಯನುಡಿಸಿದವರಿಂತುಂಟೆ
ತಿಳಿವಡೆನ್ನಯ ಪೂಜೆಗಳವಡಿಸಿದವರುಂಟೆ
ಎನ್ನ ತೂಕಕ್ಕೆ ಕಟ್ಟಣೆಯಪ್ಪರಿಂತುಂಟೆ
ಎನ್ನೊರೆಗೆ ಸರಿಮಚ್ಚವಾಗಿ ತೋರಿದರುಂಟೆ
ದಾವುರೆ ಅಮರನೀತಿ ಪೂತುರೆ ಅಮರನೀತಿ
ದೇವುರೆ ಅಮರನೀತಿ ಭಾಪುರೆ ಅಮರನೀತಿ
ಎಂದು ನಂದೀಶಂಗೆ ಹೇಳುತುಂ ಹಿಗ್ಗುತುಂ
ಬಂದ ಗಣವೃಂದಕ್ಕೆ ನಲವಿಂದೆ ತೋರುತುಂ
ತನ್ನುಮಂ ಭಕ್ತನಂ ಸರಿಸರಿಯೆಂದು ತೋರುತುಂ
ಇನ್ನಿದೆನ್ನಂಬರಂ ಶಿವನೊಲಿದು ಸಾರಿದಂ
ಎಂಬಂತೆ ಸಮತೂಕದಿಂದಿರ್ದನೀಶ್ವರಂ

ಅಂಬರಜನಕ್ಕೆ ತೋರಲೆಳ್ಸಲ್ಕೆ ಶಂಕರಂ
ಅಮರನೀತಿಗೆ ವಿಮಾನಂ ಬೀಡ ನಂದೀಶ
ಸಮತೂಕವಾಗಿರ್ದುದೇ ಸಾಲ್ಗೆ ನಂದೀಶ
ಇಲ್ಲಿ ಮರ್ತ್ಯಕ್ಕೆ ಸಮವೆಂಬುದಂ ತೋರುವೆಂ
ಅಲ್ಲಿ ಕೈಲಾಸಕ್ಕೆ ಒಲ್ಮೆಯಿಂ ಸಾರುವೆಂ
ಎನುತೆ ಸಮತೂಕದ ತ್ರಾಸು ಸಹಿತಂ ನೆಗೆದು
ಜನವೆಲ್ಲವುಂ ನೋಡೆ ಲೋಕಂಗಳಂ ಕಳೆದು
ಬಂದು ಕೈಲಾಸಮಂ ಪೊಕ್ಕು ಸಂತೋಷದಿಂ
ನಿಂದು ಗುಡಿಗಟ್ಟಿಸುತ್ತೊಲವಿಂದೆ ರಾಗದಿಂ
ಅಮರನೀತಿಗೆ ಸತಿಗೆ ತನಯಂಗೆ ಕರುಣದಿಂ
ಕ್ರಮದಿಂದೆ ಗಣಪದವನಿತ್ತು ಸಂತೋಷದಿಂ
ಮತ್ತೆ ಮತ್ತವರನಾನಂದದಿಂ ನೋಡುತುಂ
ಮತ್ತೆ ತಣಿಯದೆ ನೋಡಿ ನೋಡಿ ಕೊಂಡಾಡುತುಂ
ಕೈಲಾಸದರಮನೆಯೊಳಿಂದುಧರನೊಪ್ಪಿದಂ
ಶೈಲಜೆಗೆ ತೋರುತುಂ ಪುರಮಥನನೊಪ್ಪಿದಂ
ದೇವಗಣವೃಂದದೊಳಗಿಂದುಧರನೊಪ್ಪಿದಂ
ದೇವಗಣನಿವಹದೊಳಗಪ್ರತಿಮನೊಪ್ಪಿದಂ
ಅಹಾ ಶಿವನೊಪ್ಪಿದಂ ಅಹಾ ಹರನೊಪ್ಪಿದಂ
ಅಹಾ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂದ ||
ಧರೆ ಪೊಗಳೆ ಕಾಣಿಯಂ ಬೀ
ಸರವಾಗದ ತೆರದಿ ಭಕ್ತಿಯಂ ತೂಗುತ ನೀ ||
ನೆರೆದಮರನೀತಿಗಳ ಕಿಂ
ಕರ ನಾಂ ಕರುಣಿಪುದು ಹಂಪೆಯ ವಿರೂಪಾಕ್ಷಾ ||